15/-

# ಉಪದೇಶಮಾಲಿಕೆ

ಓಂ


ಬರೆದವರು

**ಶ್ರೀ ಶ್ರೀ ಜ್ಞಾನಾನಂದೇನ್ದ್ರ ಸರಸ್ವತಿ ಸ್ವಾಮಿಗಳು**

(ಪೂರ್ವಾಶ್ರಮದ ಎಸ್. ವಿಟ್ಠಲ ಶಾಸ್ತ್ರಿಗಳು
ವೇದಾನ್ತ ಶಿರೋಮಣಿ, ವೇದಾನ್ತ ವಿಶಾರದ
ವಿದ್ಯಾವಾಚಸ್ಪತಿ, ಆಸ್ಥಾನ ವಿದ್ವಾನ್)



ಪ್ರಕಾಶಕರು

**ಶ್ರೀ ಸಚ್ಚಿದಾನಂದೇನ್ದ್ರ ಸ್ವಾಮೀಜೀ**

ಪಬ್ಲಿಕ್ ಚಾರಿಟಬಲ್ ಟ್ರಸ್ಟ್
ಹಲಗೈನಹುಂಡಿ
ಮೈಸೂರು



ಶ್ರೀ ಶ್ರೀ ಜ್ಞಾನಾನಂದೇನ್ದ್ರ ಸರಸ್ವತಿ ಸ್ವಾಮಿಗಳು

# ಉಪದೇಶಮಾಲಿಕೆ

(ಶಂಕರಸಿದ್ಧಾಂತದ ತತ್ತ್ವ ಮತ್ತು ಸಾಧನಗಳ
ಸಾರವನ್ನು ತಿಳಿಸುವ ಪ್ರಬಂಧ)

ಬರೆದವರು
ಶ್ರೀ ಶ್ರೀ ಜ್ಞಾನಾನಂದೇನ್ದ್ರಸರಸ್ವತಿ ಸ್ವಾಮಿಗಳು
(ಪೂರ್ವಾಶ್ರಮದ ಎಸ್. ವಿಟ್ಠಲಶಾಸ್ತ್ರಿಗಳು
ವೇದಾನ್ತ ಶಿರೋಮಣಿ, ವೇದಾನ್ತವಿಶಾರದ,
ವಿದ್ಯಾವಾಚಸ್ಪತಿ, ಆಸ್ಥಾನವಿದ್ವಾನ್)

ಪ್ರಕಾಶಕರು
ಶ್ರೀ ಸಚ್ಚಿದಾನಂದೇನ್ದ್ರ ಸ್ವಾಮೀಜೀ, ಪಬ್ಲಿಕ್‌ಚಾರಿಟಬಲ್ ಟ್ರಸ್ಟ್
ಹಲಗೈನಹುಂಡಿ
ಮೈಸೂರು

ಮೊದಲನೆಯ ಮುದ್ರಣ 1954
ಎರಡನೆಯ ಮುದ್ರಣ 1999

ಡಿ.ಟಿ.ಪಿ.
ಶಶಿಗ್ರಾಫಿಕ್ಸ್
ಚಾಮರಾಜಪುರಂ
ಮೈಸೂರು
ಫೋನ್ 445490

ಮುದ್ರಣಕಾರರು
ಕಾಂತಿ ಪ್ರಿಟಿಂಗ್ ಪ್ರೆಸ್
60/5 ಬ್ಯೂಗಲ್ ರಾಕ್ ರಸ್ತೆ
ಬಸವನಗುಡಿ
ಬೆಂಗಳೂರು 560 004
ಫೋನ್ 6679183

ಪುಸ್ತಕಗಳು ದೊರೆಯುವ ಸ್ಥಳ
೧. ಶ್ರೀ ಸಚ್ಚಿದಾನಂದ ಅಧ್ಯಾತ್ಮ ಕೇಂದ್ರ
ಹಲಗೈನ ಹುಂಡಿ
ಮೈಸೂರು ೧೦.

೨. ಅಧ್ಯಾತ್ಮ ಪ್ರಕಾಶಕಾರ್ಯಾಲಯ
(ಮೈಸೂರು ಶಾಖೆ)
ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನದ ಆವರಣ
ವಿ.ವಿ. ಮೊಹಲ್ಲಾ, ಮೈಸೂರು ೨.

೩. ಅಧ್ಯಾತ್ಮ ಪ್ರಕಾಶ ಕಾರ್ಯಾಲಯ
ಹೊಳೆನರಸೀಪುರ, ಹಾಸನ ಜಿಲ್ಲೆ 573 124.

# ವಿಷಯಾನುಕ್ರಮಣಿಕೆ


| | |
|---|---|
| ಮುನ್ನುಡಿ | ಪ್ರ೬ |
| ಪೀಠಿಕೆ | |
| ೧. ಬ್ರಹ್ಮಜ್ಞಾನದಿಂದ ಪರಪ್ರಾಪ್ತಿ | ೧ |
| ೨. ಕರ್ಮದ ಫಲವು ಅನಿತ್ಯವಾದದ್ದು | ೨ |
| ೩. ಜ್ಞಾನಾಜ್ಞಾನಗಳ ಸ್ವರೂಪ | ೫ |
| ೪. ಆತ್ಮವಿಚಾರವನ್ನು ಮಾಡಬೇಕು | ೬ |
| ೫. ಆತ್ಮನೆಂದರೆ ಯಾರು? | ೭ |
| ೬. ಆತ್ಮಶಬ್ದದ ಅರ್ಥವು ಬ್ರಹ್ಮ | ೮ |
| ೭. ಪಂಚಕೋಶವಿವೇಕದಿಂದ ಆತ್ಮಸ್ವರೂಪದ ಜ್ಞಾನ | ೧೦ |
| ೮. ಕರ್ಮವು ಅಜ್ಞಾನವನ್ನು ಕಳೆಯಲಾರದು | ೧೩ |
| ೯. ಬ್ರಹ್ಮ ವಿಚಾರಕ್ಕೆ ಅಧಿಕಾರಿಯ್ಯಾರು? | ೧೪ |
| ೧೦. ಯಾವ ದಾನವನ್ನಾದರೂ ದೇಶಕಾಲ ಪಾತ್ರವನ್ನು ನೋಡಿಯೋ ಮಾಡಬೇಕು | ೨೦ |
| ೧೧. ರಾಜಸ ತಾಮಸ ದಾನವನ್ನು ಬಿಡಬೇಕು | ೨೨ |
| ೧೨. ಕರ್ಮವನ್ನು ಮಾಡಿದರೇ ಫಲ | ೨೪ |
| ೧೩. ಶಾಸ್ತ್ರವಿಧಿಯನ್ನು ಬಿಟ್ಟು ಶ್ರದ್ಧೆಯಿಂದ ಮಾಡಿದ ಕರ್ಮದ ಫಲ | ೨೬ |
| ೧೪. ಈಶ್ವರನು ಜೀವರುಗಳನ್ನು ಸಂಸಾರಕ್ಕೆ ಹಾಕುತ್ತಾನೆಯೇ? | ೨೮ |
| ೧೫. ವಿಷಯ ಸುಖಗಳ ಯೋಗ್ಯತೆ | ೩೩ |
| ೧೬. ವಿಷಯಗಳ ಮೇಲಿನ ಆಸೆಯನ್ನು ತಪ್ಪಿಸಿಕೊಳ್ಳಲು ಏನುಮಾಡಬೇಕು? | ೩೪ |
| ೧೭. ಮನಸ್ಸನ್ನು ಹೇಗೆ ಜಯಿಸುವದು? | ೩೬ |
| ೧೮. ಪ್ರಪಂಚವನ್ನು ಸ್ವಪ್ನಸಮವೆಂದು ತಿಳಿಯಬೇಕು | ೩೯ |

೧೯. ಸುಷುಪ್ತಿಯನ್ನು ನೋಡಬೇಕು ೪೬
೨೦. ಜ್ಞಾನದ ಸ್ವರೂಪ ೫೫
೨೧. ಜ್ಞಾನದ ಫಲವು ಜ್ಞಾನ ಸಮಕಾಲಿಕವಾದದ್ದು ೫೮
೨೨. ಬ್ರಹ್ಮಜ್ಞಾನಿಗೆ ಪ್ರಾರಬ್ಧಕರ್ಮವುಂಟೆ? ೬೪
೨೩. ಬ್ರಹ್ಮಜ್ಞಾನಿಗೆ ಪ್ರಪಂಚವು ಕಾಣುವುದಿಲ್ಲವೆ? ೬೬
೨೪. ಜ್ಞಾನಿಯ ವ್ಯವಹಾರ ೬೭
೨೫. ಆತ್ಮಾನಾತ್ಮರ ಇತರೇತರಾಧ್ಯಾಸಕ್ಕೆ ಉಪಾದಾನ
ಕಾರಣವಿದೆಯೆ? ೬೯
೨೬. ಸರ್ವರೂ ಬ್ರಹ್ಮಸ್ವರೂಪರೇ ಆಗಿದ್ದರೂ ನಾವು
ಬ್ರಹ್ಮಸ್ವರೂಪರೇ ಆಗಿದ್ದೇವೆ ಏಕೆ ತಿಳಿಯುವದಿಲ್ಲ? ೭೦
೨೭. ಕರ್ಮಯೋಗವನ್ನಾಚರಿಸಬೇಕು ೭೩
೨೮. ಕರ್ಮಯೋಗವನ್ನು ಮಾಡಬೇಕು ೮೫
೨೯. ಶ್ರವಣ ಮನನ ನಿದಿಧ್ಯಾಸನಗಳನ್ನು ಮಾಡಬೇಕು ೯೩

# ಮುನ್ನುಡಿ

ಉಪದೇಶ ಮಾಲಿಕೆ ಎಂಬ ಈ ಗ್ರಂಥವು ಮೊದಲ ಬಾರಿಗೆ ೧೯೫೪ರಲ್ಲಿ ಪ್ರಕಟವಾಯಿತು. ಆಗ ಚಿಕ್ಕಮಗಳೂರು ಕಾಫಿ ಪ್ಲಾಂಟರ್ ಮ.ರಾ. ಮಂಜುನಾಥ ಅಯ್ಯರ್‌ರವರು ಇದನ್ನು ಪ್ರಕಟಿಸಿದ್ದರು. ಇದರ ಪ್ರತಿಗಳೆಲ್ಲವು ಮುಗಿದುಹೋದದ್ದರಿಂದ ಈಗ ಮತ್ತೊಮ್ಮೆ ಪುನಃ ಮುದ್ರಿಸಿ ಹೊರತರಲಾಗಿದೆ.

ಸರ್ವರಿಗೂ ಪ್ರಯೋಜನಕರವಾದ ಇಂತಹ ಪುಸ್ತಕವೊಂದು ಇದೆಯೆಂದು, ಅದರ ಪ್ರತಿಯೊಂದನ್ನು ನೀಡಿದ ಮೈಸೂರಿನ ಪ್ರಖ್ಯಾತ ವೇದಾಂತ ಪಂಡಿತರಾದ ಶ್ರೀ ಬಿ. ವೆಂಕಟರಾಮಶರ್ಮರಿಗೂ ಮತ್ತು ಪುಸ್ತಕದ ಪುನಃ ಮುದ್ರಣಕ್ಕೆ ಅನುಮತಿ ನೀಡಿದ ದಿವಂಗತ ಟಿ. ಮಂಜುನಾಥ ಅಯ್ಯರ್‌ರವರ ಪುತ್ರ ಡಾ. ಟಿ.ಎಮ್. ಗೋಪಾಲ್‌ರವರಿಗೂ ನಮ್ಮ ಅಭಿನಂದನೆಗಳು.

ಈ ಗ್ರಂಥದ ಪ್ರಕಟಣೆಗೆ ಧನಸಹಾಯ ಮಾಡಿದ ಎಲ್ಲ ಮಹನೀಯರು, ಮಹಿಳೆಯರಿಗೂ ಟ್ರಸ್ಟಿನ ಪರವಾಗಿ ಕೃತಜ್ಞತೆ ನೀಡುತ್ತಿದ್ದೇವೆ.

ಇತಿ

ಶ್ರೀ ಸಚ್ಚಿದಾನಂದೇನ್ದ್ರ ಟ್ರಸ್ಟಿನ ಧರ್ಮದರ್ಶಿಗಳು

# ಪೀಠಿಕೆ



(ಮೊದಲನೆಯ ಮುದ್ರಣದಿಂದ ಸಂಗ್ರಹಿಸಲ್ಪಟ್ಟಿದ್ದು)

ಕಾಫೀ ಪ್ಲಾಂಟರ್ ಶ್ರೀಯುತ ಮಂಜುನಾಥಯ್ಯರ್‌ರವರು ನನ್ನಲ್ಲಿ ಶ್ರೀಮತ್ ಶಂಕರ ಭಗವತ್ಪಾದರ ಉಪನಿಷತ್‌ಭಾಷ್ಯಗಳನ್ನು ಓದುವ ಸಮಯದಲ್ಲಿ "ಶ್ರೀ ಶಿವಾನಂದ ಸ್ವಾಮಿಗಳು ಉಪನ್ಯಾಸ ಕಾಲದಲ್ಲಿ ಈ ವಿಷಯವನ್ನು ಹೇಳಿದ್ದರು. ಅವರು ಮಾಡಿದ್ದ ಉಪನ್ಯಾಸಗಳು ಸಾರ್ವಕಾಲಿಕವಾಗಿದ್ದವು, ಸಾರ್ವಜನಿಕವಾಗಿದ್ದವು. ಅವುಗಳನ್ನು ಯಾರಾದರೂ ಬರೆದಿಟ್ಟಿದ್ದರೆ ಅಚ್ಚು ಮಾಡಿಸುತ್ತಿದ್ದೆ." ಎಂದು ಹೇಳುತ್ತಿದ್ದರು.

ಬ್ರಹ್ಮೀಭೂತರಾದ ಶ್ರೀ ಶಿವಾನಂದ ಸರಸ್ವತೀ ಸ್ವಾಮಿಗಳವರು ಸಿರಸಿ ತಾಲ್ಲೂಕು ಶೀಗೇ ಹಳ್ಳಿಯಲ್ಲಿರುವ ಶ್ರೀ ಪರಮಾನಂದ ಮಠದ ಮಠಾಧಿಪತಿಗಳಾಗಿದ್ದರು. ಶ್ರೀಗಳು ಯಾವಾಗಲೂ ತತ್ತ್ವ ವಿಚಾರ ಮತ್ತು ತತ್ತ್ವೋಪದೇಶದಲ್ಲಿ ನಿರತರಾಗಿದ್ದ ಯೋಗಿವರೇಣ್ಯರು. ಶ್ರೀ ಅಯ್ಯರ್ ರವರು ಒಂದು ದಿನ ಶೀಗೇ ಹಳ್ಳಿಗೆ ಹೋದಾಗ ವಿಚಾರಿಸಿದ್ದಲ್ಲಿ ವೇ|| ಬ್ರ|| ಶ್ರೀ|| ಹಕ್ಕಿರಾಮಭಟ್ಟರೂ ಮತ್ತು ವೇ|| ಬ್ರ|| ಶ್ರೀ|| ಕಪ್ಪೆಗಣೇಶ ಭಟ್ಟರೂ, "ನಮ್ಮಲ್ಲಿ ಶ್ರೀ ಶಿವಾನಂದ ಸ್ವಾಮಿಗಳು ಉಪದೇಶಿಸುತ್ತಿದ್ದ ಕೆಲವು ಸೂತ್ರ ವಾಕ್ಯಗಳು, ಉದಾಹರಣೆಯ ಕಥೆಗಳು ಇವೆ," ಎಂದು ಹೇಳಿ ಅವರಿಗೆ ಕೊಟ್ಟರಂತೆ. ಶ್ರೀ ಅಯ್ಯರ್‌ರವರು ಇವುಗಳನ್ನು ತೆಗೆದುಕೊಂಡು ಬಂದು ನನ್ನ ವಶಕ್ಕೆ ಕೊಟ್ಟು "ಇವುಗಳನ್ನು ಉಪಯೋಗಿಸಿ ಒಂದು ಉಪದೇಶ ಮಾಲಿಕೆಯನ್ನು ಬರೆದುಕೊಡಿ" ಎಂದು ನನ್ನನ್ನು ಪ್ರೋತ್ಸಾಹಿಸಿದರು. ಅದರಂತೆ ನಾನು ನನ್ನ ಗುರುಗಳಾದ ಹೊಳೆನರಸೀಪುರದಲ್ಲಿರುವ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯರಾದ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳೂ ಮತ್ತು ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರೂ ನನಗೆ ಉಪದೇಶಿಸಿದ ಮಾರ್ಗವನ್ನನುಸರಿಸಿ ಸರ್ವರಿಗೂ ಉಪಯೋಗವಾಗಲೆಂಬ ಉದ್ದೇಶದಿಂದ ಈ ಉಪದೇಶ ಮಾಲಿಕೆಯನ್ನು ಬರೆದಿರುತ್ತೇನೆ. ಇದನ್ನು ಸಮಾಧಾನದಿಂದ ಓದಿ, ಮನನ ಮಾಡಿ, ಇದರಲ್ಲಿ

ಹೇಳಿರುವ ಅಂಶಗಳನ್ನು ತಿಳಿದು ಅದರಂತೆ ನಡೆಯುವವರಿಗೂ, ಇದರಲ್ಲಿ ಪ್ರತಿಪಾದಿಸಿರುವ ತತ್ತ್ವ ಸ್ವರೂಪವನ್ನು ತಿಳಿಯುವವರಿಗೂ, ಇದನ್ನು ಬರೆಯಲು ಪ್ರೋತ್ಸಾಹಿಸಿದ ಚಿಕ್ಕಮಗಳೂರು ಕಾಫಿ ಪ್ಲಾಂಟರ್ ಶ್ರೀಯುತ ಟಿ. ಮಂಜುನಾಥಯ್ಯರ್, ಬಿ.ಎ., ಇವರಿಗೂ ಕೆಲವು ಸೂತ್ರವಾಕ್ಯಗಳನ್ನು ಕೆಲವು ದೃಷ್ಟಾಂತ ಕಥೆಗಳನ್ನೂ ಒದಗಿಸಿ ಕೊಟ್ಟ, ವೇ|| ಬ್ರ|| ಶ್ರೀ|| ಹಕ್ಕಿ ರಾಮಭಟ್ಟರಿಗೂ ಮತ್ತು ವೇ|| ಬ್ರ|| ಶ್ರೀ|| ಕಪ್ಪೆ ಗಣೇಶ ಭಟ್ಟರಿಗೂ ಶ್ರೀ ಶಿವಾನಂದ ಸ್ವಾಮಿಗಳವರ ಪೂರ್ಣಾನುಗ್ರಹವು ದೊರೆಯಲೆಂದು ನಾನು ಹೃತ್ಪೂರ್ವಕವಾಗಿ ಕೋರುತ್ತೇನೆ.

ಜಯಸಂವತ್ಸರದ
ವೈಶಾಖ ಶು|| ೫|| ಶುಕ್ರವಾರ

ಎಸ್. ವಿಟ್ಠಲ ಶಾಸ್ತ್ರಿ
ಮೈಸೂರು

ಯೋಗಿವರ್ಯಂ ತಪೋನಿಷ್ಠಂ ಭಕ್ತಾನಾಮೀಪ್ಸಿತಪ್ರದಮ್ ।
ಜ್ಞಾನವೈರಾಗ್ಯ ಸಮ್ಪನ್ನಂ ಶಿವಾನನ್ದಂ ನಮಾಮ್ಯಹಮ್ ॥೧॥
ಯಮನಿಯಮಸಮಾಧಿಧ್ಯಾನಯೋಗೈಕನಿಷ್ಠಂ
ವಿಬುಧಜನಶರಣ್ಯಂ ತತ್ತ್ವ ಬೋಧೈಕಕಾರ್ಯಮ್ ।
ಯತಿನಿವಹವರೇಣ್ಯಂ ಶ್ರೀ ಶಿವಾನನ್ದವರ್ಯಂ
ದುರಿತತಿಮರಭಾನುಂ ಭಾವಯೇ ಭಾವಗಮ್ಯಮ್ ॥೨॥

## ೧ ಬ್ರಹ್ಮಜ್ಞಾನದಿಂದ ಪರಪ್ರಾಪ್ತಿ

ಮನುಷ್ಯರೆಲ್ಲರೂ ಹೆಚ್ಚಿನ ಸುಖವನ್ನೇ ಬಯಸುತ್ತಿರುವದೂ ದುಃಖವನ್ನು ಬಯಸದಿರುವದೂ ಸರ್ವರ ಅನುಭವದಲ್ಲಿರತಕ್ಕ ವಿಷಯವಾಗಿದೆ. ಇವರು ನಿಜವಾದ ಸುಖವನ್ನು ಪಡೆಯಲು ಸಾಧನಯಾವುದು? -ಎಂಬುದನ್ನು ತಿಳಿಯದೇ, ವಿಷಯಗಳಿಂದ ಸುಖ ಬರುತ್ತದೆಯೆಂದು ತಪ್ಪಾಗಿ ತಿಳಿದು ವಿಷಯರಾಶಿಯನ್ನು ಕೂಡಿಹಾಕುವದರಲ್ಲಿಯೇ ತಮ್ಮ ಆಯಸ್ಸನ್ನೆಲ್ಲವನ್ನೂ ಕಳೆದುಬಿಡುತ್ತಾರೆ. ಇಂತಹ ಜನರಿಗೆ ಕನಿಕರದಿಂದ ವೇದವು "ಬ್ರಹ್ಮವಿದಾಪ್ನೋತಿಪರವಮ್"ಬ್ರಹ್ಮ ಜ್ಞಾನವನ್ನು ಪಡೆದವನು ನಿರತಿಶಯಾನನ್ದರೂಪನಾದ ಪರಬ್ರಹ್ಮವನ್ನು ಪಡೆಯುತ್ತಾನೆ - ಎಂದು ಉಪದೇಶಿಸುತ್ತದೆ. ಇದೇ ಅಭಿಪ್ರಾಯವನ್ನು ಸ್ಮೃತಿಯೂ "ಯಜ್ಞಾತ್ವಾ ಅಮೃತಮಶ್ನುತೇ" ಯಾವ ಬ್ರಹ್ಮವನ್ನು ಅರಿತು ಅಮೃತವನ್ನು ಅನುಭವಿಸುತ್ತಾನೆ.-ಎಂಬ ವಾಕ್ಯದಿಂದ ಬೋಧಿಸುತ್ತದೆ. ಈ ಶ್ರುತಿಸ್ಮೃತಿಗಳ ವಾಕ್ಯದಿಂದ ಬ್ರಹ್ಮ ಜ್ಞಾನವೇ ನಿರತಿಶಯಾನವನ್ನು ಪಡೆಯಲು ಕಾರಣ ಎಂಬುದು ಸ್ಪಷ್ಟವಾಗಿ ತಿಳಿಯಬರುತ್ತದೆ. ಬೇರೊಬ್ಬ ಐಶ್ವರ್ಯವಂತನನ್ನು "ಇವನು ಐಶ್ವರ್ಯವಂತ" ನೆಂದು ತಿಳಿದ ಮಾತ್ರದಿಂದ ತಾನು ಐಶ್ವರ್ಯವಂತನಾಗುವದಿಲ್ಲ. ಹೀಗೇಯೇ ಬ್ರಹ್ಮವು ತನಗಿಂತ ಬೇರೆಯದಾಗಿದ್ದರೆ ತಾನು ಅದನ್ನು 'ನಿತ್ಯವಾದದ್ದನ್ನಾಗಿಯೂ, ಜನನಮರಣರಹಿತವಾದದ್ದನ್ನಾಗಿಯೂ, ಪರವಾದದ್ದನ್ನಾಗಿಯೂ, ತಿಳಿದ

ಮಾತ್ರದಿಂದ ತಾನು ನಿತ್ಯನೂ, ಜನನ ಮರಣರಹಿತನೂ, ಪರನೂ ಆಗಲಾರನು. ಇಲ್ಲಿ ಜ್ಞಾನದಿಂದ ಪರಪ್ರಾಪ್ತಿಯನ್ನು ಹೇಳಿದೆ. ಆದುದರಿಂದ ತಾನೇ ಬ್ರಹ್ಮಸ್ವರೂಪನಾಗಿದ್ದವನು ಅದನ್ನು ತಿಳಿಯದೇ ಜೀವನೆಂದು ತಿಳಿದು ದುಃಖಪಡುತ್ತಿದ್ದು ಜ್ಞಾನದಿಂದ ಬ್ರಹ್ಮಸ್ವರೂಪನಾಗುತ್ತಾನೆ, ಎಂದು ಹೇಳಿದೆ. - ಎಂದು ತಿಳಿದುಬರುತ್ತದೆ. ಆದುದರಿಂದ ಆತ್ಮಸ್ವರೂಪವನ್ನು ವಿಮರ್ಶಿಸುವದೇ ಬ್ರಹ್ಮವಿಚಾರವೆಂಬುದೂ, ವಿಚಾರದಿಂದ ತಾನೇ ಬ್ರಹ್ಮನೆಂಬ ಅನುಭವ ರೂಪದ ತಿಳಿವಳಿಕೆಯೇ ಬ್ರಹ್ಮಜ್ಞಾನವೆಂಬುದೂ, ಬ್ರಹ್ಮಜ್ಞಾನದಿಂದ ಪರಪ್ರಾಪ್ತಿಯೆಂಬುದೂ ಸಿದ್ಧವಾಗುತ್ತದೆ.

## ೨ ಕರ್ಮದ ಫಲವು ಅನಿತ್ಯವಾದದ್ದು

ಕರ್ಮಗಳನ್ನು ಮಾಡಿ ಸುಖವನ್ನು ಪಡೆಯುವದು ಅನುಭವದಲ್ಲಿದೆ. ಭೂಮಿಯನ್ನು ಉತ್ತುಬಿತ್ತಿ ಪೈರನ್ನು ಬೆಳೆದು ತಿಂದು ಸುಖವನ್ನು ಪಡೆಯುತ್ತೇವೆ. ಹತ್ತಿಯನ್ನು ಬೆಳೆದು ಬಟ್ಟೆಯನ್ನು ಮಾಡಿಕೊಂಡು ಉಟ್ಟು ಹೊದ್ದು ಸುಖವನ್ನು ಪಡೆಯುತ್ತೇವೆ. ಹೀಗೆಯೇ ಶಾಸ್ತ್ರಗಳಲ್ಲಿ ಹೇಳಿರುವಂತೆ ಯಜ್ಞ, ದಾನ, ತಪಸ್ಸು -ಮೊದಲಾದ ಕರ್ಮಗಳನ್ನು ಮಾಡಿ ಅವುಗಳ ಫಲವಾದ ಸ್ವರ್ಗಾದಿಸುಖವನ್ನು ಇಹಪರ ಲೋಕಗಳಲ್ಲಿ ಅನುಭವಿಸುತ್ತೇವೆ. ಹೀಗೆ ಕರ್ಮವನ್ನು ಮಾಡಿ ಸುಖವನ್ನು ಹೊಂದುವದು ಸರ್ವರ ಅನುಭವದಲ್ಲಿಯೂ ಇರುತ್ತದೆ. ಮತ್ತು ಕರ್ಮವನ್ನು ಮಾಡಲು ಕರ್ಮದ ಸಾಧನದ, ಫಲದ, ಮತ್ತು ಕರ್ತೃ-ಮುಂತಾದವನ ಜ್ಞಾನವೂ ಬೇಕು. ಅವುಗಳನ್ನು ತಿಳಿಯದೇ ಕರ್ಮವನ್ನು ಮಾಡಲು ಸಾಧ್ಯವಾಗುವುದಿಲ್ಲ. ಆದುದರಿಂದ ಕರ್ಮವನ್ನು ಮಾಡಲು ತದಂಗವಾದ ಜ್ಞಾನವೂ ಬೇಕು; ಆದರೆ ಆ ಬರಿಯ ಜ್ಞಾನದಿಂದ ಫಲವು ಬರುವುದಿಲ್ಲ, ಕರ್ಮದ ಅಂಗವಾಗಿ ಆ ಜ್ಞಾನವು ಪ್ರಯೋಜನಕಾರಿಯೇ ಹೊರ್ತು ಸಾಕ್ಷಾತ್ತಾಗಿ ಫಲದಾಯಕವಲ್ಲ. ಉಪಾಸನೆಯು ಉಪಾಸ್ಯವಾದ ದೇವತೆಯನ್ನು ಧ್ಯಾನಮಾಡುವದೆಂಬ ಮಾನಸ ಕ್ರಿಯಾರೂಪವಾಗಿರುವದರಿಂದ ಫಲವನ್ನು ಕೊಡುತ್ತದೆ. ಸಿದ್ಧವಸ್ತುವಿನ

ಜ್ಞಾನವು ಸಾಕ್ಷಾತ್ತಾಗಿ ಫಲದಾಯಕವಾಗಿಲ್ಲ, ಕ್ರಿಯಾಂಗವಾಗಿಯೇ ಫಲದಾಯಕವಾಗುತ್ತದೆ.-ಎಂದು ಆಕ್ಷೇಪಿಸಿದರೆ ಎಲ್ಲಿ ಫಲವು ಸಿದ್ಧವಾಗಿದ್ದರೂ ಅಜ್ಞಾತವಾಗಿರುತ್ತದೆಯೋ ಮತ್ತು ವಿಪರೀತವಾಗಿ ತಿಳಿಯಲ್ಪಟ್ಟಿರುತ್ತದೆಯೋ ಅಲ್ಲಿ ಜ್ಞಾನದಿಂದ ಫಲವು ಬರುತ್ತದೆ ಎಂಬುದು ಹೊಂದುತ್ತದೆ. ಆ ಫಲವು ಮೊದಲೇ ಸಿದ್ಧವಾದದ್ದಾದ್ದರಿಂದ ನಿತ್ಯವೂ ಆಗಿರುತ್ತದೆ;ಆದರೆ ಯಜ್ಞಾದಿರೂಪವಾದ ಕ್ರಿಯೆಯಿಂದಾಗಲೀ, ಉಪಾಸನಾರೂಪವಾದ ಮಾನಸಕ್ರಿಯೆಯಿಂದಾಗಲೀ ಬರುವ ಫಲವು ಹೊಸದಾಗಿ ಬರತಕ್ಕದ್ದಾಗಿರುವದರಿಂದ ಅನಿತ್ಯವಾಗಿದ್ದು ಬಂದದ್ದೆಲ್ಲವನ್ನು ಹೋಗತಕ್ಕದ್ದಾನ್ನಾಗಿ ಕಂಡಿರುವದರಿಂದಲೂ, 'ಯತ್ಕೃತಕಮ್ ತದನಿತ್ಯಮ್' -ಯಾವದು ಹೊಸದಾಗಿ ಬಂದದ್ದೋ ಅದು ಹೋಗತಕ್ಕದ್ದೇ-ಎಂಬ ಅನುಭವಾನುಸಾರಿಯಾದ ತರ್ಕಬಲದಿಂದಲೂ ಯಜ್ಞಾದಿ ಕರ್ಮಗಳ ಮತ್ತು ಉಪಾಸನೆಯ ಫಲವು ಅನಿತ್ಯವಾದದ್ದು, ಸಾತಿಶಯವಾದದ್ದು.-ಎಂದು ನಿರ್ಣಯವಾಗುತ್ತದೆ. ಜ್ಞಾನದ ಫಲವಾದರೋ ಮೊದಲೇ ಇರತಕ್ಕದ್ದಾಗಿರುವದರಿಂದಲೂ ಹೊಸದಾಗಿ ಬರತಕ್ಕದ್ದಲ್ಲವಾದುದರಿಂದಲೂ ನಿತ್ಯವಾದದ್ದಾಗುತ್ತದೆ; ಆದುದರಿಂದ ನಿತ್ಯಸುಖವು ಜ್ಞಾನದಿಂದಲೇ ಬರಬೇಕು. ಕರ್ಮದಿಂದ ಬರಲು ಸಾಧ್ಯವಿಲ್ಲ.

ಜ್ಞಾನದ ವಿಷಯವು ಮೊದಲೇ ಇರತಕ್ಕದ್ದಾದರೆ ಅದನ್ನು ಪಡೆಯಲು ಸಾಧನವೇ ಬೇಕಿಲ್ಲವಲ್ಲ? ಎಂದರೆ ಹೊಸದಾಗಿ ಪಡೆಯಬೇಕಿಲ್ಲದಿದ್ದರೂ, ಸಿದ್ಧವಾಗಿದ್ದರೂ ಅದನ್ನು ತಿಳಿಯದೇ ಇದ್ದರೆ ಅವನಿಗೆ ಪ್ರಯೋಜಕಾರಿಯಾಗುವದಿಲ್ಲ. ಫಲವೆಂದೆನಿಸಿಕೊಳ್ಳುವದಿಲ್ಲ. ಮುತ್ತಿನ ಹಾರವು ತನ್ನ ಕೊರಳಿನಲ್ಲಿಯೇ ಇದ್ದರೂ, ನಿಧಿಯು ತಾನು ಓಡಾಡುವ ನೆಲದ ಕೆಳಗೇ ಇದ್ದರೂ, ತಾನೇ ಹತ್ತನೆಯವನಾಗಿದ್ದರೂ, ತಾನೇ ರಾಜ ಪುತ್ರನಾಗಿದ್ದರೂ, ಮುತ್ತಿನ ಹಾರವು ತನ್ನ ಕೊರಳಿನಲ್ಲಿಯೇ ಇದೆ -ಎಂದು ತಿಳಿಯುವವರೆಗೂ, ನಿಧಿಯು ಇಲ್ಲಿಯೇ ಇದೆ, ತನ್ನದೇ ಆಗಿದೆ -ಎಂದು ತಿಳಿಯುವವರೆಗೂ, ತಾನೇ ನದಿಯನ್ನು ದಾಟಿದವರಲ್ಲಿ

ಹತ್ತನೆಯವನು-ಎಂದು ತಿಳಿಯುವವರೆಗೂ, ತಾನೇ ರಾಜಪುತ್ರನು-ಎಂದು ತಿಳಿಯುವವರೆಗೂ ಹೇಗೆ ಹಾರಸಿಕ್ಕಿತು, ನಿಧಿಯು ತನ್ನದು, ತಾನೇ ಹತ್ತನೆಯವನು, ತಾನೇ ರಾಜಪುತ್ರನು, -ಎಂಬ ಫಲವು ದೊರೆತಿರುವ ದಿಲ್ಲವೋ ತಿಳಿದಕೂಡಲೇ ಫಲವಾದಂತೆ ಅನುಭವಿಸುತ್ತಾನೆಯೋ, ಹಾಗೆಯೇ "ನಾನೇ ಪರಮಾರ್ಥವಾಗಿ ಬ್ರಹ್ಮಸ್ವರೂಪನಾಗಿದ್ದೇನೆ" ಎಂಬ ಅನುಭವರೂಪವಾದ ಜ್ಞಾನ ಬರುವವರೆಗೂ, ತಾನು ಮನುಷ್ಯನು, ದೇವನು, ಗಂಡಸು, ಹೆಂಗಸು, ಕ್ರಿಮಿ, ಕೀಟ-ಎಂಬೀ ಮೊದಲಾದ ರೂಪದವನೆಂದು ತಪ್ಪುತಪ್ಪಾಗಿ ತಿಳಿದು ದುಃಖಪಡುತ್ತಿರುವುದು ತಪ್ಪುವುದಿಲ್ಲ. "ನಾನೇ ಬ್ರಹ್ಮ" ಎಂಬ ಅನುಭವ ರೂಪವಾದ ಜ್ಞಾನ ಬಂದ ಕೂಡಲೇ, ತಾನು ಬ್ರಹ್ಮವೇ ಸರ್ವದಾ ಆಗಿದ್ದರೂ ಅಜ್ಞಾನದಿಂದ ತಾನು ಜೀವನೆಂದು ತಿಳಿದವನು ಜ್ಞಾನದಿಂದ ಬ್ರಹ್ಮವಾಗುತ್ತಾನೆ. ಇಲ್ಲಿ ಈ ಜ್ಞಾನವನ್ನು ಹೊಂದುವದನ್ನೇ ಫಲವನ್ನಾಗಿ ವ್ಯವಹರಿಸಲಾಗಿರುತ್ತದೆ. ಸರಿಯಾದ ಜ್ಞಾನ ಒಂದಲ್ಲದೇ ಮತ್ತೆ ಕರ್ಮವೇ ಮೊದಲಾದ ಯಾವ ಸಾಧನವೂ ತಪ್ಪು ತಿಳಿವಳಿಕೆ ಮೊದಲಾದ ರೂಪದ ಅಜ್ಞಾನವನ್ನು ನಾಶಮಾಡಲಾರದು. ಆದುದರಿಂದ ಬ್ರಹ್ಮಜ್ಞಾನದಿಂದ ಬ್ರಹ್ಮಪ್ರಾಪ್ತಿ-ಎಂಬ ಫಲವನ್ನು ಶ್ರುತಿಸ್ಮೃತಿಗಳು ಉದ್ಘೋಷಿಸುತ್ತಿವೆ. ಇದರಿಂದ ಕರ್ಮದ ಫಲವು ಅನಿತ್ಯವೂ ಸಾತಿಶಯವೂ ಆದದ್ದೆಂದೂ, ಸಿದ್ಧವಾಯಿತು. ಮತ್ತು ಆ ಬ್ರಹ್ಮವು ತನ್ನ ಸ್ವರೂಪವೇ ಆಗಿದ್ದು ಅದನ್ನು ತಿಳಿಯದೇ ಜೀವನಾಗಿ ಸುಖದುಃಖಗಳಿಗೆ ವಶನಾಗಿದ್ದು ವಿಚಾರದಿಂದ ತಾನೇ ಬ್ರಹ್ಮನೆಂದು ಅರಿತರೆ ಪರಪ್ರಾಪ್ತಿ ಎಂಬ ಫಲವು ದೊರೆಯುತ್ತದೆ-ಎಂಬುದೂ, ಆದುದರಿಂದ ಬ್ರಹ್ಮವಿಚಾರವು ಮಾಡತಕ್ಕದ್ದೆಂಬುದೂ, ಆ ಬ್ರಹ್ಮ ವಿಚಾರವು ಆತ್ಮ ವಿಚಾರಪೂರ್ವಕ ವಾಗಿಯೇ ಆಗತಕ್ಕದ್ದೆಂಬುದೂ ಸಿದ್ಧವಾಯಿತು.

# ೩. ಜ್ಞಾನಾಜ್ಞಾನಗಳ ಸ್ವರೂಪ

ಯಾವ ವಸ್ತುವು ಯಾವ ರೀತಿಯಲ್ಲಿರುತ್ತದೆಯೋ ಆ ವಸ್ತುವನ್ನು ಆ ರೀತಿಯಲ್ಲಿ ತಿಳಿಯುವದೇ ಅದರ ಜ್ಞಾನವು. ಉದಾಹರಣೆಗೆ ಮೋಟು ಮರವನ್ನು ಮೋಟುಮರವೆಂದೂ, ಕಪ್ಪೆಯ ಚಿಪ್ಪನ್ನು ಕಪ್ಪೆಯ ಚಿಪ್ಪೆಂದೂ, ಹಗ್ಗವನ್ನು ಹಗ್ಗವೆಂದೂ, ಬಿಸಿಲುಗುದುರೆಯನ್ನು ಬಿಸಿಲುಗುದುರೆಯೆಂದೂ ತಿಳಿಯುವದು ಅದರದರ ಜ್ಞಾನವು. ಇದೇ ರೀತಿಯಲ್ಲಿ ಆತ್ಮವಸ್ತುವು ಹೇಗಿದೆಯೋ ಹಾಗೆ ಅದನ್ನು ತಿಳಿಯುವದೇ ಆತ್ಮಜ್ಞಾನವು-

ಯಾವ ವಸ್ತುವು ಯಾವ ರೀತಿಯಲ್ಲಿರುತ್ತದೆಯೋ ಆ ರೀತಿಯಲ್ಲಿ ಅದನ್ನು ತಿಳಿಯದೇ ಇರುವದೂ, ಸಂಶಯರೂಪದಿಂದ ತಿಳಿಯುವದೂ, ವಿಪರೀತರೀತಿಯಿಂದ ತಿಳಿಯುವದೂ ಅಜ್ಞಾನವು. ಉದಾಹರಣೆಗೆ-ಮೋಟು ಮರವನ್ನು ಮೋಟುಮರವೆಂದು ತಿಳಿಯದಿರುವದೂ, ಮೋಟು ಮರವೋ? ಕಳ್ಳನೋ?-ಎಂದು ಸಂಶಯರೂಪದಿಂದ ತಿಳಿಯುವದೂ, ಕಳ್ಳನು-ಎಂದು ವಿಪರೀತವಾಗಿ ತಿಳಿಯುವುದೂ ಕಪ್ಪೆಯಚಿಪ್ಪನ್ನು ಕಪ್ಪೆಯಚಿಪ್ಪೆಂದು ತಿಳಿಯದಿರುವದೂ, ಕಪ್ಪೆಯಚಿಪ್ಪೋ? ಬೆಳ್ಳಿಯೊ?-ಎಂದು ಸಂಶಯದಿಂದ ತಿಳಿಯುವುದೂ, ಬೆಳ್ಳಿ-ಎಂದು ವಿಪರೀತವಾಗಿ ತಿಳಿಯುವದೂ, ಹಗ್ಗವನ್ನು ಹಗ್ಗವನ್ನಾಗಿ ತಿಳಿಯದಿರುವದೂ, ಹಗ್ಗವೊ? ಹಾವೊ?-ಎಂದು ಸಂಶಯರೂಪದಿಂದ ತಿಳಿಯುವದೂ, ಹಾವು-ಎಂದು ವಿಪರೀತವಾಗಿ ತಿಳಿಯುವದೂ, ಬಿಸಿಲುಗುದುರೆಯನ್ನು ಬಿಸಿಲು ಗುದುರೆಯೆಂದು ತಿಳಿಯದಿರುವದೂ, ಬಿಸಿಲು ಗುದುರೆಯೊ? ನೀರೊ?-ಎಂದು ಸಂಶಯ ರೂಪದಿಂದ ತಿಳಿಯುವದೂ, "ನೀರು" -ಎಂದು ವಿಪರೀತವಾಗಿ ತಿಳಿಯುವದೂ, ಅಜ್ಞಾನವು. ಹೀಗೆಯೇ ಆತ್ಮನನ್ನು ಆತ್ಮನನ್ನಾಗಿ ತಿಳಿಯದಿರುವದೂ, ಆತ್ಮನೊ? ದೇಹವೊ? ಎಂದು ಸಂಶಯ ರೂಪದಿಂದ ತಿಳಿಯುವುದೂ, - 'ದೇಹವು' ಎಂದು ವಿಪರೀತವಾಗಿ ತಿಳಿಯುವದೂ, ಆತ್ಮ ವಿಷಯುಕವಾದ ಅಜ್ಞಾನವು. ಈ ಜ್ಞಾನಾಜ್ಞಾನಗಳಿಗೆ ಮಾತ್ರವೇ ವಿರೋಧವಿರುವದರಿಂದ ಈ ಆತ್ಮವಿಷಯುಕವಾದ ಅಜ್ಞಾನವನ್ನು ಕಳೆಯಲು

ಆತ್ಮಜ್ಞಾನವೇ ಸಾಧನವು ; ಮತ್ತೆ ಯಾವದೂ ಆತ್ಮವಿಷಯಕವಾದ ಅಜ್ಞಾನವನ್ನು ಅಂದರೆ ಆತ್ಮಜ್ಞಾನವಿಲ್ಲದಿರುವಿಕೆಯನ್ನೂ, ಆತ್ಮ ವಿಷಯಕವಾದ ಸಂಶಯಜ್ಞಾನವನ್ನೂ ಮತ್ತೂ ಆತ್ಮವಿಷಯಕವಾದ ಮಿಥ್ಯಾಜ್ಞಾನವನ್ನೂ ಕಳೆಯಲಾರದು, ಆತ್ಮಜ್ಞಾನವೊಂದೇ ಆತ್ಮ ವಿಷಯಕವಾದ ಅಜ್ಞಾನವನ್ನು ಕಳೆಯಲು ಸಾಧನವು. ಜ್ಞಾನಾಜ್ಞಾನಗಳೆರಡೂ ವಿರುದ್ಧವಾದ ಅನ್ತಃಕರಣದ ವೃತ್ತಿಗಳಾಗಿರುವುದರಿಂದ ಒಂದೆಡೆಯಲ್ಲಿ ಒಂದೇಕಾಲದಲ್ಲಿ ಎರಡೂ ಇರಲಾರವು. ಅಜ್ಞಾನವನ್ನು ಕಳದೇ ಜ್ಞಾನವು ಬರಬೇಕಾಗಿರುವುದರಿಂದ ಅಜ್ಞಾನವನ್ನು ಕಳೆಯಲು ಜ್ಞಾನವೊಂದೇ ಸಾಧನವು.

## ೪ ಆತ್ಮವಿಚಾರವನ್ನು ಮಾಡಬೇಕು

ಆತ್ಮನನ್ನು ಎಲ್ಲರೂ ತಿಳಿದೇ ಇದ್ದಾರೆ. ಹೊಸದಾಗಿ ವಿಚಾರ ಮಾಡತಕ್ಕದ್ದೇನಿದೆ? 'ನಾನು ಹುಡುಗನಾಗಿದ್ದೆನು. ಈಗ ಯೌವನಸ್ಥನಾಗಿದ್ದೇನೆ. ಇಷ್ಟು ಪ್ರಮಾಣವಿದ್ದೇನೆ. ಇಷ್ಟುತೂಕವಿದ್ದೇನೆ. ವಿಚಾರಪರನಾಗಿದ್ದೇನೆ. ಪ್ರಮಾಣಗಳನ್ನುಪಯೋಗಿಸಿ ಪ್ರಮೇಯಗಳನ್ನು ತಿಳಿಯುತ್ತಲಿದ್ದೇನೆ'-ಎಂದು ಮುಂತಾಗಿ ಸರ್ವರೂ ಆತ್ಮನನ್ನು ತಿಳಿದೇ ಇರುವಾಗ ಹೊಸದಾಗಿ ಆತ್ಮವಿಚಾರವನ್ನು ಮಾಡಬೇಕೆಂದು ಏಕೆ ಹೇಳಬೇಕು? ಎಂಬ ಸಂದೇಹವು ತೋರಬಹುದು;ಆದರೆ ಆತ್ಮನನ್ನು ಎಲ್ಲರೂ ತಿಳಿದಿದ್ದರೂ ಆತ್ಮನು ಹೇಗಿದ್ದಾನೆಯೋ ಹಾಗೆ ತಿಳಿದಿರುವದಿಲ್ಲ. ಬೇರೆ ಬೇರೆ ರೂಪಗಳಿಂದ ತಿಳಿದಿದ್ದಾರೆ. ಉದಾಹರಣೆಗೆ ಹಗ್ಗವನ್ನು ಭ್ರಾಂತಿಯಿಂದ ಹಾವೆಂದು ತಿಳಿದಿದ್ದಾಗ ಹಗ್ಗವನ್ನು ತಿಳಿದಿರುವದು ನಿಜ; ಆದರೆ ಹಗ್ಗವನ್ನು ಹಗ್ಗದರೂಪದಿಂದ ತಿಳಿದಿರುವುದಿಲ್ಲ, ಹಾವಿನ ರೂಪದಿಂದ ತಿಳಿದಿರುತ್ತಾರೆ. ಇದು ಸರಿಯಾದ ತಿಳಿವಳಿಕೆಯಲ್ಲ, ಹಗ್ಗವನ್ನು ಹಗ್ಗರೂಪದಿಂದ ತಿಳಿಯುವದು ಸರಿಯಾದ ತಿಳಿವಳಿಕೆ. ಹೀಗೆಯೇ ಆತ್ಮನನ್ನು ದೇಹರೂಪದಿಂದ ತಿಳಿದು "ನಾನು ಹುಟ್ಟಿರುತ್ತೇನೆ, ಸಾಯುವವನು ಆಗಿದ್ದೇನೆ" -ಎಂದು ಮುಂತಾಗಿ ತಿಳಿದಿದ್ದಾರೆ. ಇಂದ್ರಿಯಗಳ ರೂಪದಿಂದ ತಿಳಿದು "ನಾನು ನೋಡುತ್ತೇನೆ. ಮುಟ್ಟುತ್ತೇನೆ" -ಎಂದು ತಿಳಿದಿದ್ದಾರೆ.

ಮನೋರೂಪದಿಂದ ತಿಳಿದು "ನಾನು ಯೋಚಿಸುತ್ತೇನೆ" -ಎಂದು ತಿಳಿದಿದ್ದಾರೆ. ಬುದ್ಧಿರೂಪದಿಂದ ತಿಳಿದು "ನಾನು ನಿರ್ಣಯಿಸುತ್ತೇನೆ" -ಎಂದು ಮುಂತಾಗಿ ತಿಳಿದಿರುತ್ತಾರೆ. ಈ ತಿಳಿವಳಿಕೆಯು ಸರಿಯಾದ ತಿಳಿವಳಿಕೆಯಲ್ಲ, ಇದು ತಪ್ಪುತಿಳಿವಳಿಕೆ. ಆತ್ಮನನ್ನು ಆತ್ಮರೂಪದಿಂದ ತಿಳಿಯುವದು ಸರಿಯಾದ ತಿಳಿವಳಿಕೆ ಇಂತಹ ಸರಿಯಾದ ತಿಳಿವಳಿಕೆಯನ್ನು ಹೊಂದಲು ಆತ್ಮವಿಚಾರವನ್ನು ಮಾಡಬೇಕು.

## ೫ ಆತ್ಮನೆಂದರೆ ಯಾರು ?

ಈಗ ನಾವು ತಿಳಿದಿರುವದು ದೇಹೇಂದ್ರಿಯಾದಿ ಸಂಘಾತದಿಂದ ಕೂಡಿದ ಚೇತನನು ಆತ್ಮನು ಎಂದು. ಈ ತಿಳಿವಳಿಕೆಯು ಎಷ್ಟರ ಮಟ್ಟಿಗೆ ಸರಿಯಾದದ್ದು? -ಎಂದು ವಿಚಾರಮಾಡಬೇಕಲ್ಲವೆ? ನನ್ನ ದೇಹವು ಚೆನ್ನಾಗಿದೆ, ಚೆನ್ನಾಗಿಲ್ಲ-ಎಂದು ಮುಂತಾಗಿ ನಾನು ತಿಳಿಯುತ್ತೇನೆ. ದೇಹಾದಿಸಂಘಾತವು ತಿಳಿಯಲ್ಪಡುತ್ತದೆ. ತಿಳಿಯುವವನೂ ತಿಳಿಯಲ್ಪಡತಕ್ಕದ್ದೂ ಒಂದಾಗುತ್ತದೆಯೆ? ಸುಡುವ ಬೆಂಕಿಯೂ ಸುಡಲ್ಪಡುವ ಕಟ್ಟಿಗೆಯೂ ಒಂದಾಗುತ್ತವೆಯೆ? ನೆನೆಯಿಸುವ ನೀರೂ ನೆನೆಯಿಸಲ್ಪಡುವ ವಸ್ತ್ರವೂ ಒಂದಾಗುತ್ತವೆಯೆ? ಒಣಗಿಸುವ ಗಾಳಿಯೂ ಒಣಗಿಸಲ್ಪಡುವ ಪೈರು ಒಂದಾಗುತ್ತಯೇ? ಎಂದಿಗೂ ಇಲ್ಲ. ಹೀಗೆಯೇ ನೋಡುವ ಆತ್ಮನೂ ನೋಡಲ್ಪಡುವ ದೇಹಾದಿಸಂಘಾತವೂ ಒಂದು ಹೇಗೆ ಆದಾವು? ಇದೇ ರೀತಿಯಲ್ಲಿ ತಿಳಿಯಲ್ಪಡುವ ವ್ಯಕ್ತವಾದ ಮಹಾಭೂತಗಳೂ, ಅವುಗಳಿಗೆ ಕಾರಣವೆಂದು ಊಹಿಸಲ್ಪಡುವ ಅವ್ಯಕ್ತವೂ, ಈ ವ್ಯಕ್ತಾವ್ಯಕ್ತಗಳನ್ನು ತಿಳಿಯುವ ಆತ್ಮನೂ ಹೇಗೆ ಒಂದು ಆದಾರು? ಹೀಗೆಯೇ ಸಮಸ್ತ ವಿಷಯಗಳೂ, ಅವುಗಳನ್ನು ತಿಳಿಯುವ ವಿಷಯಿಯೂ, ಇವರಿಬ್ಬರೂ ಒಂದು ಹೇಗೆ ಆದಾರು? ಹೀಗೆಯೇ ವೇದದಿಂದ ತಿಳಿಯುವ ಸ್ವರ್ಗ ನರಕಗಳೂ, ದೇವತೆಗಳೂ, ಅಧ್ಯಾತ್ಮವಾದ ಕಾಮಾದಿಗಳೂ-ಎಲ್ಲವೂ ವಿಷಯಗಳೇ ಆಗಿವೆ. ಅವೆಲ್ಲವನ್ನೂ ತಿಳಿಯುವ ವಿಷಯಿಯು ಅಂದರೆ ಆತ್ಮನು ಅವುಗಳಿಗಿಂತ ಭಿನ್ನನು. ಇವೆರಡನ್ನೂ ಅಂದರೆ ವಿಷಯಿ

ವಿಷಯಗಳನ್ನು ಒಂದಾಗಿ ತಿಳಿಯುವುದು ತಪ್ಪುತಿಳಿವಳಿಕೆ. ಇದನ್ನು ಭಗವದ್ಗೀತೆಯಲ್ಲಿ ಭಗವಂತನು ಈ ರೀತಿಯಲ್ಲಿ ಉಪದೇಶಿಸಿರುತ್ತಾನೆ. "ಮಹಾಭೂತಗಳೂ, ಅಹಂಕಾರವೂ, ಬುದ್ಧಿಯೂ, ಅವ್ಯಕ್ತವೂ, ಹನ್ನೊಂದು ಇಂದ್ರಿಯಗಳೂ, ಇಂದ್ರಿಯಗಳಿಗೆ ಗೋಚರವಾಗುವ ವಿಷಯಗಳೂ, ಇಚ್ಛೆಯೂ, ದ್ವೇಷವೂ, ಸುಖವೂ, ದುಃಖವೂ ಮತ್ತು ಕಾರ್ಯಕರಣಸಂಘಾತವೂ- ಇವೆಲ್ಲವೂ ಅಂದರೆ ಕಾರ್ಯಕಾರಣರೂಪವಾದ ಸಮಸ್ತ ಜಗತ್ತೂ ಕ್ಷೇತ್ರವು, ಅಂದರೆ ತಿಳಿಯಲ್ಪಡತಕ್ಕದ್ದು. ಅದನ್ನು ತಿಳಿಯುವವನು ಕ್ಷೇತ್ರಜ್ಞನು. ಕ್ಷೇತ್ರಜ್ಞನನ್ನು ದೇಹಾದಿ ಸಮಸ್ತ ಕ್ಷೇತ್ರದಿಂದ ಬೇರ್ಪಡಿಸಿದರೆ ಅಂದರೆ ಸಾಕ್ಷಿಯಾಗಿ ನಿಂತುನೋಡಿದರೆ ಈ ಪ್ರಪಂಚವೆಂಬುದು ಆತ್ಮನಿಗಿಂತ ಬೇರೆ ಇಲ್ಲವೇ ಇಲ್ಲ, ಇದ್ದಂತೆ ಅಜ್ಞಾನದಿಂದ ಅಂದರೆ ಕ್ಷೇತ್ರಕ್ಷೇತ್ರಜ್ಞಸಂಯೋಗದಿಂದ-ಅಂದರೆ ನಿಜವಾಗಿ ಇಲ್ಲದೇ ಇರತಕ್ಕ ದೇಹಾದಿಗಳನ್ನು ಇರತಕ್ಕವೆಂದೂ, ಅವು ನಾನೇ ಎಂದೂ ತಿಳಿದಿರುವ ತಪ್ಪುತಿಳಿವಳಿಕೆಯಿಂದ ತೋರುತ್ತಿರುತ್ತದೆ. ಪರಮಾರ್ಥವಾಗಿ ಆತ್ಮನಿಗಿಂತ ಬೇರೆಯಾಗಿ ಯಾವದೂ ಇಲ್ಲ. ಇಲ್ಲದಿರುವ ದೇಹಾದಿಗಳಿಗೂ ಇರುವ ಮತ್ತು ನಿರವಯವನಾಗಿರುವ ಆತ್ಮನಿಗೂ ಸಂಬಂಧವಂತೂ ಸರ್ವಥಾ ಸಂಭವವೇ ಇಲ್ಲ. ನಿಜವಾಗಿ ಸರ್ವವೂ ಆತ್ಮವೇ. ಈ ನಿಜವಾದ ಆತ್ಮನೇ ಬ್ರಹ್ಮವು. ಈ ಬ್ರಹ್ಮಸ್ವರೂಪನಾದ ಆತ್ಮನು ಧರ್ಮಾಧರ್ಮಾದಿಗಳನ್ನು ಮೀರಿರುತ್ತಾನೆ. ಶೋಕ ಮೋಹಗಳನ್ನು ಮೀರಿರುತ್ತಾನೆ.

## ೬ ಆತ್ಮಶಬ್ದದ ಅರ್ಥವು ಬ್ರಹ್ಮ

ಆತ್ಮ ಶಬ್ದದ ನಿರ್ವಚನೆಯಿಂದಲೂ ಸಹ ಈ ಅರ್ಥವು ಅಂದರೆ ನಿಜವಾದ ಆತ್ಮನು ಬ್ರಹ್ಮವು-ಎಂಬ ಅರ್ಥವು ತಿಳಿಯಬರುತ್ತದೆ. "ಆಪ್ನೋತೀತ್ಯಾತ್ಮಾ". ಯಾವನು ತಾನೇ ಸರ್ವವೂ ಆಗಿ ಸರ್ವವನ್ನೂ ವ್ಯಾಪಿಸಿರುತ್ತಾನೆಯೋ ಅವನೇ ಆತ್ಮನು. ಹಿಮವು ಗಡ್ಡೆಯಾಗಿರುವಾಗ ಆ ಗಡ್ಡೆಯಿಂದ ಪಾತ್ರೆಯನ್ನು ಮಾಡಿ ಅದರೊಳಗೆ ನೀರನ್ನು ಹಾಕಿದರೆ ಹೇಗೆ ಹಿಮ ಅಥವಾ ನೀರು ಪಾತ್ರೆಯೂ ಆಗಿ ಪಾತ್ರೆಯನ್ನೂ ವ್ಯಾಪಿಸಿರುತ್ತದೆಯೋ

ಹಾಗೆ ಆತ್ಮನು ಆಕಾಶವಾಗಿ, ಆಕಾಶರೂಪನಾದ ಆತ್ಮನು ವಾಯುವಾಗಿ, ವಾಯುರೂಪನಾದ ಆತ್ಮನು ತೇಜಸ್ಸಾಗಿ, ತೇಜಸ್ಸಾದ ಆತ್ಮನು ನೀರಾಗಿ, ನೀರಾದ ಆತ್ಮನು ಪೃಥಿವಿಯಾಗಿ, ಪೃಥಿವಿಯಾದ ಆತ್ಮನು ಭೌತಿಕವಾದ ದೇಹಾದಿ ರೂಪವಾಗಿ, ದೇಹದಲ್ಲಿರುವವನೂ ಆಗಿ, ಆಕಾಶಾದಿ ಸರ್ವವನ್ನೂ ವ್ಯಾಪಿಸಿರುತ್ತಾನೆ. ನೀರನ್ನು ಬಿಟ್ಟು ಹಿಮದ ಪಾತ್ರೆಯೇ ಮುಂತಾದದ್ದು ಹೇಗೆ ಬೇರೆಯಾಗಿ ಇಲ್ಲವೋ ಹಾಗೆ ಆತ್ಮನನ್ನು ಬಿಟ್ಟು ಆಕಾಶಾದಿ ಸಮಸ್ತ ಪ್ರಪಂಚವೂ ಪರಮಾರ್ಥವಾಗಿ ಇಲ್ಲವೇ ಇಲ್ಲ. ಆತ್ಮನೇ ಆಕಾಶಾದಿರೂಪನೂ ಆಗಿ ಆಕಾಶಾದಿ ಸಮಸ್ತ ಪ್ರಪಂಚವನ್ನೂ ವ್ಯಾಪಿಸಿರುತ್ತಾನೆ. ಆದುದರಿಂದ ಅವನಿಗೆ ಆತ್ಮನೆಂದು ಹೆಸರು.

"ಆದತ್ತೇ ಇತಿ ಆತ್ಮಾ" ಉಪಾದಾನ ಕಾರಣವಾದ ಮಣ್ಣು ತನ್ನ ಕಾರ್ಯವಾದ ಗಡಿಗೆ ಮುಂತಾದ ಕಾರ್ಯರೂಪವನ್ನು ತೆಗೆದುಕೊಳ್ಳುತ್ತದೆ. ಕಾರ್ಯರೂಪವಾದ ಗಡಿಗೆ ಮುಂತಾದ ರೂಪವನ್ನು ತೆಗೆದುಕೊಂಡರೂ ನಿಜವಾಗಿ ಇರುವದು ಉಪಾದಾನ ಕಾರಣವಾದ ಮಣ್ಣೇ. ಕಾರ್ಯವಾದ ಗಡಿಗೆ ಮುಂತಾದದ್ದು ಬರೀ ಹೆಸರು. ಇದರಂತೆ ಜಗದುಪಾದಾನಕಾರಣನಾದ ಆತ್ಮನು ಆಕಾಶಾದಿಕಾರ್ಯ ರೂಪವನ್ನು ತೆಗೆದುಕೊಂಡರೂ ನಿಜವಾಗಿ ಕಾರಣವಾದ ಆತ್ಮನೇ ಇರತಕ್ಕವನು. ಆಕಾಶಾದಿ ಕಾರ್ಯವೆಂಬುದು ಬರೀ ಹೆಸರಾಗಿರುತ್ತದೆ. ಕಾರ್ಯವೆಂಬುದು ಉಪಾದಾನಕಾರಣಕ್ಕಿಂತ ಭಿನ್ನವಾಗಿ ಇಲ್ಲವೇ ಇಲ್ಲ.

"ಅತ್ತಿ ಇತಿ ಆತ್ಮಾ" ಕಾರ್ಯವಾದ ಗಡಿಗೆ ಮುಂತಾದವು ತನಗೆ ಉಪಾದಾನಕಾರಣವಾದ ಮಣ್ಣು ಮುಂತಾದವುಗಳಲ್ಲಿ ಲಯವಾಗುತ್ತದೆ. ಹೀಗೆಯೇ ಜಗತ್ತೆಂಬುದು ಕಾರ್ಯವು. ಜಗದುಪಾದಾನ ಕಾರಣವು ಆತ್ಮನು. ಆದುದರಿಂದ ಜಗತ್ತು ಆತ್ಮನಲ್ಲಿಯೇ ಲಯವನ್ನು ಹೊಂದುತ್ತದೆ. ಹೀಗೆ ಕಾರ್ಯವಾದ ಪ್ರಪಂಚವನ್ನು ತನ್ನಲ್ಲಿಯೇ ಅಡಗಿಸಿಕೊಳ್ಳುವವರಿಂದ ಇವನು ಆತ್ಮನು.

"ಆಸ್ತೇ ಇತಿ ಆತ್ಮಾ"-ಯಾವುದು ಸಂತತವಾಗಿ ಇದೆಯೋ ಅದು ಆತ್ಮಾ.

ಯಾವದೊಂದು ವಸ್ತುವಿನ ಇರುವಿಕೆಯನ್ನಾಗಲೀ ಇಲ್ಲದಿರುವಿಕೆಯನ್ನಾಗಲೀ ನೋಡುವವನು ಆತ್ಮನು. ಆತ್ಮನು ಇಲ್ಲವೆಂದೆನ್ನುವಾಗಲೂ ಅನ್ನುವ ಆತ್ಮನು ಇದ್ದೇ ಇರಬೇಕಾಗಿರುತ್ತದೆ; ಆದುದರಿಂದ ಆತ್ಮನನ್ನು ಇಲ್ಲವೆಂದು ಎನ್ನುವದು ಸಾಧ್ಯವೇ ಇಲ್ಲ. ಹೀಗೆ ಅವ್ಯಭಿಚರಿತ ಸ್ವರೂಪನು ಆತ್ಮನು. ಇಂತಹ ಸ್ವರೂಪವೇ ಬ್ರಹ್ಮವಾಗಿರುವದರಿಂದಲೂ ತನ್ನ ಪರಮಾರ್ಥ ಸ್ವರೂಪವೇ ವ್ಯಾಪಕಾದಿ ರೂಪವಾಗಿರುವದರಿಂದಲೂ, "ಪರಮಾರ್ಥವಾದ ತಾನೇ ಬ್ರಹ್ಮವು" ಎಂಬುದು ಆತ್ಮ ಶಬ್ದದ ನಿರ್ವಚನೆಯಿಂದಲೇ ಸಿದ್ಧವಾಗುತ್ತದೆ.

## ೭ ಪಂಚಕೋಶ ವಿವೇಕದಿಂದ ಆತ್ಮಸ್ವರೂಪದ ಜ್ಞಾನ

"ನಾನು ಬಂದೆನು, ಹೋದೆನು, ಹುಟ್ಟಿದೆನು, ಬೆಳೆದೆನು, ಮುದುಕನಾಗಿದ್ದೇನೆ, ಗಂಡಸಾಗಿದ್ದೇನೆ, ಹೆಂಗಸಾಗಿದ್ದೇನೆ" -ಇತ್ಯಾದಿ ರೂಪದಿಂದ ದೇಹಿಯು ದೇಹಾದಿ ಸಂಘಾತವನ್ನೇ ತನ್ನನ್ನಾಗಿ ತಿಳಿದು ವ್ಯವಹರಿಸುತ್ತಿದ್ದಾನೆ. ಈ ದೇಹವು ನಾವು ತಿಂದ ಅನ್ನದ ಸಾರಭೂತವಾದದ್ದು. ಹೊರಗಿದ್ದರೆ ಅನ್ನವೆಂದೆನಿಸಿಕೊಳ್ಳುತ್ತದೆ. ತಿಂದು ಜೀರ್ಣವಾಗಿ ಶರೀರಾದಿ ರೂಪವನ್ನು ಹೊಂದಿದಾಗ ಅದನ್ನು ತಾನೇ ಎಂದು ತಿಳಿಯುತ್ತಾನೆ. ಅಂದರೆ ಅನ್ನಮಯನಾಗಿರುತ್ತಾನೆ ಮತ್ತು "ನಾನು ಉಸಿರಾಡುತ್ತಿದ್ದೇನೆ, ಜೀವಿಸುತ್ತಿದ್ದೇನೆ" ಎಂದು ಮುಂತಾಗಿ ವ್ಯವಹರಿಸುವಾಗ ಪ್ರಾಣಮಯನಾಗಿರುತ್ತಾನೆ. ಅಂದರೆ ಪ್ರಾಣವನ್ನೂ ತನ್ನನ್ನೂ ಒಂದನ್ನಾಗಿ ತಿಳಿದಿರುತ್ತಾನೆ. ಮತ್ತು "ಇದು ಸರಿಯೊ? ಅದು ಸರಿಯೋ? ಹೀಗೆ ಮಾಡತಕ್ಕದ್ದು ನ್ಯಾಯವೊ? ಹಾಗೆ ಮಾಡತಕ್ಕದ್ದು ನ್ಯಾಯವೊ? ಇದು ಹಾವೊ? ಹಗ್ಗವೊ?" -ಇತ್ಯಾದಿ ರೂಪದಿಂದ ಯೋಚಿಸುವಾಗ ಮನೋಮಯನಾಗಿರುತ್ತಾನೆ-ಅಂದರೆ ಮನಸ್ಸನ್ನೂ ತನ್ನನ್ನೂ ಒಂದನ್ನಾಗಿ ತಿಳಿದು ಮನೋಮಯನಾಗಿ ವ್ಯವಹರಿಸುತ್ತಾನೆ. "ಇದು ಹಾಗಲ್ಲ, ಹೀಗೆಯೇ ಸರಿ. ಇದು ಹಾವಲ್ಲ, ಹಗ್ಗವೇ ಇದು ಮಾಡತಕ್ಕದಲ್ಲ, ಇದು ಮಾಡತಕ್ಕದ್ದು.

ಇದನ್ನು ಮಾಡುವವನು ನಾನು, ನಾನು ಈ ಕೆಲಸವನ್ನು ಮಾಡಿದೆನು, ಆ ಕೆಲಸವನ್ನು ಮಾಡಿದೆನು" ಇತ್ಯಾದಿ ರೂಪದಿಂದ ವಿಜ್ಞಾನಮಯನಾಗಿರುತ್ತಾನೆ -ಅಂದರೆ ಬುದ್ಧಿಯನ್ನೂ ತನ್ನನ್ನೂ ಒಂದನ್ನಾಗಿ ತಿಳಿದು ಈ ರೀತಿಯಾದ ವ್ಯವಹಾರವನ್ನು ಮಾಡುತ್ತಾನೆ-ಹೀಗೆಯೇ "ನಾನು ಸುಖವನ್ನು ಅನುಭವಿಸುತ್ತಿದ್ದೇನೆ, ದುಃಖವನ್ನು ಅನುಭವಿಸುತ್ತಿದ್ದೇನೆ" -ಎಂದು ಮುಂತಾದ ರೂಪದಿಂದ ಆನಂದಮಯನಾಗಿರುತ್ತಾನೆ-ಅಂದರೆ ಸುಖ ದುಃಖಗಳೆಂಬ ಗುಣಗಳನ್ನು ಹೊಂದಿರುವ ಬುದ್ಧಿಯನ್ನೂ ತನ್ನನ್ನೂ ಒಂದನ್ನಾಗಿ ತಿಳಿದು ತಾನೇ ಸುಖ ದುಃಖಗಳನ್ನು ಅನುಭವಿಸುವವನು ಎಂದು ಮುಂತಾದ ರೂಪದಿಂದ ಆನಂದಮಯನಾಗಿರುತ್ತಾನೆ. ಹೀಗೆ ದೇಹ, ಪ್ರಾಣ, ಮನಸ್ಸು, ಬುದ್ಧಿ ಮತ್ತು ಭೋಕ್ತೃ -ಇವುಗಳಿಂದ ಒಂದಾಗಿ ತಿಳಿಯಲ್ಪಟ್ಟಿರುವ ಆತ್ಮನನ್ನು ಆ ಅನಾತ್ಮಗಳಾದ ಪಂಚಕೋಶಗಳಿಂದ ಬೇರ್ಪಡಿಸಿ ಆತ್ಮನನ್ನು ತಿಳಿಯುವದೇ ಇವುಗಳ ವಿವೇಕ. ವಿವೇಕವು ಎರಡು ವಿಧವಾಗಿರುತ್ತದೆ. ಎರಡು ಸತ್ಯವಸ್ತುಗಳ ಕಲೆಬೆರಕೆಯನ್ನು ವಿಭಾಗಮಾಡಿ ತಿಳಿಯುವದೊಂದು ವಿವೇಕ. ಉದಾಹರಣೆಗೆ ಸಾಂಖ್ಯರು ಪ್ರಕೃತಿಯೂ ಸತ್ಯವು. ಪುರುಷನೂ ಸತ್ಯನು. ಈ ಎರಡು ಸತ್ಯವಸ್ತುಗಳ ಅವಿವೇಕದಿಂದ ಬಂಧ ಉಂಟಾಗಿದೆ. ಇವುಗಳ ವಿವೇಕವನ್ನು ಮಾಡಿಕೊಂಡು ಪ್ರಕೃತಿಯಿಂದ ಆತ್ಮನನ್ನು ಬೇರ್ಪಡಿಸಿ ತಿಳಿದುಕೊಂಡರೆ ಆತ್ಮನು ಆನಂದಸ್ವರೂಪನಾಗಿರುತ್ತಾನೆ. ಪ್ರಕೃತಿಯು ಈ ವಿವೇಕಿಯಾದ ಪುರುಷನನ್ನು ಬಿಟ್ಟು ಅವಿವೇಕಿಗಳಾದ ಬದ್ಧಪುರುಷರಲ್ಲಿ ಸೇರಿ ವ್ಯವಹರಿಸುತ್ತಲಿರುತ್ತದೆ. -ಎಂದು ಹೇಳುತ್ತಾರೆ. ಇನ್ನೊಂದು ವಿಧವಾದ ವಿವೇಕವೆಂದರೆ ಸತ್ಯಾನೃತಗಳ ವಿವೇಕ. ಉದಾಹರಣೆಗೆ ಮನುಷ್ಯನನ್ನು ನೆರಳಿನಿಂದ ಬೇರ್ಪಡಿಸಿದರೆ ನೆರಳು ಇರುವದೇ ಇಲ್ಲ. ಹೀಗೆಯೇ ದೇಹವನ್ನು ಅಂದರೆ ಭಗವದ್ಗೀತೆಯಲ್ಲಿ ಹೇಳಿರುವಂತೆ ಕ್ಷೇತ್ರವೆಂದೆನಿಸಿಕೊಂಡಿರುವ ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕರೂಪವಾದ ಇಡೀ ಪ್ರಪಂಚವನ್ನೇ ವಿಷಯವನ್ನಾಗಿ ತಿಳಿದು ವಿಷಯಿಯಾದ ಆತ್ಮನನ್ನು ಅದರಿಂದ ಬೇರ್ಪಡಿಸಿಕೊಂಡು ಅವುಗಳ ಸಾಕ್ಷಿಯಾಗಿ ನಿಂತು ನೋಡಿದಾಗ ಪ್ರಪಂಚವೆಂಬುದಾಗಲೀ, ದೇಹವೆಂಬುದಾಗಲೀ ಇರುವದೇ ಇಲ್ಲ,

ಆತ್ಮನೊಬ್ಬನೇ ಇರುತ್ತಾನೆ. -ಎಂಬುದು ತಿಳಿಯಬರುತ್ತದೆ. ಹೀಗೆಯೇ ಅನೃತವಾದ ದೇಹದಿಂದಲೂ, ಪ್ರಾಣಾದಿಗಳಿಂದಲೂ ಮನಸ್ಸಿನಿಂದಲೂ, ಬುದ್ಧಿಯಿಂದಲೂ, ಭೋಕ್ತೃತ್ವದಿಂದಲೂ ಸಹ ಆತ್ಮನನ್ನು ಬೇರ್ಪಡಿಸಿಕೊಂಡರೆ ಆತ್ಮನೊಬ್ಬನೇ ಪರಮಾರ್ಥವಾಗಿರತಕ್ಕವನು, ಆತ್ಮೇತರವಾದ ಯಾವದೊಂದೂ ಇಲ್ಲವೇ ಇಲ್ಲ. - ಎಂಬುದು ಆತ್ಮನಿಗೇ ನೇರಾಗಿ ತಿಳಿಯುತ್ತದೆ. ಅನುಭವಾನುಸಾರಿಯಾದ ಈ ಎರಡನೆಯ ವಿಧವಾದ ಸತ್ಯಾನೃತಗಳ ವಿವೇಕದಿಂದ ಆದರೆ ಆತ್ಮಸ್ವರೂಪವನ್ನು ಅನೃತವಾದ ಅನಾತ್ಮವಾದ ಪಂಚಕೋಶಗಳಿಂದ ಬೇರ್ಪಡಿಸಿಕೊಂಡು ಸಾಕ್ಷಿಯಾಗಿ ನಿಂತು ತಿಳಿಯುವದೆಂಬ ವಿವೇಕದಿಂದ ಪರಮಾರ್ಥನಾದ, ಅದ್ವಿತೀಯವಾದ, ಅಖಂಡನಾದ, ಆನಂದಸ್ವರೂಪನಾದ ಆತ್ಮನನ್ನು ಬ್ರಹ್ಮವನ್ನಾಗಿ ಆತ್ಮನಿಂದಲೇ ತಿಳಿಯಬೇಕು. ಹೀಗೆ ಆತ್ಮನಲ್ಲಿ ಅಜ್ಞಾನದಿಂದ ಆರೋಪಿತವಾದ ದೇಹಾದಿತಾದಾತ್ಮ್ಯವನ್ನು ವಿಜ್ಞಾನದಿಂದ ವ್ಯಾವೃತ್ತಿ ಮಾಡಿಕೊಳ್ಳುವದನ್ನೇ ಆತ್ಮನನ್ನು ತಿಳಿಯಬೇಕು-ಎಂದು ಮುಂತಾದ ರೂಪದಿಂದ ವ್ಯವಹರಿಸಲಾಗಿದೆ. ಆತ್ಮನನ್ನು ಘಟಕುಡ್ಯಾದಿಗಳಂತೆ ವಿಷಯವಾಗಿ ಮಾಡಿಕೊಂಡು ತಿಳಿಯಲಾಗುವದಿಲ್ಲ. ಅವನು ಯಾವಾಗಲೂ ತಿಳಿಯುವವನು. ತಿಳಿಯುವವನನ್ನು ತಿಳಿಯುವವನನ್ನಾಗಿಯೇ ತಿಳಿಯಬೇಕು. ನಿಜವಾಗಿ ಆತ್ಮನು ಸರ್ವಕಾಲದಲ್ಲಿಯೂ ಪರಿಪೂರ್ಣ ಜ್ಞಾನಸ್ವರೂಪನೇ ಆಗಿರುವದರಿಂದ ಅವನನ್ನು ಸರಿಯಾಗಿ ತಿಳಿಯಲಿ ತಪ್ಪಾಗಿ ತಿಳಿಯಲಿ ಅವನ ಸ್ವರೂಪದಲ್ಲಿ ಯಾವ ವಿಧವಾದ ವಿಕಾರವೂ ಇಲ್ಲದೇ ಅಖಂಡಜ್ಞಾನಸ್ವರೂಪನೇ ಆಗಿರುತ್ತಾನೆ. ಹೀಗೆ ಆತ್ಮನು ತನ್ನನ್ನು ಅಂತಹ ಜ್ಞಾನಸ್ವರೂಪನನ್ನಾಗಿ ತಿಳಿದ ಮಾತ್ರದಿಂದಲೇ ಕೃತಕೃತ್ಯನಾಗುತ್ತಾನೆ. ಇಂತಹ ಜ್ಞಾನವೊಂದೇ ಮೇಲೆ ವಿವರಿಸಿದ ಅಜ್ಞಾನವನ್ನು ಕಳೆಯಬಲ್ಲದು ಮತ್ತೆ ಯಾವದೂ ಈ ಅಜ್ಞಾನವನ್ನು ಕಳೆಯಲಾರದು.

# ೮ ಕರ್ಮವು ಅಜ್ಞಾನವನ್ನು ಕಳೆಯಲಾರದು

ಕರ್ಮವನ್ನು ಮಾಡುವವನು ಯಾರು? ತಾನಲ್ಲದ ಅನ್ಯತವಾದ ದೇಹಾದಿ ಸಂಘಾತವನ್ನು ತಾನು ಎಂಬ ತಪ್ಪುತಿಳಿವಳಿಕೆಯುಳ್ಳವನು. ಈ ಆತ್ಮಾನಾತ್ಮರುಗಳಲ್ಲಿ ಒಂದನ್ನು ಮತ್ತೊಂದನ್ನಾಗಿ ತಿಳಿಯುವ ತಪ್ಪು ತಿಳಿವಳಿಕೆಯೇ ಅಜ್ಞಾನವು. ಈ ಅಜ್ಞಾನವಿಲ್ಲದೆ ಅಂದರೆ ದೇಹವನ್ನು ತಾನು ಎಂದೂ ಇಂದ್ರಿಯಾದಿಗಳನ್ನು ತನ್ನವು ಎಂದೂ ತಪ್ಪಾಗಿ ತಿಳಿಯದೇ ನಾನು ಮನುಷ್ಯ. ಬ್ರಾಹ್ಮಣ, ಕ್ಷತ್ರಿಯ, ಗಂಡಸು, ಹೆಂಗಸು, ಹುಡುಗ, ಮುದುಕ -ಎಂದು ಮುಂತಾಗಿ ತಿಳಿಯುವದಕ್ಕಾಗುವದಿಲ್ಲ. ನಾನು ಮನುಷ್ಯ, ಕರ್ತಾ -ಮುಂತಾದರೂಪದಲ್ಲಿ ತನ್ನನ್ನು ತಿಳಿಯದೇ ಶಾಸ್ತ್ರದಿಂದ ವಿಹಿತವಾದ, ನಿಂದಿತವಾದ, ಮತ್ತು ಲೌಕಿಕವಾದ ಯಾವ ಕರ್ಮವನ್ನೂ ಮಾಡುವ ಕರ್ತೃವೇ ಆಗುವಂತಿಲ್ಲ. ಬ್ರಹ್ಮಾದಿದೇವತೆಗಳ ಉಪಾಸನೆಯನ್ನು ಮಾಡುವದಕ್ಕೂ ನಾನು ಉಪಾಸನೆಯನ್ನು ಮಾಡುವ ಕರ್ತೃ, ಅದರ ಫಲವನ್ನು ಅನುಭವಿಸುವ ಭೋಕ್ತೃ-ಎಂದು ಮುಂತಾದ ರೂಪದಿಂದ ತನ್ನನ್ನು ತಪ್ಪಾಗಿ ತಿಳಿಯದೇ ಉಪಾಸನೆಯನ್ನೂ ಮಾಡುವದಕ್ಕೆ ಆಗುವಂತಿಲ್ಲ;ಆದುದರಿಂದ ಶಾಸ್ತ್ರವಿಹಿತಕರ್ಮವನ್ನಾಗಲೀ ನಿಷಿದ್ಧಕರ್ಮವನ್ನಾಗಲೀ, ಲೌಕಿಕ ಕರ್ಮವನ್ನಾಗಲೀ, ಅತ್ಯುತ್ತಮವಾದ ಮಾನಸಿಕ ಕರ್ಮರೂಪವಾದ ಉಪಾಸನೆಯನ್ನಾಗಲೀ ತಾನಲ್ಲದ ದೇಹಾದಿಗಳನ್ನು ತಾನು ಎಂಬ, -ಇಂದ್ರಿಯಾದಿಗಳನ್ನು ತನ್ನವು ಎಂಬ-ತಪ್ಪು ತಿಳಿವಳಿಕೆಯನ್ನು ಹೊಂದಿದವನೇ ಮಾಡಬೇಕಾಗಿರುತ್ತದೆ-ಎಂಬುದು ನಿರ್ವಿವಾದವಾದದ್ದು. ಇದಕ್ಕೆ ಬದಲಾಗಿ ತಾನು ಯಾವ ರೀತಿಯಾಗಿರುತ್ತಾನೋ ಆ ರೀತಿಯಲ್ಲಿ ಅಂದರೆ ನಿಷ್ಕ್ರಿಯಾತ್ಮರೂಪದಲ್ಲಿ ತನ್ನನ್ನು ತಿಳಿದವನು ಯಾವದೊಂದು ಕರ್ಮದಲ್ಲಿಯೂ ಕರ್ತೃವಾಗಲಾರನು. ಕರ್ತೃವಾಗಬೇಕಾದರೆ ದೇಹಾದ್ಯನಾತ್ಮವಸ್ತುಗಳಲ್ಲಿ "ನಾನು" -ಎಂಬ ತಪ್ಪುತಿಳಿವಳಿಕೆಯನ್ನು ಹೊಂದಿಯೇ ಇರಬೇಕಾಗಿರುವದರಿಂದಲೂ, ತಾನು ಕರ್ತೃ, ಭೋಕ್ತೃ -ಎಂಬ ತಪ್ಪುತಿಳಿವಳಿಕೆಯನ್ನು ಹೊಂದಿಯೇ ಯಾವ ಕರ್ಮವನ್ನಾಗಲೀ

ಮಾಡಬೇಕಾಗಿರುವದರಿಂದಲೂ ಈ ತಪ್ಪುತಿಳಿವಳಿಕೆಯನ್ನು ಆಶ್ರಯಿಸಿಯೇ ಜನ್ಮವನ್ನು ಪಡೆಯುವ ಕರ್ಮವು ತನಗೆ ವಿರೋಧಿಯಲ್ಲದ ತಪ್ಪುತಿಳಿವಳಿಕೆಯ ರೂಪದ ಅಜ್ಞಾನವನ್ನು ಕಳೆಯಲಾರದು. ಉಪಾಸನೆಯ ರೂಪದ ಮಾನಸಿಕಕರ್ಮವೂ ಮೇಲೆ ವಿವರಿಸಿದಂತೆ ಈ ಅಜ್ಞಾನವನ್ನು ಆಶ್ರಯಿಸಿಯೇ ಜನ್ಮವನ್ನೆತ್ತಬೇಕಾಗಿರುವದರಿಂದ ತನಗೆ ಅವಿರೋಧಿಯಾದ ಅಜ್ಞಾನವನ್ನು ನಾಶಮಾಡಲಾರದು. ಸತ್ಯವಾದ ಆತ್ಮನನ್ನೂ ಅನೃತವಾದ ದೇಹಾದ್ಯನಾತ್ಮಗಳನ್ನೂ ಒಂದನ್ನು ಮತ್ತೊಂದನ್ನಾಗಿ ತಪ್ಪಾಗಿ ತಿಳಿಯುವದೆಂಬ ಅಂತಃಕರಣದ ವೃತ್ತಿರೂಪವಾದ ಅಜ್ಞಾನಕ್ಕೆ ಸತ್ಯಸ್ವರೂಪನಾದ ಆತ್ಮನನ್ನು ಆತ್ಮನನ್ನಾಗಿಯೂ ದೇಹಾದ್ಯನೃತ ವಸ್ತುಗಳನ್ನು ಅನೃತವಾದ ವಸ್ತುಗಳನ್ನಾಗಿಯೂ ಇದ್ದವನ್ನು ಇದ್ದಂತೆಯೇ ತಿಳಿಯುವದೆಂಬ ವಿದ್ಯೆಯು ವಿರೋಧಿಯು. ಕರ್ಮವು ವಿರೋದಿಯಲ್ಲದ್ದರಿಂದ ಕರ್ಮವು ಅಜ್ಞಾನವನ್ನು ನಾಶಮಾಡಲಾರದು.

## ೬ ಬ್ರಹ್ಮವಿಚಾರಕ್ಕೆ ಅಧಿಕಾರಿಯಾರು ?

ಯಾವನು ಬ್ರಹ್ಮವೊಂದೇ ನಿತ್ಯವಾದದ್ದು, ಬಾಕಿ ಎಲ್ಲವೂ ಅನಿತ್ಯವಾದವು; ಆದುದರಿಂದ ಬ್ರಹ್ಮವನ್ನೇ ತಿಳಿಯಬೇಕು. ಮತ್ತೆ ಯಾವದನ್ನೂ ತಿಳಿಯಬೇಕಾದದ್ದಿಲ್ಲ -ಎಂಬ ಉತ್ಕಟವಾದ ಇಚ್ಛೆಯುಳ್ಳವನೋ, ಯಾವನು ಕರ್ಮವನ್ನು ಮಾಡಿ ಸಂಪಾದಿಸಿದ ಈ ಲೋಕದ ಪುತ್ರ ಮಿತ್ರ ಧನಕನಕಾದಿರೂಪದ ಫಲವು ಹೇಗೆ ನಶ್ವರವಾಗಿದೆಯೋ ಹಾಗೆಯೇ ಯಜ್ಞ, ದಾನ, ತಪಸ್ಸು-ಮೊದಲಾದವುಗಳನ್ನು ಮಾಡಿ ಸಂಪಾದಿಸುವ ಪರಲೋಕದ ಸ್ವರ್ಗರೂಪವಾದ ಫಲವೂ ಸಂಪಾದ್ಯವಾಗಿರುವದರಿಂದ "ಯತ್ಕೃತಕಮ್ ತದನಿತ್ಯಮ್" ಎಂಬ ನ್ಯಾಯದಂತೆ ಅನಿತ್ಯವಾದದ್ದೇ ಆಗಿರುತ್ತದೆ; ಆದುದರಿಂದ ಅನಿತ್ಯವಾದ ಫಲವನ್ನು ಸಂಪಾದಿಸುವದರಿಂದ ಏನೂ ಪ್ರಯೋಜನವಿಲ್ಲ. ಕೆಲವು ಕಾಲ ಇದ್ದು ಹೋಗಿಬಿಡುತ್ತದೆ-ಎಂದು ತಿಳಿದು ಇಹಲೋಕದ ಮತ್ತು ಪರಲೋಕದ ಅನಿತ್ಯವಾದ ಫಲಗಳಲ್ಲಿ ವಿರಕ್ತಿಯನ್ನು ನಚಿಕೇತುವಿನಂತೆಯೂ,

ಮೈತ್ರೇಯಿಯಂತೆಯೂ ಹೊಂದಿರುತ್ತಾನೆಯೋ, ಯಾವನು ಕಣ್ಣು ಕಿವಿ ಮೊದಲಾದ ಇಂದ್ರಿಯಗಳನ್ನೂ ಮನಸ್ಸನ್ನೂ ತಮ್ಮ ತಮ್ಮ ವಿಷಯಗಳಾದ ಶಬ್ದಾದಿ, ಮೇಯ ವಸ್ತುಗಳು -ಇವುಗಳ ಕಡೆಗೆ ಹರಿದುಹೋಗದಂತೆ ತನ್ನ ಸ್ವಾಧೀನಪಡಿಸಿಕೊಂಡಿರುತ್ತಾನೆಯೋ, ಯಾವನು ವಿಷಯಗಳ ಯೋಗ್ಯತೆಯನ್ನು ಒರೆಹಚ್ಚಿ ಅವುಗಳಲ್ಲಿ ನಿಜವಾಗಿಯೂ ಸುಖವಿಲ್ಲ. ಸುಖವಿದೆ ಎಂಬುದು ಭ್ರಾಂತಿಯೇ. ಸುಖವಿದ್ದಿದ್ದರೆ ಐಶ್ವರ್ಯವಂತರೂ, ಪುತ್ರಮಿತ್ರಾದಿಗಳನ್ನುಳ್ಳವರೂ ಏಕೆ ಸುಖಿಗಳಾಗದೇ ದುಃಖಪಡುತ್ತಿದ್ದಾರೆ ?-ಎಂದು ಮುಂತಾದ ರೀತಿಯಿಂದ ವಿಚಾರಮಾಡಿ ಇಂದ್ರಿಯಗಳನ್ನೂ ಮನಸ್ಸನ್ನೂ ವಿಷಯಗಳಿಂದ ಹಿಂತಿರುಗಿಸಿಕೊಂಡವನಾಗಿರುತ್ತಾನೆಯೋ, ಯಾವನು ವೇದವಾಕ್ಯಗಳಲ್ಲಿಯೂ, ಸ್ಮೃತಿವಾಕ್ಯಗಳಲ್ಲಿಯೂ ಶ್ರದ್ಧೆಯುಳ್ಳವನಾಗಿರುತ್ತಾನೆಯೋ, ಅವನೇ ಬ್ರಹ್ಮವಿಚಾರವನ್ನು ಮಾಡಲು ಅಧಿಕಾರಿಯು.

ಉದಾಹರಣೆಗೆ ಒಬ್ಬ ಹುಡುಗನು 'ಹಸಿವಾಗಿರುತ್ತದೆ' ಎಂದು ತನ್ನ ತಾಯಿಯನ್ನು ಕೇಳಿದನು, ತಾಯಿಯು "ಅಡಿಗೆಯಾಗಿದೆ ಊಟಮಾಡು, ಹಸಿವು ಹೋಗುತ್ತದೆ-"ಎಂದು ಹೇಳಿದಳು. ಆಗ ಹುಡುಗನು ಊಟಮಾಡಿದರೆ ಹಸಿವು ಹೋಗುತ್ತದೆ ಎಂಬುದು ಹೇಗೆ ಗೊತ್ತು?" ಎಂದು ಕೇಳಿದನು. ತಾಯಿಯು "ಊಟಮಾಡಪ್ಪ, ನಿನಗೇ ಅನುಭವಕ್ಕೆ ಬರುತ್ತದೆ" -ಎಂದು ಹೇಳಿದಳು. ಆ ಹುಡುಗನುಮತ್ತೆ ಮತ್ತೆ "ಊಟಮಾಡಿದರೆ ಹಸಿವು ಹೋಗುತ್ತದೆ -ಎಂದು ಹೇಗೆ ತಿಳಿಯುವದು?" -ಎಂದು ಮುಂತಾದ ಒಣತರ್ಕವನ್ನೇ ಮಾಡುತ್ತ ಹಸಿವಿನಿಂದ ಪೀಡಿತನಾಗಿ ಸಂಕಟಪಟ್ಟನು. ಕೊನೆಗೆ ತಾಯಿಯ ಮಾತಿನಲ್ಲಿ ಶ್ರದ್ಧೆಯಿಟ್ಟು ಊಟಮಾಡಲು ಹಸಿವು ಹೋಗಿ ತೃಪ್ತಿಯಾಯಿತು. ಇದೇ ರೀತಿಯಲ್ಲಿ ಯಾವನು ವೇದ, ಸ್ಮೃತಿ,-ಮುಂತಾದ ವಾಕ್ಯಗಳಲ್ಲಿ ಶ್ರದ್ಧೆಯುಳ್ಳವನಾಗಿರುತ್ತಾನೆಯೋ, ಯಾವನು ಬ್ರಹ್ಮವಸ್ತು ಒಂದೇ ತಿಳಿಯತಕ್ಕದ್ದೆಂದು ತಿಳಿದು ಅದರಲ್ಲಿಯೇ ಗಮನವನ್ನಿಟ್ಟಿರುತ್ತಾನೆಯೋ, ಮತ್ತೆ ಬೇರೆ ವಿಷಯಗಳ ಕಡೆಗೆ ಮನಸ್ಸನ್ನು

ಹರಿದಾಡಿಸುವದಿಲ್ಲವೋ ಅವನೇ ಬ್ರಹ್ಮವಿಚಾರವನ್ನು ಮಾಡಲು ಅಧಿಕಾರಿಯು.

ಇಂತಹ ಅಧಿಕಾರಿಯು ತಾನು "ಇಂತಹ ಶಾಸ್ತ್ರವನ್ನು ತಿಳಿದವನು" "ಇಂತಹ ಕರ್ಮವನ್ನು ಮಾಡಿದವನು"-ಎಂಬ ಅಹಂಕಾರವಿಲ್ಲದವನಾಗಿ "ಬ್ರಹ್ಮಸ್ವರೂಪವನ್ನು ತಿಳಿಸಿ, ಅದನ್ನು ತಿಳಿಯುವದೇ ನನ್ನ ಜೀವನದ ಉದ್ದೇಶವು, ಅದಕ್ಕಾಗಿಯೇ ತಮ್ಮನ್ನು ಮೊರೆಹೊಕ್ಕಿದ್ದೇನೆ" -ಎಂದು ಹೇಳಿ ಗುರುವಿನ ಬಳಿಗೆ ವಿನಯದಿಂದ ಹೋಗುತ್ತಾನೆಯೋ ಅಂತಹ ಅಧಿಕಾರಿಯನ್ನು ನೋಡಿ ಅವನಿಗೆ ತಕ್ಕ ರೀತಿಯಲ್ಲಿ ಸಾಧನಾದಿಗಳನ್ನು ತಿಳಿಸಿ ಸಾಧನಾನುಷ್ಠಾನದಿಂದ ಮನಸ್ಸು ಪರಿಪಕ್ವವಾದದ್ದನ್ನು ತಿಳಿದು ಮಾಡಿದ ಉಪದೇಶವು ಫಲಕಾರಿಯಾಗುತ್ತದೆ.

ಉದಾಹರಣೆಗೆ "ಪಾಪಪುಣ್ಯಗಳನ್ನು ಮೀರಿದ, ಜರಾಮರಣಗಳನ್ನು ಮೀರಿದ, ಸುಖದುಃಖಗಳನ್ನು ಮೀರಿದ, ಬಿಡುವದಕ್ಕೂ ತೆಗೆದುಕೊಳ್ಳುವದಕ್ಕೂ ಆಗದ ಸ್ವರೂಪದ, ಸತ್ಯಕಾಮನಾದ, ಮತ್ತು ಸತ್ಯಸಂಕಲ್ಪನಾದ ಯಾವ ಆತ್ಮನಿದ್ದಾನೆಯೋ, ಮತ್ತು ಯಾವ ಆತ್ಮನನ್ನು ಶಾಸ್ತ್ರಾಚಾರ್ಯೋಪದೇಶವನ್ನು ಅನುಸರಿಸಿ ತನ್ನ ಅನುಭವಕ್ಕೆ ತಂದುಕೊಂಡವನು ಸರ್ವಲೋಕಗಳನ್ನೂ ಹೊಂದುತ್ತಾನೆಯೋ, ಸರ್ವಕಾಮಗಳನ್ನೂ ಪಡೆಯುತ್ತಾನೆಯೋ ಅಂತಹ ಆತ್ಮನನ್ನು ಅನ್ವೇಷಣೆ ಮಾಡಬೇಕು. ವಿಚಾರಮಾಡಬೇಕು." ಎಂದು ಪ್ರಜಾಪತಿಯು ಹೇಳಿದ ಮಾತನ್ನು ಪರಂಪರೆಯಿಂದ ಕೇಳಿದ ಇಂದ್ರನು ಸಮಿತ್ಪಾಣಿಯಾಗಿ ಅಂದರೆ ಶಾಸ್ತ್ರೋಕ್ತ ಕರ್ಮಾದ್ಯನುಷ್ಠಾನದಿಂದ ಶುದ್ಧಚಿತ್ತನಾಗಿ ಪ್ರಜಾಪತಿಯ ಸಮೀಪಕ್ಕೆ ಹೋಗಿ ಅವನ ಮಾತಿನಂತೆ ಮುವತ್ತೆರಡು ವರ್ಷಕಾಲ ಬ್ರಹ್ಮಚರ್ಯ ವ್ರತವನ್ನು ಮಾಡಿದನು. ಆಗ ಪ್ರಜಾಪತಿಯು "ಏನನ್ನು ಬಯಸಿ ಇಲ್ಲಿ ಬ್ರಹ್ಮಚರ್ಯವನ್ನು ಮಾಡಿದೆ?-"ಎಂದು ಕೇಳಲು ಇಂದ್ರನು "ಮೇಲೆ ವಿವರಿಸಿದ ವಿಶೇಷಗಳಿಂದ ಕೂಡಿದ ಆತ್ಮನನ್ನು ಅನ್ವೇಷಣೆಮಾಡಬೇಕು, ವಿಚಾರಮಾಡಬೇಕು -ಎಂಬ ಮಾತನ್ನು ಕೇಳಿದ ನಾನು ಆ ಆತ್ಮನನ್ನು

ತಿಳಿಯಲಿಚ್ಛೆಯುಳ್ಳವನಾಗಿ ಬಂದಿದ್ದೇನೆ." ಎಂದು ಹೇಳಲು ಪ್ರಜಾಪತಿಯು "ಇಂದ್ರಿಯಾದಿಗಳನ್ನು ನಿಗ್ರಹಿಸಿ ಆತ್ಮನ ಕಡೆಗೆ ಲಕ್ಷ್ಯವಿಟ್ಟಿರುವ, ಪಾಪಗಳನ್ನೆಲ್ಲವನ್ನೂ ಕಳೆದುಕೊಂಡಿರುವ ಜ್ಞಾನಯೋಗಿಗಳಿಂದ ತಿಳಿಯಲ್ಪಡುವ, ಇಂದ್ರಿಯಾದಿಗಳಿಗೆಲ್ಲಕ್ಕೂ ಅಂದರೆ ಎಚ್ಚರದ ಅವಸ್ಥೆಗೇ ಸಾಕ್ಷಿಯಾದ, ಯಾವ ಈ ದ್ರಷ್ಟೃವಿದ್ವಾನೆಯೋ ಇವನು ಆತ್ಮನು. ಇವನು ಅಮೃತಸ್ವರೂಪನು. ಇವನು ಅಭಯಸ್ವರೂಪನು. ಇವನು ಬ್ರಹ್ಮ". ಎಂದು ಹೇಳಿದನು.

ಇಂದ್ರನು ಸಂಪೂರ್ಣವಾಗಿ ಪಾಪಗಳಿಂದ ಬಿಡುಗಡೆಯನ್ನು ಹೊಂದದವನಾಗಿದ್ದುದರಿಂದ ಕಣ್ಣಿನಲ್ಲಿ ಕಾಣುವ ಛಾಯಾತ್ಮನನ್ನೇ ಪ್ರಜಾಪತಿಯು ಹೇಳಿದ ಆತ್ಮನು-ಎಂದು ತಿಳಿದನು. "ಇಂದ್ರನು ತಾನು ಹೇಳಿದ್ದನ್ನು ಸರಿಯಾಗಿ ತಿಳಿದುಕೊಳ್ಳಲಿಲ್ಲ" -ಎಂಬುದನ್ನು ತಿಳಿದ ಪ್ರಜಾಪತಿಯು "ಇವನು ತಾನಾಗಿಯೇ ತಿಳಿದುಕೊಳ್ಳಲಿ" -ಎಂದು ಯೋಚಿಸಿ ನೀರು ತುಂಬಿದ ಶರಾವೆಯನ್ನು ತರಿಸಿ "ಇಲ್ಲಿ ನೋಡು" -ಎಂದು ಹೇಳಿ ಅವನು ನೋಡಿದಮೇಲೆ "ಏನನ್ನು ನೋಡುತ್ತಿ?" ಎಂದು ಕೇಳಿದನು. ಆಗ ಅವನು "ದೃಶ್ಯವಾದ ಶರೀರದ ಛಾಯೆಯನ್ನೇ ಸಂಪೂರ್ಣವಾಗಿ ನೋಡುತ್ತೇನೆ.-ಎಂದು ಹೇಳಿದನು. ಆಗ ಪ್ರಜಾಪತಿಯು "ಎಲೈ ಇಂದ್ರನೆ, ಕ್ಷೌರಾದಿಗಳನ್ನು ಮಾಡಿಸಿಕೊಂಡು ಚೆನ್ನಾಗಿ ಅಲಂಕಾರವನ್ನು ಮಾಡಿಕೊಂಡು ಬಂದು ಮತ್ತೆ ನೀರು ತುಂಬಿದ ಶರಾವೆಯಲ್ಲಿ ನೋಡು"ಎಂದು ಹೇಳಿದನು. ಇಲ್ಲಿ ಪ್ರಜಾಪತಿಯು ಮೊದಲಿದ್ದ ಶರೀರವು ಈಗ ಇಲ್ಲ. ಶರೀರದ ಬದಲಾವಣೆಯಿಂದ ಛಾಯಾತ್ಮನೂ ಬದಲಾಯಿಸಿದ್ದಾನೆ. "ನಾನು" ಎಂದು ಅನ್ನಿಸಿಕೊಳ್ಳುವ ನಿಜವಾದ ಆತ್ಮನು ಮಾತ್ರ ಬದಲಾಯಿಸಿಲ್ಲ; ಆದುದರಿಂದ ದೃಶ್ಯವಾದ ಈ ದೇಹಚ್ಛಾಯೆಯು ನಾನಲ್ಲ. ಇದನ್ನು ನೋಡುವ ದ್ರಷ್ಟೃವು ನಾನು - ಎಂದು ತಾನೇ ಅರಿತುಕೊಳ್ಳಲಿ"- ಎಂದು ಯೋಚಿಸಿದನು;

ಆದರೆ ಇಂದ್ರನಿಗೆ ಶರೀರದಲ್ಲಿ ನಾನು ಎಂಬ ಭ್ರಾಂತಿಯು ಹೋಗಿರಲಿಲ್ಲವಾದುದರಿಂದ ಆಗಲೂ 'ಛಾಯಾತ್ಮನೇ ಪ್ರಜಾಪತಿಯು

ಹೇಳಿದ ಆತ್ಮನು'- ಎಂದು ತಿಳಿದುಹೊರಟುಹೋದನು. ಇಂದ್ರನು ವಾಪಸ್ಸು ಹೋಗುವಾಗ ದಾರಿಯಲ್ಲಿ ಈ ಛಾಯಾತ್ಮನು ಅಭಯಸ್ವರೂಪನೂ, ಅಮೃತಸ್ವರೂಪನೂ, ಬ್ರಹ್ಮಸ್ವರೂಪನೂ ಆಗಲಾರನು, ಪ್ರಜಾಪತಿಯು ಹೇಳಿದ ಆತ್ಮನು ಇವನಾಗಿರಲಾರನು ಎಂದು ಯೋಚಿಸಿ ವಾಪಸ್ಸು ಬಂದನು. ಪ್ರಜಾಪತಿಯು " ಎಲೈ ಇಂದ್ರನೆ, ಶಾಂತನಾಗಿ ಹೊರಟು ಹೋದವನು ಪುನಃ ಏತಕ್ಕೆ ಬಂದೆ?"ಎಂದು ಕೇಳಲು "ಶರೀರವು ಶುದ್ಧವಾಗಿದ್ದರೆ ಛಾಯಾತ್ಮನೂ ಶುದ್ಧನಾಗಿರುತ್ತಾನೆ. ಶರೀರವು ಮುಕ್ಕಾದರೆ ಛಾಯಾತ್ಮನೂ ಮುಕ್ಕಾಗುತ್ತಾನೆ. ಶರೀರವು ಅಲಂಕೃತವಾಗಿದ್ದರೆ ಛಾಯಾತ್ಮನೂ ಅಲಂಕೃತನಾಗಿರುತ್ತಾನೆ. ಶರೀರ ನಾಶವಾದರೆ ಛಾಯಾತ್ಮನೂ ನಾಶವಾಗುತ್ತಾನೆ; ಆದುದರಿಂದ ಇಲ್ಲಿ ನಾನು ಭೋಗ್ಯವನ್ನು ನೋಡುವದಿಲ್ಲ". -ಎಂದು ಇಂದ್ರನು ಹೇಳಿದನು. ಪ್ರಜಾಪತಿಯು "ಎಲೈ ಇಂದ್ರನೆ, ಇವನು ಹೀಗೆಯೇ. ಅಂದರೆ ಛಾಯಾತ್ಮನು ಶರೀರವನ್ನು ಅನುಸರಿಸಿ ನಾಶವಾಗತಕ್ಕವನೇ ಹೌದು. ನಾನು ನಿನಗೆ ಹಿಂದೆ ಹೇಳಿದ ಆತ್ಮನನ್ನೇ ಮತ್ತೆ ಹೇಳುತ್ತಾನೆ. ಇನ್ನೂ ಮುವತ್ತೆರಡು ವರ್ಷಗಳ ಕಾಲ ಬ್ರಹ್ಮಚರ್ಯವನ್ನು ಮಾಡು" -ಎಂದು ಹೇಳಿದನು. ಇಂದ್ರನು ಹಾಗೆಯೇ ಮಾಡಿದನು. ಆಗ ಪ್ರಜಾಪತಿಯು "ಬಲಗಣ್ಣು ಮುಂತಾದವುಗಳಲ್ಲಿ ದೃಷ್ಟುವಾಗಿದ್ದಾನಲ್ಲ? ಅವನೇ ಸ್ವಪ್ನದಲ್ಲಿ ಸ್ತ್ರೀಯರೇ ಮೊದಲಾದವರಿಂದ ಪೂಜಿಸಲ್ಪಡುವವನಾಗಿ ಅನೇಕ ವಿಧವಾದ ಸ್ವಪ್ನಭೋಗಗಳನ್ನು ಅನುಭವಿಸುತ್ತಾನೆ. ಇವನು ಅಮೃತನು, ಅಭಯನು. ಬ್ರಹ್ಮವು"ಎಂದು ಸ್ವಪ್ನಕ್ಕೂ ಸಾಕ್ಷಿಯಾದ ಆತ್ಮನನ್ನು ತಿಳಿಸಿದನು.

ಆಗ ಇಂದ್ರನು "ಜಾಗ್ರಚ್ಛರೀರದನಾಶದಿಂದ ಸ್ವಪ್ನಪುರುಷನು ನಾಶವಾಗುವದಿಲ್ಲ. ಇವನು ಅಮೃತನು ಆಗಬಹುದು" ಎಂದು ತಿಳಿದು ಸಮಾಧಾನದಿಂದ ಹೋಗುವಾಗ ದಾರಿಯಲ್ಲಿ ಜಾಗ್ರತ್ತಿನ ಶರೀರದ ನಾಶಾದಿಗಳ ಸಂಬಂಧದಿಂದ ಆತ್ಮನು ನಾಶವಾಗದಿದ್ದರೂ ಅಲ್ಲಿಯೂ ಬೇರೆ ಶರೀರಾದಿಗಳೂ, ಸುಖದುಃಖಗಳೂ ಇದ್ದೇ ಇವೆ. ಇವನು ಹೇಗೆ ಅಮೃತನಾದಾನು? ಎಂದು ಯೋಚಿಸಿ ಮತ್ತೆ ವಾಪಸ್ಸು ಬಂದು ತನ್ನ

ಸಂಶಯವನ್ನು ತಿಳಿಸಿ ಪ್ರಜಾಪತಿಯ ಮಾತಿನಂತೆ ಮತ್ತೆ ಮುವತ್ತೆರಡು ವರ್ಷಗಳ ಕಾಲ ಬ್ರಹ್ಮಚರ್ಯವನ್ನು ಮಾಡಿ ಪ್ರಜಾಪತಿಯ ಸಮೀಪಕ್ಕೆ ಬಂದನು. ಆಗ ಪ್ರಜಾಪತಿಯು "ಬಲಗಣ್ಣು ಮೊದಲಾದದ್ದರಲ್ಲಿ ದ್ರಷ್ಟೃವಾಗಿರುವವನನ್ನೇ ಮತ್ತೂ ಸ್ವಪ್ನದಲ್ಲಿ ಪೂಜ್ಯನಾಗಿರುವವನನ್ನೇ ಮತ್ತೆ ತಿಳಿಸುತ್ತೇನೆ. ಆ ಇವನೇ ಸುಪ್ತನಾಗಿ, ಸಂಪ್ರಸನ್ನನಾಗಿ ಸ್ವಪ್ನವನ್ನೂ ತಿಳಿಯುವದಿಲ್ಲವಲ್ಲ? ಇವನೇ ಆತ್ಮನು, ಅಮೃತನು, ಅಭಯನು, ಬ್ರಹ್ಮನು."-ಎಂದು ಸುಷುಪ್ತಿಗೂ ಸಾಕ್ಷಿಯಾದ ಆತ್ಮನನ್ನೇ ತಿಳಿಸಿದನು. ಇಂದ್ರನು ಶಾಂತಹೃದಯನಾಗಿ ಸ್ವಲ್ಪ ದೂರ ಹೋಗಿ "ಸುಷುಪ್ತಿಯಲ್ಲಿ 'ನಾನು' ಎಂಬ ಜ್ಞಾನವಿಲ್ಲ. 'ಇವರು' ಎಂಬ ಜ್ಞಾನವಿಲ್ಲ; ಆದುದರಿಂದ ಇಲ್ಲಿ ನಾನು ಯಾವ ಭೋಗ್ಯವನ್ನೂ ಕಾಣುವದಿಲ್ಲ. ನಾಶವನ್ನು ಹೊಂದಿದ ಹಾಗೆ ಇರುತ್ತೇನೆ. ಸುಷುಪ್ತಾತ್ಮನೂ ಅಮೃತನು, ಅಭಯನು, ಬ್ರಹ್ಮವು ಆಗಲಾರನು" -ಎಂದು ತಿಳಿದು ಮತ್ತೆ ವಾಪಸ್ಸು ಬಂದು ಪ್ರಜಾಪತಿಯ ಮಾತಿನಂತೆ ಪುನಃ ಐದು ವರ್ಷ ಬ್ರಹ್ಮಚರ್ಯವನ್ನು ಮಾಡಿ ಬರಲು ಆಗ ಪ್ರಜಾಪತಿಯು "ಇಂದ್ರನೆ, ಈ ಶರೀರವು ಮೃತ್ಯುವಿನಿಂದ ಗ್ರಸ್ತವಾದದ್ದಾಗಿದೆ. ಇದು ಅಶರೀರಯಾದ ಆತ್ಮನ ಅಧಿಷ್ಠಾನವು, ಅಂದರೆ ಉಪಾಧಿಯು. ಈ ಉಪಾಧಿಯಾದ ಶರೀರವನ್ನೇ 'ನಾನು' -ಎಂದು ತಪ್ಪುತಪ್ಪಾಗಿ ತಿಳಿದವನು ಪ್ರಿಯಾಪ್ರಿಯಗಳಿಂದ ಕೂಡಿ ನರಳುತ್ತಾನೆ. 'ಈ ಶರೀರವು ನಾನಲ್ಲ. ಶರೀರವೆಂಬುದು ನನ್ನನ್ನು ಬಿಟ್ಟು ಇಲ್ಲವೇ ಇಲ್ಲ' -ಎಂದು ತಿಳಿದ ಅಶರೀರಿಯು ಪ್ರಿಯಾಪ್ರಿಯಗಳಿಂದ ಕೂಡಿದವನಾಗುವುದಿಲ್ಲ. ಈ ಅವಸ್ಥಾತ್ರಯ ಸಾಕ್ಷಿಯೇ ಆತ್ಮನು, ವ್ಯಭಿಚರಿತ ಸ್ವರೂಪವುಳ್ಳ ಅವಸ್ಥೆಗಳ ಜನ್ಮನಾಶಗಳಿಂದ ಆತ್ಮನು ಹುಟ್ಟುಸಾವುಗಳನ್ನು ಹೊಂದುವದಿಲ್ಲ. ಈ ಸಾಕ್ಷಿಯಾದ ಆತ್ಮನು, ಅಮೃತನು, ಅಭಯನು, ಬ್ರಹ್ಮನು". ಎಂದು ಉಪದೇಶಿಸಿದನು.

ಇಂದ್ರನು ಸಂಪೂರ್ಣವಾಗಿ ಶುದ್ಧಚಿತ್ತನಾಗಿದ್ದುದರಿಂದ ಅವಸ್ಥಾತ್ರಯ ಸಾಕ್ಷಿಯನೇ ಅಮೃತಾಭಯಬ್ರಹ್ಮಸ್ವರೂಪನಾದ ಆತ್ಮನನ್ನಾಗಿ ತಿಳಿದನು,

ಮತ್ತು ಇದರಿಂದ ಕೃತಕೃತ್ಯನಾದನು. ಆದುದರಿಂದ ಅಧಿಕಾರಿಯನ್ನು ನೋಡಿ ಬ್ರಹ್ಮ ವಿದ್ಯೆಯನ್ನು ಉಪದೇಶಿಸಬೇಕು.

ಇದಕ್ಕೆ ವಿರುದ್ಧವಾಗಿ ಅಧಿಕಾರಿಸಂಪತ್ತನ್ನು ಪಡೆಯದ ಅಸುರರ ರಾಜನಾದ ವಿರೋಚನನು ಅದೇ ಇಂದ್ರನ ಜೊತೆಯಲ್ಲಿಯೇ ಹೋಗಿ ಅದೇ ಪ್ರಜಾಪತಿಯ ಉಪದೇಶವನ್ನು ಕೇಳಿದರೂ ಅಧಿಕಾರ ಸಂಪತ್ತಿಲ್ಲ ದವನಾಗಿದ್ದುದರಿಂದ "ಪ್ರಜಾಪತಿಯು ದೇಹವನ್ನೇ ಆತ್ಮನನ್ನಾಗಿ ಹೇಳಿದನು" -ಎಂದು ತಪ್ಪಾಗಿ ತಿಳಿದು ವಾಪಸ್ಸು ಹೋಗಿ ತಾನು ಮಾತ್ರ ದೇಹವನ್ನೇ ಆತ್ಮವೆಂದು ತಿಳಿದದ್ದಲ್ಲದೇ ತನ್ನವರಿಗೂ ದೇಹಾತ್ಮತ್ವವನ್ನು ಉಪದೇಶಿಸಿ ತಾನೂ ಅನರ್ಥಕ್ಕೆ ಒಳಗಾಗಿ ತನ್ನವರೆಲ್ಲರನ್ನೂ ಅನರ್ಥಕ್ಕೆ ಗುರಿಮಾಡಿದನು. ಆದುದರಿಂದ ಅನಧಿಕಾರಿಗೆ ಬ್ರಹ್ಮವಿದ್ಯೆಯನ್ನು ದಾನಮಾಡಬಾರದು. ಶ್ರೀ ಶಿವಾನಂದ ಸರಸ್ವತೀ ಸ್ವಾಮಿಗಳು "ಅನಾಧಿಕಾರಿಗೆ ಬ್ರಹ್ಮವಿದ್ಯೆಯನ್ನು ಖಂಡಿತವಾಗಿಯೂ ಉಪದೇಶಿಸಬಾರದು"-ಎಂದು ಒತ್ತಿ ಒತ್ತಿ ಹೇಳುತ್ತಿದ್ದರು.

## ೧೦ ಯಾವ ದಾನವನ್ನಾದರೂ ದೇಶ ಕಾಲ ಪಾತ್ರವನ್ನು ನೋಡಿಯೇ ಮಾಡಬೇಕು

ಹಿಂದೆ ಬ್ರಹ್ಮವಿದ್ಯೆಯನ್ನು ದಾನಮಾಡುವಾಗ ಅಧಿಕಾರಿಯನ್ನು ನೋಡಿಯೇ ದಾನಮಾಡಬೇಕು-ಎಂದು ವಿವರಿಸಲಾಯಿತು. ಈಗ ಅದರಂತೆಯೇ ಯಾವ ದಾನವನ್ನು ಮಾಡಬೇಕಾದರೂ ದೇಶ ಕಾಲ ಪಾತ್ರವನ್ನು ನೋಡಿಯೇ ದಾನಮಾಡಬೇಕು-ಎಂಬುದನ್ನು ಸ್ವಲ್ಪ ವಿವರಿಸುವದು ಅವಶ್ಯವಾದದ್ದು. 'ಇದು ಕೊಡತಕ್ಕವಸ್ತು' ಎಂದಿಷ್ಟು ಮಾತ್ರ ಯೋಚನೆಯಿಂದ ತಾನು ಧರ್ಮಮಾರ್ಗದಿಂದ ಸಂಪಾದಿಸಿದ, ತನ್ನದಾದ ವಸ್ತುವನ್ನು 'ಈ ದಾನವನ್ನು ಇವನಿಗೆ ಮಾಡಿದರೆ ಇವನಿಂದ ನನಗೆ ಇದಕ್ಕಿಂತ ಅತಿಶಯವಾದ ಪ್ರಯೋಜನವು ಲಭಿಸುತ್ತದೆ' ಎಂಬೀ ವಿಧವಾದ ಪ್ರತ್ಯುಪಕಾರವನ್ನು ನಿರೀಕ್ಷಿಸದೇ 'ಇದು ದಾನಮಾಡತಕ್ಕ ಕ್ಷೇತ್ರ, ಉತ್ತಮ ತೀರ್ಥ, ಇವನು ಈ ದಾನಕ್ಕೆ ಯೋಗ್ಯನಾದ ಪಾತ್ರ, ಇದು ಪುಣ್ಯಕಾಲ,'

ಎಂಬಿಷ್ಟನ್ನು ಮಾತ್ರ ಮನಸ್ಸಿಗೆ ತಂದುಕೊಂಡು ಈಶ್ವರಾರ್ಪಣ ಬುದ್ಧಿಯಿಂದ ತನ್ನ ಶಕ್ತಿಗೆ ಮೀರದ ವಸ್ತುವಿನ ದಾನವು ಸಾತ್ವಿಕ ದಾನವು. ಉದಾಹರಣೆಗೆ ವಿಶ್ವಾಮಿತ್ರಋಷಿಯು ದಕ್ಷಿಣದಿಕ್ಕಿನಲ್ಲಿಯೂ, ಪಶ್ಚಿಮದಿಕ್ಕಿನಲ್ಲಿಯೂ, ಉತ್ತರದಿಕ್ಕಿನಲ್ಲಿಯೂ ಬೇರೆ ಬೇರೆ ಕಾರಣಗಳಿಂದ ತಪಸ್ಸಿನ ವಿಘ್ನವನ್ನು ಹೊಂದಿ ಕೊನೆಗೆ ಪೂರ್ವದಿಕ್ಕಿನಲ್ಲಿ ಒಂದು ಸಹಸ್ರವರ್ಷಗಳವರೆಗೂ ಅನ್ನ, ನೀರು-ಮೊದಲಾದವುಗಳನ್ನೂ ಸ್ವೀಕರಿಸದೇ ಏಕನಿಷ್ಠೆಯಿಂದ ಪರಮಾತ್ಮನಲ್ಲಿಯೇ ಮನಸ್ಸನ್ನು ನಿಲ್ಲಿಸಿ ಧ್ಯಾನಮಾಡಿ ಸಹಸ್ರವರ್ಷಗಳು ಮುಗಿದ ಮೇಲೆ ಪಾರಣೆಯನ್ನು ಮಾಡಲು ಒಬ್ಬನಿಗೇ ಆಗುವಷ್ಟು ಅನ್ನವನ್ನು ಸಿದ್ಧಮಾಡಿಕೊಂಡಿದ್ದನು. ಆ ಸಮಯದಲ್ಲಿ ಇವನನ್ನು ಪರೀಕ್ಷಿಸುವದಕ್ಕೋಸ್ಕರ ದೇವೇಂದ್ರನು ಬ್ರಾಹ್ಮಣವೇಷವನ್ನು ಹಾಕಿಕೊಂಡು ಅಲ್ಲಿಗೆ ಬಂದು ಅನ್ನವನ್ನು ಕೇಳಲು ವಿಶ್ವಾಮಿತ್ರಋಷಿಯು ಸ್ವಲ್ಪವೂ ವ್ಯಥೆಗೊಳ್ಳದೇ ಸಂತೋಷಚಿತ್ತನಾಗಿ ಅತಿಥಿಯು ದೊರೆತನಲ್ಲ ಎಂದು ಸಂತೋಷಾತಿಶಯದಿಂದ ತಾನು ಸಾವಿರ ವರ್ಷಗಳವರೆಗೆ ಉಪವಾಸ ವಿದ್ದದ್ದನ್ನೂ ಮನಸ್ಸಿಗೆ ತಂದುಕೊಳ್ಳದೇ ಆ ಅನ್ನವನ್ನೆಲ್ಲ ದಾನಮಾಡಿದನು. ಅದನ್ನು ತೆಗೆದುಕೊಂಡ ದೇವೇಂದ್ರ ಬ್ರಹ್ಮಾದಿದೇವತೆಗಳ ಸಮೀಪಕ್ಕೆ ಹೋಗಿ "ವಿಶ್ವಾಮಿತ್ರನು ಕಾಮಕ್ರೋಧಾದಿಗಳನ್ನು ಜಯಿಸಿರುತ್ತಾನೆ. ಇನ್ನು ಇವನಿಗೆ ಬ್ರಹ್ಮರ್ಷಿತ್ವವನ್ನು ಕೊಡಲೇಬೇಕು. ಅದಕ್ಕೆ ಅರ್ಹನಾಗಿದ್ದಾನೆ"ಎಂದು ಹೇಳಿದನು. ಅದೇರೀತಿಯಲ್ಲಿ ಬ್ರಹ್ಮಾದಿಗಳು ಬಂದು ವಿಶ್ವಾಮಿತ್ರನಿಗೆ ಬ್ರಹ್ಮರ್ಷಿತ್ವವನ್ನು ಕೊಟ್ಟರು. ವಸಿಷ್ಠರು ಅನುಮೋದಿಸಿ ಪ್ರಸಿದ್ಧ ಪಡಿಸಿದರು. ಇಂತಹ ದಾನವು ಸಾತ್ವಿಕ ದಾನವು.

## ೧೧. ರಾಜಸ ತಾಮಸ ದಾನವನ್ನು ಬಿಡಬೇಕು

ಪ್ರತ್ಯುಪಕಾರ ದೃಷ್ಟಿಯಿಂದ ಅಂದರೆ "ಇದನ್ನು ಇವರಿಗೆ ಕೊಟ್ಟರೆ ಇವರಿಂದ ನನಗೆ ಹೆಚ್ಚಿನ ಪ್ರಯೋಜನವಾಗುತ್ತದೆ. ಎಂಬ ದೃಷ್ಟಿಯಿಂದಲೂ,"ಅಯ್ಯೋ! ಇಂತಹ ವಸ್ತುವನ್ನು ಕೊಡಬೇಕಲ್ಲ?" ಎಂಬ ಸಂಕಟದಿಂದಲೂ ಕೊಡತಕ್ಕ ದಾನವು-ರಾಜಸ ದಾನವು. ಉದಾಹರಣೆಗೆ ಒಂದೂರಲ್ಲಿ ಒಬ್ಬ ಮನುಷ್ಯನು ತಾನು ಯಾವ ದಾನವನ್ನು ಕೊಡಬೇಕಾದರೂ ಆ ಊರಿನ ದೊಡ್ಡ ಪುರೋಹಿತರನ್ನೇ ಕರೆಸಿಕೊಂಡು ಬಂದು ಕೊಡುತ್ತಿದ್ದನು. ಅದೇಕೆ? ಆ ದೊಡ್ಡ ಪುರೋಹಿತರು ಅನೇಕ ಶ್ರೀಮಂತ ಶಿಷ್ಯರನ್ನುಳ್ಳವರು. ಯಾರ ಮನೆಯಲ್ಲಿ ದಾನಮಾಡುವ ಸಂದರ್ಭ ಬಂದರೂ ಈ ಮನುಷ್ಯನನ್ನು ಮರೆಯದೇ ಕರೆಯಿಸಿ ಹೆಚ್ಚು ಬೆಲೆ ಬಾಳುವ ದಾನವನ್ನೇ ಅವನಿಗೆ ಕೊಡಿಸುತ್ತಿದ್ದರು. ಒಂದು ದಿವಸ ಈ ಮನುಷ್ಯನು ತನ್ನ ತಾಯಿ ಮಾಡಿದ ಋಷಿಪಂಚಮಿಯ ಉದ್ಯಾಪನೆಯಲ್ಲಿ ಗೋದಾನ ಮಾಡಬೇಕಾಗಿ ಬಂದಿತು. ಅವನಲ್ಲಿ ಉತ್ತಮವಾದ ಒಂದು ಹಸುವಿದ್ದಿತು. ಅದನ್ನು ದಾನಮಾಡಬೇಕೆಂದು ಉದ್ದೇಶಿಸಿದರೂ "ಅಯ್ಯೋ ಒಳ್ಳೆಯ ಹಸು ಹೋಗುತ್ತದೆಯಲ್ಲ?" ಎಂದು ಸಂಕಟಪಟ್ಟು ಗತ್ಯಂತರವಿಲ್ಲದೇ ಕೊಟ್ಟನು. ಇದು ರಾಜಸ ದಾನವು. ಇಂತಹ ರಾಜಸದಾನವನ್ನು ಮಾಡಬಾರದು - ಇದೇ ರೀತಿಯಲ್ಲಿ ಬಿರುದುಗಳನ್ನು ಹೊಂದುವದಕ್ಕಾಗಿ ಮಾಡತಕ್ಕ ಆಸ್ಪತ್ರೆಯ ಕಟ್ಟಡದ ದಾನ, ಪಾಠಶಾಲಾಕಟ್ಟಡದಾನ. ಮುಂತಾದ ದಾನಗಳೂ ರಾಜಸದಾನಗಳೇ. ಆದುದರಿಂದ ಆ ರೀತಿಯಾದ ದಾನವನ್ನು ಬಿಟ್ಟು ಪ್ರತಿನಿತ್ಯವೂ ಯಥಾಶಕ್ತಿ ಗುಪ್ತದಾನವನ್ನು ಮಾಡಬೇಕು.

ಕಾಲವಲ್ಲದ ಕಾಲದಲ್ಲಿ, ದಾನಮಾಡಲು ಯೋಗ್ಯವಲ್ಲದ ಮದ್ಯಪಾನ ಮಾಡುವ ಸ್ಥಳ, ಜೂಜಾಡುವವರಿರುವ ಸ್ಥಳ-ಮುಂತಾದ ದೇಶದಲ್ಲಿ, ಅಪಾತ್ರರಿಗೆ, ಸತ್ಕಾರವನ್ನು ಮಾಡದೇ ತಿರಸ್ಕಾರಪೂರ್ವಕವಾಗಿ ಮಾಡುವ ದಾನವು ತಾಮಸ ದಾನವು. ಉದಾಹರಣೆಗೆ ಒಬ್ಬ ರಾಜನು ಬಹಳ ಉದಾರಿಯಾಗಿದ್ದನು. ಯಾರು ಯಾವಾಗ ಬಂದು ಏನನ್ನು ಕೇಳಿದರೂ

ಕೊಡುತ್ತಿದನು. ಒಂದು ದಿನ ಆ ರಾಜನು ಒಂದು ಚಿನ್ನದ ಬಟ್ಟಲಿನಲ್ಲಿ ನೀರನ್ನಿಟ್ಟುಕೊಂಡು ಕ್ಷೌರವನ್ನು ಮಾಡಿಸಿಕೊಳ್ಳುತ್ತಾ ಕುಳಿತಿದ್ದನು. ಆ ಕಾಲದಲ್ಲಿ ಒಬ್ಬ ಮದ್ಯಪಾಯಿಯು ಸಾಧುವೇಷವನ್ನು ಹಾಕಿಕೊಂಡು ಬಂದು ಆ ರಾಜನನ್ನು ದ್ರವ್ಯವನ್ನು ಯಾಚಿಸಿದನು. ಆ ರಾಜನು ಕಾಲಾಕಾಲವನ್ನೂ, ದೇಶಾದೇಶವನ್ನೂ, ಪಾತ್ರಾಪಾತ್ರವನ್ನೂ ವಿಚಾರಿಸದೇ ಆತನಿಗೆ ಆಗ ತನ್ನಲ್ಲಿದ್ದ ಆ ಚಿನ್ನದ ಬಟ್ಟಲನ್ನೇ ಕೊಟ್ಟು ಬಿಟ್ಟನು. ಆ ಸಾಧುವೇಷಧಾರಿಯು ಅದನ್ನು ತೆಗೆದುಕೊಂಡು ಹೋಗಿ ಮಾರಿ ಬಂದ ದುಡ್ಡಿನಿಂದ ಜೂಜಾಡಿ, ಮದ್ಯಪಾನವನ್ನು ಮಾಡಿ ಇನ್ನೂ ಅನೇಕ ಮಾಡಬಾರದ ಅಕೃತ್ಯಗಳನ್ನು ಮಾಡಿ ರೋಗಗ್ರಸ್ತನಾಗಿ ಕೊನೆಯಲ್ಲಿ ಅತ್ಯಹತ್ಯೆಯಿಂದ ಪ್ರಾಣವನ್ನೂ ಕಳೆದುಕೊಂಡನು. ಇಂತಹ ಅಪಾತ್ರನಿಗೆ ಅಕಾಲದಲ್ಲಿ ಅದೇಶದಲ್ಲಿ ಮಾಡಿದ ದಾನದಿಂದ ರಾಜನಿಗೆ ಮಹಾಪಾಪ ಸಂಘಟನೆಯಾಯಿತು. ಅದರ ಫಲವಾಗಿ ಒಂದು ವಿಲಕ್ಷಣವಾದ ಉದರರೋಗ ಒಂದೊದಗಿತು. ಎಷ್ಟು ಜನ ಉತ್ತಮರಾದ ಡಾಕ್ಟರುಗಳೂ, ಆಯುರ್ವೇದಪಂಡಿತರೂ ಯಾವ ಔಷಧಿಯನ್ನು ಕೊಟ್ಟರೂ ಗುಣವಾಗಲಿಲ್ಲ. ಆ ರಾಜನು ಮಾಡುತ್ತಿದ್ದ ಕೆಲವು ಸಾತ್ತ್ವಿಕದಾನದ ಫಲವಾಗಿ ಒಬ್ಬ ಮಹಾತ್ಮನು ಅಲ್ಲಿಗೆ ಬಂದು ಆ ರಾಜನಿಂದ ಸತ್ಕೃತನಾಗಿ "ಅಯ್ಯ, ಮಹಾರಾಜನೆ, ನಿನಗೆ ಬಂದಿರತಕ್ಕ ಈ ವಿಲಕ್ಷಣವಾದ ಉದರರೋಗವು ನೀನು ಆಕಾಲದಲ್ಲಿ ಅಪಾತ್ರನಿಗೆ ಮಾಡಿದ ಚಿನ್ನದ ಬಟ್ಟಲಿನ ದಾನದ ಫಲವು. ಈ ಪಾಪವನ್ನು, ಸಾತ್ವಿಕರಿಗೆ ಉತ್ತಮವಾದ ಸಹಸ್ರ ಗೋವುಗಳನ್ನು ಪುಣ್ಯ ಕಾಲದಲ್ಲಿ ದಾನಮಾಡಿ ಕಳೆದುಕೊ. ಈ ರೋಗವು ಹೋಗುತ್ತದೆ" ಎಂದು ಹೇಳಿದನು. ಅದನ್ನು ಕೇಳಿದ ಆ ಮಹಾರಾಜನು ಆ ಮಹಾತ್ಮನ ಮಾತಿನಂತೆ ಪ್ರಾಯಶ್ಚಿತ್ತವನ್ನು ಮಾಡಿಕೊಂಡ ಕೂಡಲೇ ಆ ಉದರ ರೋಗವು ಹೋಗಿ ಆರೋಗ್ಯ ದೃಢಕಾಯನಾದನು. ಅದುದರಿಂದ ಇಂತಹ ತಾಮಸ ದಾನಗಳು ಉತ್ತಮ ಫಲವನ್ನು ಕೊಡುವುದಿಲ್ಲ ಎಂಬುದು ಮಾತ್ರವೇ ಅಲ್ಲ, ಅನಿಷ್ಟ ಫಲವನ್ನು ತಂದೊಡ್ಡುವುದರಿಂದ ರಾಜಸ ತಾಮಸ ದಾನಗಳನ್ನು ತ್ಯಜಿಸಿ ಸಾತ್ತ್ವಿಕ ದಾನವನ್ನು ಮಾಡಿ ಉತ್ತಮವಾದ ಫಲವನ್ನು ಪಡೆಯುವಂತೆ ಸರ್ವರೂ ಪ್ರಯತ್ನಿಸಬೇಕು.

# ೧೨. ಕರ್ಮವನ್ನು ಮಾಡಿದರೇ ಫಲ

ಯಜ್ಞವನ್ನು ಮಾಡುವ ಕ್ರಮವನ್ನೂ, ಮಂತ್ರಗಳನ್ನೂ, ದೇವತೆಯನ್ನೂ ಶಾಸ್ತ್ರದಲ್ಲಿ ಹೇಳಿರುವಂತೆಯೇ ತಿಳಿದುಕೊಂಡ ಮಾತ್ರದಿಂದ ಯಜ್ಞ ಮಾಡಿದ ಫಲವು ಬರುವುದಿಲ್ಲ. ದಾನವನ್ನು ದೇಶ ಕಾಲ ಪಾತ್ರವನ್ನರಿತು ಮಾಡಬೇಕೆಂದು ತಿಳಿದ ಮಾತ್ರದಿಂದ ದಾನಮಾಡಿದ ಫಲವು ಬರುವುದಿಲ್ಲ. ಹೇಗೆ ತಪಸ್ಸನ್ನು ಮಾಡಬೇಕೆಂಬುದನ್ನು ತಿಳಿದ ಮಾತ್ರದಿಂದ ತಪಸ್ಸನ್ನು ಮಾಡಿದ ಫಲ ಬರುವದಿಲ್ಲ. ಹೀಗೆಯೇ ಉಪಾಸನೆಯನ್ನು ಹೇಗೆ ಮಾಡಬೇಕು? ಉಪಾಸ್ಯವಾದ ದೇವತೆಯ ಸ್ವರೂಪವೇನು? ಆಸನವನ್ನು ಹೇಗೆ ಹಾಕಿಕೊಳ್ಳಬೇಕು? ಲಕ್ಷ್ಯವು ಯಾವದರಲ್ಲಿ ಹೇಗಿರಬೇಕು?- ಎಂದು ಮುಂತಾದ ವಿಚಾರಗಳನ್ನೆಲ್ಲವನ್ನೂ ಚೆನ್ನಾಗಿ ತಿಳಿದುಕೊಂಡ ಮಾತ್ರದಿಂದ ಉಪಾಸನೆಯನ್ನು ಮಾಡಿದ ಫಲವು ಬರುವದಿಲ್ಲ. ಮತ್ತೇನೆಂದರೆ ಯಜ್ಞವನ್ನಾಗಲೀ, ದಾನವನ್ನಾಗಲೀ, ತಪಸ್ಸನ್ನಾಗಲಿ, ಉಪಾಸನೆಯನ್ನಾಗಲೀ ಇವುಗಳ ವಿಷಯಗಳನ್ನೆಲ್ಲವನ್ನೂ ಚೆನ್ನಾಗಿ ತಿಳಿದುಕೊಂಡು ಶಾಸ್ತ್ರವಿಧಿಯನ್ನನುಸರಿಸಿ ಮಾಡಬೇಕು. ಮಾಡಿದರೆ ಮಾತ್ರವೇ ಅವುಗಳ ಫಲವು ಬರುತ್ತದೆ. ಉದಾಹರಣೆಗೆ, ಒಬ್ಬ ಮನುಷ್ಯನು ಶ್ರೀರಾಮ ಭಜನೆಯನ್ನು ಹೇಗೆ ಮಾಡಬೇಕು? ಎಂದು ಮುಂತಾದ ವಿಚಾರಗಳನ್ನೆಲ್ಲವನ್ನೂ ಚೆನ್ನಾಗಿ ಗುರುಮುಖದಿಂದ ತಿಳಿದುಕೊಂಡಿದ್ದನು; ಆದರೆ ಗುರುಗಳು ಹೇಳಿದಂತೆ ಭಜನೆಯನ್ನು ಮಾತ್ರ ಮಾಡುತ್ತಿರಲಿಲ್ಲ, ಆದರೆ ಪ್ರತಿನಿತ್ಯವೂ ತನ್ನ ಮನೆಗೆ ವಾಪಸ್ಸು ಬರುವ ದಾರಿಯಲ್ಲಿ ಭಜನೆಮಾಡುತ್ತಿರುವವರನ್ನು ನೋಡುತ್ತಾ ಬರುತ್ತಿದ್ದನು. ಇವನು ಉದ್ದೇಶದಿಂದ ನೋಡುತ್ತಿರಲಿಲ್ಲ. ಅದೇ ದಾರಿಯಾಗಿತ್ತು, ಇತರರು ಭಜನೆ ಮಾಡುತ್ತಿರುತ್ತಿದ್ದರು. ಅವನು ಅಲ್ಲಿ ಓಡಾಡುವಾಗ ಭಜನೆ ಮಾಡುವದು ಕಾಣುತ್ತಿತ್ತು. ಒಂದು ದಿನ ಇವನ ಸ್ನೇಹಿತರಲ್ಲೊಬ್ಬನು "ಮಿತ್ರನೆ, ಗುರುಗಳು ಹೇಳಿದಂತೆ ನೀನೇಕೆ ಭಜನೆಯನ್ನು ಮಾಡುವುದಿಲ್ಲ? ಸುಮ್ಮನೇ ನೋಡಿಕೊಂಡು ಹೋಗುತ್ತಿದ್ದೀಯಲ್ಲ?" ಎಂದು ಕೇಳಿದನು. ಆಗ ಆ

ಮನುಷ್ಯನು "ಅಯ್ಯ, ಮಿತ್ರನೆ, ನೀವೆಲ್ಲರೂ ಮಾಡತ್ತಿರುವ ಭಜನೆಯನ್ನು ನೋಡುತ್ತಿದ್ದೇನೆ. ಭಜನೆಯನ್ನು ಹೇಗೆ ಮಾಡಬೇಕೆಂಬುದನ್ನು ತಿಳಿದೂ ಇದ್ದೇನೆ. ಇದರಿಂದ ನಾನೂ ಭಜನೆಯನ್ನು ಮಾಡಿದಂತೆಯೇ ಆಯಿತು" -ಎಂದು ಉತ್ತರ ಕೊಟ್ಟನು. ಸ್ನೇಹಿತನು "ಇದು ಸರಿಯಲ್ಲ. ನೀನೂ ಭಜನೆಯನ್ನು ಮಾಡಬೇಕು" ಎಂದು ಹೇಳಿದರೂ ಕೇಳಲಿಲ್ಲ. ಹೀಗಿರುವಾಗ ಛಳಿಗಾಲ ಪ್ರಾಪ್ತವಾಯಿತು. ಆ ಸ್ಥಳವು ಹಿಮವತ್ಪರ್ವತದ ತಪ್ಪಲು ಪ್ರದೇಶವಾಗಿದ್ದಿತು. ಛಳಿಯು ಬಹಳವಾಗಿತ್ತು. ಅಂಗಡಿಗಳಲ್ಲಿರುವ ಕಂಬಳಿಗಳನ್ನೂ ಶಾಲುಗಳನ್ನೂ ನೋಡಿದರೆ ಛಳಿ ಹೋಗುತ್ತದೆಯೆ? ಪಾಪ, ದುಡ್ಡಿಲ್ಲ, ಹತ್ತಿಯ ಬಟ್ಟೆಯನ್ನೇ ಹಾಕಿಕೊಂಡು ಕೆಲಸಕ್ಕೆ ಹೋಗಬೇಕಾಗಿತ್ತು. ಒಂದು ದಿನ ಬಹಳ ಛಳಿಯಾಗಿತ್ತು. ಛಳಿಯನ್ನು ತಡೆಯಲಾರದೆ ಗಡಗಡನೆ ನಡಗುತ್ತ ಬರುತ್ತ ದಾರಿಯಲ್ಲಿ ದೂರದಲ್ಲಿ ಅಗ್ಗಿಷ್ಟಿಕೆಗೆ ಬೆಂಕಿಯನ್ನು ಹಾಕಿಕೊಂಡು ಕಾಯಿಸಿಕೊಳ್ಳುತ್ತಿದ್ದವರನ್ನು ನೋಡಿ ತಾನೂ ಅಲ್ಲಿಗೆ ಹೋಗಬೇಕೆಂದು ಪ್ರಯತ್ನಪಟ್ಟನು; ಆದರೆ ಅಷ್ಟರಲ್ಲಿಯೇ ಛಳಿಯನ್ನು ತಡೆಯಲಾರದೆ ಮೂರ್ಛೆಯನ್ನು ಹೊಂದಿ ಕೆಳಗೆ ಬಿದ್ದನು. ದೂರದಲ್ಲಿ ಬೆಂಕಿಯನ್ನು ಕಾಯಿಸಿಕೊಳ್ಳುತ್ತಿದ್ದವರು ಇವನು ಬಿದ್ದದ್ದನ್ನು ನೋಡಿ ಕನಿಕರದಿಂದ ಅಲ್ಲಿಗೆ ಬಂದು ಅವನನ್ನು ಎತ್ತಿಕೊಂಡು ಹೋಗಿ ಬೆಂಕಿಯ ಶಾಖವನ್ನು ಕೊಟ್ಟರು. ಸ್ವಲ್ಪ ಹೊತ್ತಾದ ಮೇಲೆ ಆ ಮನುಷ್ಯನು ಎಚ್ಚರಗೊಂಡನು. ಆ ಜನರು ತನಗೆ ಶಾಖವನ್ನು ಕೊಡುತ್ತಿದ್ದುದ್ದನ್ನು ನೋಡಿದನು. ಆಗ ಅವನ ಮನಸ್ಸಿನಲ್ಲಿ "ಕರ್ಮವನ್ನು ಮಾಡಿದರೆ ಫಲ ಬರುತ್ತದೆ. ಸುಮ್ಮನೇ ಅದರ ವಿಷಯವನ್ನು ತಿಳಿದರೆ, ನೋಡಿದರೆ ಮಾಡಿದ ಫಲ ಬರುವುದಿಲ್ಲ" -ಎಂದು ಗುರುಗಳು ಹೇಳಿದ್ದರು. ಇದು ನಿಜ. ಏಕೆಂದರೆ ನಾನು ಅಗ್ಗಿಷ್ಟಿಕೆಯನ್ನು ದೂರದಲ್ಲಿ ನೋಡಿದೆನು. ಬೆಂಕಿಯನ್ನು ಕಾಯಿಕೊಂಡರೆ ಛಳಿಹೋಗುತ್ತದೆ ಎಂದು ತಿಳಿದೂ ಇದ್ದೆನು; ಆದರೆ ಬೆಂಕಿಯನ್ನು ಕಾಯಿಸಿಕೊಂಡ ಹೊರತು ಛಳಿ ಹೋಗಲಿಲ್ಲ" ಎಂದು ತಿಳಿದುಕೊಂಡು ಅಂದಿನಿಂದ ಸ್ನೇಹಿತರ ಜೊತೆಯಲ್ಲಿ ಪ್ರತಿನಿತ್ಯವೂ ತಾನೂ

ಭಜನಮಂದಿರಕ್ಕೆ ಹೋಗಿ ಶ್ರೀರಾಮಭಜನೆಯನ್ನು ಮಾಡಿ ಸಂತೋಷದಿಂದ ತನ್ನ ಜೀವನವನ್ನು ಕಳೆಯುತ್ತಿದ್ದನು. ಆದುದರಿಂದ ಕರ್ಮವನ್ನು ಮಾಡಬೇಕು. ಮಾಡಿದರೆ ತಕ್ಕ ಫಲವನ್ನು ಪಡೆಯಬಹುದು. ಬರಿಯ ಕರ್ಮಜ್ಞಾನದಿಂದ ಫಲವನ್ನು ಪಡೆಯಲಾಗುವದಿಲ್ಲ.

## ೧೩. ಶಾಸ್ತ್ರವಿಧಿಯನ್ನು ಬಿಟ್ಟು ಶ್ರದ್ಧೆಯಿಂದ ಮಾಡಿದ ಕರ್ಮದ ಫಲ

ಅನೇಕರಿಗೆ ಶಾಸ್ತ್ರವಿಧಿಯು ತಿಳಿದಿರುವದಿಲ್ಲ. ದೊಡ್ಡವರು ಮಾಡಿದ್ದನ್ನು ನೋಡಿ, ಹೇಳಿದ್ದನ್ನು ಕೇಳಿ ಶ್ರದ್ಧೆಯಿಂದ ಕರ್ಮವನ್ನು ಮಾಡುತ್ತಿರುತ್ತಾರೆ. ಅದು ಶಾಸ್ತ್ರದ ವಿಧಿಯಂತೆಯೇ ಇರದೇ ಇರಬಹುದು; ಆದರೆ ಅವರಿಗೆ ಅದು ಶಾಸ್ತ್ರವಿಧಿಯಂತೆ ಇಲ್ಲ. -ಎಂಬುದು ತಿಳಿದಿರುವದಿಲ್ಲ. ಅದೇ ಶಾಸ್ತ್ರವಿಧಿಯೆಂದು ತಿಳಿದು ಶ್ರದ್ಧೆಯಿಂದ ಮಾಡುತ್ತಿರುತ್ತಾರೆ. ಆ ಕ್ರಮವು ತಪ್ಪೆಂದು ತಿಳಿದು ಕೂಡಲೇ ತಿದ್ದಿ ಕೊಳ್ಳುತ್ತಾರೆ. ಇಂತಹವರು ತಿಳಿಯದೇ ಶಾಸ್ತ್ರವಿಧಿಯನ್ನು ಅನುಸರಿಸದೇ ಇದ್ದರೂ ಶ್ರದ್ಧೆಯಿಂದ ಕರ್ಮವನ್ನು ಮಾಡುವದರಿಂದ ಆ ಕರ್ಮದ ಫಲ ಶ್ರದ್ಧಾನುಸಾರವಾಗಿ ಬರುತ್ತದೆ; ಆದರೆ ವಿಧಿಯನ್ನು ತಿಳಿದು ವಿಧಿಯನ್ನು ಅನುಸರಿಸಿ ಶ್ರದ್ಧೆಯಿಂದ ಮಾಡಿದರೆ ಆ ಕರ್ಮವು ಹೆಚ್ಚಿನ ಫಲವನ್ನು ಕೊಡುತ್ತದೆ -ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಉದಾಹರಣೆಗೆ ಒಬ್ಬ ಮನುಷ್ಯನು ಪ್ರತಿ ನಿತ್ಯವೂ ವಿಷ್ಣು ಸಹಸ್ರನಾಮವನ್ನು ಭಕ್ತಿಯಿಂದ ಪಾರಾಯಣವನ್ನು ಮಾಡುತ್ತಿದ್ದನಂತೆ. ಒಂದು ದಿನ ಛಳಿಗಾಲವು ಪ್ರಾಪ್ತವಾಗಿದೆ. ಛಳಿಯಿಂದ ತಾನು ನಡುಗುತ್ತಲಿದ್ದಾನೆ. ಆಗ ವಿಷ್ಣುಪುರಾಣದಲ್ಲಿ 'ವತ್ಸರೋ ವತ್ಸಲೋ ವತ್ಸೀ'- ಎಂಬ ವಾಕ್ಯವನ್ನು ಪಾರಾಯಣ ಮಾಡುವಾಗ ಆತನು ಸಂಸ್ಕೃತ ಭಾಷೆಯನ್ನು ತಿಳಿಯದ ಆಂಧ್ರದೇಶದವನಾಗಿದ್ದುದರಿಂದ ಒಚ್ಚಳೋ ಎಂದು ಮುಂತಾಗಿ ಓದಿ ಹೊಚ್ಚುತ್ತಾಳೋ? ಹೊಚ್ಚುವದಿಲ್ಲವೋ?ಎಂದು ತಿಳಿದು "ಲಕ್ಷ್ಮೀದೇವಿಯು ಐಶ್ವರ್ಯಾಧಿದೇವತೆಯು. ಐಶ್ವರ್ಯವಂತರಿಗೆ ಇತರರ

ಕಷ್ಟಸುಖಗಳು ತಿಳಿಯುವದಿಲ್ಲ. ಆದುದರಿಂದ ಶ್ರೀ ಮಹಾವಿಷ್ಣುವಿಗೆ ಹೊದ್ದಿಸುತ್ತಾಳೆಯೊ? ಇಲ್ಲವೊ? ಶ್ರೀ ಮಹಾವಿಷ್ಣುವು ಛಳಿಯಿಂದ ನಡುಗುತ್ತಿದ್ದಾನೆಯೊ ?" -ಎಂದು ಮುಂತಾಗಿ ಯೋಚಿಸಿ ಕಣ್ಣಿನಲ್ಲಿ ನೀರನ್ನು ಸುರಿಸುತ್ತಿದ್ದನಂತೆ. ಅಷ್ಟುಹೊತ್ತಿಗೆ ಸರಿಯಾಗಿ ಶಾಸ್ತ್ರವನ್ನು ತಿಳಿದ ಅವನ ಪುರೋಹಿತರು ಬಂದು ಅವನು ಪಾರಾಯಣ ಮಾಡುತ್ತಿದ್ದ ವಾಕ್ಯವನ್ನು ಕೇಳಿ, " ಅಯ್ಯೊ ! ಸಂಸ್ಕೃತ ಭಾಷಾಮಾತೆಯು ಸಂಕಟಪಡುತ್ತಿದ್ದಾಳೆ. ಅವಳ ಕೈಕಾಲುಗಳನ್ನೆಲ್ಲಮುರಿದುಹಾಕಿಬಿಟ್ಟಿದ್ದಿ, ಹೀಗೆ ಓದಬಾರದು. "ವತ್ಸರೋ ವತ್ಸಲೋ ವತ್ಸೀ"ಎಂದು ಪಾರಾಯಣಮಾಡಬೇಕು. ನೀನು ಬಹು ತಪ್ಪು ಮಾಡಿ ಓದುತ್ತಿ. ಇನ್ನು ಮೇಲೆ ಇದನ್ನು ನೀನು ಪಾರಾಯಣ ಮಾಡಬೇಡ" ಎಂದು ಹೇಳಿದರು. ಆ ಶಿಷ್ಯನು ಪುರೋಹಿತರ ಮಾತನ್ನು ಕೇಳಿ "ನಾನು ಪರಮಾತ್ಮನಿಗೆ ಅಪಚಾರಮಾಡಿದೆ. ಪರಮಾತ್ಮ, ನಾರಾಯಣ, ಮಹಾವಿಷ್ಣೋ, ನನ್ನ ತಪ್ಪನ್ನು ಮನ್ನಿಸು." ಎಂದು ಮುಂತಾಗಿ ಪ್ರಾರ್ಥಿಸಿ ಅವತ್ತಿನಿಂದ ಪಾರಾಯಣವನ್ನು ಬಿಟ್ಟನು. ಮಾರನೆಯ ದಿನ ರಾತ್ರೆಯಲ್ಲಿ ಪುರೋಹಿತರ ಕನಸ್ಸಿನಲ್ಲಿ ಶ್ರೀ ಮಹಾವಿಷ್ಣುವು ಬಂದು ಪುರೋಹಿತರ ಕೆನ್ನೆಗೆ ಒಂದು ಏಟನ್ನು ಹಾಕಿ "ಎಲೈ ಬ್ರಾಹ್ಮಣನೆ, ನೀನು ಶ್ರದ್ಧೆಯಿಂದ ಪರಮಾತ್ಮನನ್ನು ಸ್ಮರಿಸಿಕೊಂಡು ಆನಂದಪಡುತ್ತಿದ್ದ ಬ್ರಾಹ್ಮಣನನ್ನು ಪರಮಾತ್ಮನ ಸ್ಮರಣೆಯನ್ನು ಮಾಡದಂತೆ ಅಡ್ಡಿಮಾಡಿದೆ. ಕರ್ಮಸಂಗಿಗಳಾದ ಅಜ್ಞರಿಗೆ ಬುದ್ಧಿ ಭೇದವನ್ನು ಮಾಡಬಾರದು ಎಂಬುದನ್ನು ನೀನು ತಿಳಿದಿಲ್ಲ. ನೀನು ಆ ವಾಕ್ಯವನ್ನು ತಿದ್ದಿ ಹೇಳಿಕೊಡಬಹುದಾಗಿತ್ತು; ಅದಕ್ಕೆ ಬದಲಾಗಿ ಪಾರಾಯಣವನ್ನು ಮಾಡುವದನ್ನೇ ತಪ್ಪಿಸಿದೆ. ಇದು ದೊಡ್ಡ ತಪ್ಪು. ಕೂಡಲೇ ಹೋಗಿ ಆತನು ಪುನಃ ವಿಷ್ಣುಸಹಸ್ರನಾಮ ಪಾರಾಯಣವನ್ನು ಎಂದಿನಂತೆಯೇ ಶ್ರದ್ಧೆಯಿಂದ ಮಾಡುವಂತೆ ಮಾಡು. ತಪ್ಪು ವಾಕ್ಯಗಳನ್ನು ತಿದ್ದಿಕೊಡು. ಇಲ್ಲವಾದರೆ ನಿನಗೆ ಮಹಾವಿಪತ್ತು ಸಂಭವಿಸುವದು" ಎಂದು ಹೇಳಿ ಹೊರಟು ಹೋದನು. ಬೆಳಗಾದ ಒಡನೆಯೇ ಪುರೋಹಿತರು ಆ ಕನಸ್ಸನ್ನು ಜ್ಞಾಪಿಸಿಕೊಂಡು ತಮ್ಮ ನಿತ್ಯ ಕರ್ಮಗಳನ್ನು

ಮುಗಿಸಿಕೊಂಡು ಆ ಶಿಷ್ಯನ ಮನೆಗೆ ಹೋಗಿ ನೋಡಲು ಆತನು ಪಾರಾಯಣವನ್ನು ಮಾಡುತ್ತಿರಲಿಲ್ಲ. ಆಗ ಪುರೋಹಿತರು ಆತನಿಗೆ ಪುನಃ ಹಿತೋಕ್ತಿಗಳನ್ನು ಹೇಳಿ, ತಪ್ಪು ವಾಕ್ಯಗಳನ್ನೆಲ್ಲ ತಿದ್ದಿಕೊಟ್ಟು ಎಂದಿನಂತೆ ಪಾರಾಯಣವನ್ನು ಶ್ರದ್ಧೆಯಿಂದ ಮಾಡುವಂತೆ ಏರ್ಪಡಿಸಿ ಹೊರಟು ಹೋದರು. ಹೀಗೆ ಶಾಸ್ತ್ರವಿಧಿಯನ್ನು ತಿಳಿಯದೇ ಅಲ್ಪಸ್ವಲ್ಪ ತಪ್ಪಿದರೂ ಶ್ರದ್ಧೆಯಿಂದ ಮಾಡಿದ ಕರ್ಮವು ತಕ್ಕ ಫಲವನ್ನು ಕೊಟ್ಟೇ ಕೊಡುತ್ತದೆ. ಶಾಸ್ತ್ರವಿಧಿಯನ್ನೂ ಅನುಸರಿಸಿ ಶ್ರದ್ಧೆಯಿಂದ ಮಾಡಿದ ಕರ್ಮವು ಹೆಚ್ಚಿನ ಫಲವನ್ನು ಕೊಡುತ್ತದೆ.

## ೧೪. ಈಶ್ವರನು ಜೀವರುಗಳನ್ನು ಸಂಸಾರಕ್ಕೆ ಹಾಕುತ್ತಾನೆಯೆ ?

ಸಂಸಾರವೆಂದರೆ-ಜೀವನು ಪಾಪಪುಣ್ಯ ರೂಪವಾದ ಕರ್ಮವನ್ನು ಮಾಡುವುದು, ಸಾಯುವುದು, ಮತ್ತೆ ಪಾಪಪುಣ್ಯಗಳ ಫಲವನ್ನು ಅನುಭವಿಸಲು ಜನ್ಮವನ್ನೆತ್ತುವದು, ಮತ್ತೆ ಪಾಪ ಪುಣ್ಯಗಳ್ನು ಮಾಡುವುದು -ಈ ರೀತಿಯಲ್ಲಿ ಜನನವಾದ ಮೇಲೆ ಮರಣ. ಮರಣವಾದ ಮೇಲೆ ಜನನ -ಎಂಬ ರೂಪದಿಂದ ತಿರುಗುತ್ತಿರುವದು. ಕರ್ಮವನ್ನು ಮಾಡುವದರಲ್ಲಿ ಜೀವನು ಸ್ವತಂತ್ರನೆಂದಾದರೆ ತನ್ನ ಸಂಸಾರಕ್ಕೆ ತಾನೇ ಕಾರಣನೆಂದಾಗುತ್ತಾನೆ. ಆದರೆ ಈಶ್ವರನ ಪ್ರೇರಣೆಯಿಲ್ಲದೇ ಯಾವನೂ ಏನನ್ನೂ ಮಾಡಲಾರನು ಎಂದಾದರೆ ಈಶ್ವರನೇ ಜನರನ್ನು ಸಂಸಾರಕ್ಕೆ ಹಾಕಿಸುತ್ತಾನೆ ಎಂದಾಗುತ್ತದೆ. ಈ ಪಕ್ಷದಲ್ಲಿ ಈಶ್ವರನೇ ಪಾಪಪುಣ್ಯಗಳನ್ನು ಜೀವರಿಂದ ಮಾಡಿಸತಕ್ಕವನಾಗಿರುವದರಿಂದ ಅವುಗಳ ಫಲವಾದ ಸುಖದುಃಖಗಳು ಜೀವರಿಗೆ ಬರಲು ಕಾರಣವಿರುವದಿಲ್ಲ. ಮತ್ತು ಒಬ್ಬರ ಕೈಯಿಂದ ಪುಣ್ಯವನ್ನು ಮಾಡಿಸಿ ಆತನಿಗೆ ಸುಖವನ್ನೂ ಮತ್ತೊಬ್ಬರ ಕೈಯಿಂದ ಪಾಪವನ್ನು ಮಾಡಿಸಿ ಆತನಿಗೆ ದುಃಖವನ್ನೂ ಕೊಟ್ಟರೆ ಈಶ್ವರನು ವೈಷಮ್ಯವುಳ್ಳನೆಂದಾಗುತ್ತಾನೆ. ಮತ್ತು ಪಾಪವನ್ನೂ ಮಾಡಿಸಿ ದುಃಖವನ್ನು ಕೊಟ್ಟರೆ ನಿರ್ಘೃಣನೆಂದೂ

ಆಗುತ್ತಾನೆ.

ಇದನ್ನು ಪರಿಹರಿಸುವದಕ್ಕಾಗಿ ಜೀವನೇ ಸ್ವತಂತ್ರನಾಗಿ ಮಾಡುತ್ತಾನೆಂದರೆ ಜೀವನು ತಾನು ತಿಂದ ಅನ್ನವನ್ನೂ ರಕ್ತ ಮಾಂಸ-ಮುಂತಾದ ರೂಪಗಳಿಗೆ ಬದಲಾಯಿಸಿಕೊಳ್ಳಲಾರನು. ಮತ್ತು ಈಶ್ವರನು ಜೀವನ ಕರ್ಮದ ವಿಷಯದಲ್ಲಿ ಈಶ್ವರನಲ್ಲವೆಂದಾಗುತ್ತಾನೆ, ಉಭಯ ವಿಧದಲ್ಲಿಯೂ ದೋಷವು ಕಾಣುತ್ತದೆಯಲ್ಲ? ಎಂದರೆ ಈಶ್ವರನು ಸಾಧಾರಣ ಕಾರಣನು. ಜೀವನು ವಿಶೇಷ ಕಾರಣನು. ಈಶ್ವರನು, ಯಾವ ಒಳ್ಳೆಯ ಅಥವಾ ಕೆಟ್ಟ ಕರ್ಮವನ್ನು ಜೀವನು ಮಾಡುತ್ತಾನೆಯೋ ಅದನ್ನು ಮಾಡಿಸುತ್ತಾನೆ. ಒಳ್ಳೆಯ ಅಥವಾ ಕೆಟ್ಟ ಕರ್ಮವನ್ನು ಮಾಡುವವನು ಜೀವನೇ. ಈಶ್ವರನು ಜೀವನು ಮಾಡುವದನ್ನು ಮಾಡಿಸುವವನು. ಒಳ್ಳೆಯ ಗಿಡವನ್ನಾಗಲೀ ಮುಳ್ಳು ಗಿಡವನ್ನಾಗಲೀ ಹಾಕುವನು ಮನುಷ್ಯನು. ಅವನು ಹಾಕಿದ್ದನ್ನು ಬೆಳಸುವವು -ಮಳೆಯು, ಗಾಳಿಯು, ಬಿಸಿಲು-ಮುಂತಾದವುಗಳು. ಮಳೆ, ಗಾಳಿ, ಬಿಸಿಲುಗಳಿಲ್ಲದೇ ಯಾವಗಿಡವೂ ಹೇಗೆ ಬೆಳೆಯುವುದಿಲ್ಲವೊ ಹಾಗೆ ಈಶ್ವರನ ಸತ್ತಾಮಾತ್ರರೂಪವಾದ ಪ್ರೇರಣೆ ಇಲ್ಲದೇ ಯಾವ ಕರ್ಮವೂ ಸಂಭವವಾಗುವುದಿಲ್ಲ. ಆಯಾ ಗಿಡವನ್ನು ಹಾಕಿದ ಜವಾಬ್ದಾರಿಯು ಹೇಗೆ ಅವನವನದೇ ಆಗಿರುತ್ತದೆಯೋ ಹಾಗೆ ಆಯಾ ಪಾಪ ಪುಣ್ಯ ಕರ್ಮಗಳನ್ನು ಮಾಡುವ ಜವಾಬ್ದಾರಿಯು ಆಯಾ ಮನುಷ್ಯನದೇ ಆಗಿರುತ್ತದೆ. ಈಶ್ವರನು ತನ್ನ ಇರುವಿಕೆ ಮಾತ್ರದಿಂದಲೇ ಸರ್ವವನ್ನೂ ಮಾಡಿಸುವಂತಹ ಸಾಮಾನ್ಯ ಕಾರಣನಾಗಿರುವದರಿಂದ ಈಶ್ವರನ ಈಶ್ವರತ್ವಕ್ಕೆ ಯಾವ ಕುಂದಕವೂ ಬರುವದಿಲ್ಲ, ಮತ್ತು ಜೀವನು ಮಾಡಿದ ಪುಣ್ಯಪಾಪ ಕರ್ಮಗಳ ಜವಾಬ್ದಾರಿಯು ಜೀವನದೇ ಆಗಿರುವದರಿಂದ ಈಶ್ವರನು ಅವರವರ ಪುಣ್ಯ ಪಾಪಾನುಗುಣವಾಗಿ ಅವರವರನ್ನು ಸಂಸಾರಕ್ಕೆ ಹಾಕುತ್ತಾನೆ; ಆದುದರಿಂದ ಅವರವರ ಪಾಪ ಪುಣ್ಯಗಳೇ ಸಂಸಾರಕ್ಕೆ ಕಾರಣವೆಂದು ಸಿದ್ಧವಾಯಿತು. ಉದಾಹರಣೆಗೆ ಒಬ್ಬ ಇಜ್ಜಲು ಮಾರುವವನು ಪ್ರತಿದಿನವೂ ದೂರದಲ್ಲಿದ್ದ ಕಾಡಿಗೆ ಹೋಗಿ ಮರಗಳನ್ನು ಕಡಿದು ಸುಟ್ಟು, ಇಜ್ಜಲನ್ನು ಮಾಡಿ ಊರಿಗೆ ತಂದು ಮಾರಿ ಬಂದ ಹಣದಿಂದ ಜೀವಿಸುತ್ತಿದ್ದನು. ಒಂದು ದಿನ ಆ ದೇಶದ

ರಾಜನು ಆ ಮಾರ್ಗದಲ್ಲಿ ಹೋಗುವಾಗ ಆತನ ಕಷ್ಟವನ್ನು ನೋಡಿ ಮರುಗಿ ದಯೆಯಿಂದ ಆತನನ್ನು ಕರೆದು "ಅಯ್ಯ, ನಿನಗೆ ಊರ ಹತ್ತಿರವೇ ಇರುವ ಚಂದನವನವನ್ನು ಕೊಟ್ಟಿರುತ್ತೇನೆ. ಬದುಕಿಕೊ?" ಎಂದು ಹೇಳಿ ಆ ಚಂದನವನವನ್ನು ಕೊಟ್ಟನು ; ಆದರೆ ಆ ಇಜ್ಜಲು ಮಾರುವವನು 'ದೂರದ ಕಾಡಿಗೆ ಹೋಗುವದು ತಪ್ಪಿತು' ಎಂದಿಷ್ಟು ಮಾತ್ರ ಸಂತೋಷಗೊಂಡು ಚಂದನವನವೆಂಬುದನ್ನು ಲಕ್ಷ್ಯವಿಡದೇ ಆ ಗಂಧದ ಮರಗಳನ್ನೂ ಇತರ ಮರಗಳಂತೆ ಕಡಿದು ಸುಟ್ಟು ಇಜ್ಜಲು ಮಾಡಿ ಮಾರಿ ಬಂದ ಅಲ್ಪಹಣದಿಂದ ಎಂದಿನಂತೆಯೇ ಬಡತನದಲ್ಲಿಯೇ ಜೀವಿಸುತ್ತಿದ್ದನು. ಮತ್ತೊಂದು ದಿವಸ ಅದೇ ರಾಜನು ಅದೇ ಮಾರ್ಗದಲ್ಲಿ ಹೋಗುವಾಗ ಆತನು ಐಶ್ವರ್ಯವಂತನಾಗಿರಬಹುದೆಂದು ಯೋಚಿಸುವಷ್ಟರಲ್ಲಿ ಆ ಮನುಷ್ಯನು ಎಂದಿನಂತೆಯೇ ಬಡತನದಿಂದ ಕಷ್ಟಪಡುತ್ತಿದ್ದುದ್ದನ್ನು ನೋಡಿದನು. ಆಗ ಆ ರಾಜನು ಆತನನ್ನು ಕರೆದು "ಅಯ್ಯ, ಚಂದನವನವನ್ನೇ ಕೊಟ್ಟರೂ ಏಕೆ ನಿನ್ನ ದಾರಿದ್ರ್ಯ ಹೋಗಲಿಲ್ಲ? ಏನುಮಾಡಿದೆ?" ಎಂದು ಕೇಳಲು ಆ ಇಜ್ಜಲು ಮಾಡುವವನು ತಾನು ಆ ಮರಗಳನ್ನು ಕಡಿದು, ಸುಟ್ಟು ಇಜ್ಜಲು ಮಾಡಿ ಮಾರಿದ್ದನ್ನು ತಿಳಿಸಿದನು. ಆಗ ರಾಜನು "ಅಯ್ಯೋ, ಮೂಢ, ಬುದ್ಧಿಯನ್ನು ಏಕೆ ಉಪಯೋಗಿಸಲಿಲ್ಲ? ನಾನು ಚಂದನವನವೆಂದು ಹೇಳಲಿಲ್ಲವೆ? ಈಗಲಾದರೂ, ಉಳಿದ ಮರಗಳನ್ನು ಕಡಿದು ಸುಡದೇ ಹಾಗೆಯೇ ಮಾರು ಐಶ್ವರ್ಯವಂತನಾಗುತ್ತಿ" ಎಂದು ಹೇಳಿ ಹೊರಟು ಹೋದನು. ಆ ಇಜ್ಜಲು ಮಾರುವವನು ಉಳಿದ ಗಂಧದ ಮರಗಳನ್ನೇ ಮಾರಲು ಹೆಚ್ಚಾದ ಐಶ್ವರ್ಯವು ಬಂದಿತು. ಇಜ್ಜಲು ಮಾರುವವನು ಗಂಧದ ಮರಗಳನ್ನೂ ಸುಟ್ಟು ಇಜ್ಜಲಾಗಿ ಮಾಡಿದ ಜವಾಬ್ದಾರಿಯು ತನ್ನದೇ ಹೊರತು ರಾಜನದಲ್ಲ. ರಾಜನು ಚಂದನವನ್ನೇ ಕೊಟ್ಟವನು. ಅದನ್ನು ದುರುಪಯೋಗ ಮಾಡಿದ ದೋಷವು ಆ ಇಜ್ಜಲಿನವನದೇ ಹೇಗೋ ಹಾಗೆಯೇ ಈಶ್ವರನು ಸರ್ವ ಕರ್ಮಗಳನ್ನೂ ಮಾಡಿಸುವ ಸಾಧಾರಣ ಕಾರಣನು ವಿಶಿಷ್ಟವಾದ ಪಾಪ ಪುಣ್ಯ ರೂಪನಾದ ಕರ್ಮಗಳನ್ನು ಮಾಡುವ ಜವಾಬ್ದಾರಿಯು ಜೀವನದೇ. ಈಶ್ವರನ ಪ್ರೇರಣೆ ಇಲ್ಲದೇ ಇವನು ಯಾವ ಕರ್ಮಗಳನ್ನೂ ಮಾಡಲಾರನು ಈಶ್ವರನ ಪ್ರೇರಣೆ

ಯಾದರೋ ಮಳೆ ಬೆಳಕುಗಳಂತೆ ಸತ್ತಾಮಾತ್ರದಿಂದ ಸಾಧಾರಣ ಕಾರಣರೂಪವಾದದ್ದು. ವಿಶಿಷ್ಟಪುಣ್ಯಪಾಪಗಳಿಗೆ ಆಯಾ ಮನುಷ್ಯನೇ ಕಾರಣನು; ಆದುದರಿಂದ ಜೀವನೇ ತಾನು ಮಾಡಿದ ಪಾಪಪುಣ್ಯಗಳ ಫಲವನ್ನು ಅನುಭವಿಸಲು ಸಂಸಾರದಲ್ಲಿ ಬಿದ್ದಿರುತ್ತಾನೆ. ಈಶ್ವರನು ಇವನ ಕರ್ಮವನ್ನು ನೋಡಿ ಆ ಕರ್ಮಕ್ಕೆ ತಕ್ಕಂತೆ ಫಲವನ್ನು ಕೊಡುವವನಾದುದರಿಂದ ಅಸ್ವತಂತ್ರನೆಂದಾಗಲೀ ವೈಷಮ್ಯ ನೈರ್ಘೃಣ್ಯಗಳುಳ್ಳವನೆಂದಾಗಲೀ ಆಗುವದಿಲ್ಲ. ಜೀವನು ಮಾಡಿದ್ದನ್ನು ಮಾಡಿಸುವವನು ಈಶ್ವರನು, ಜೀವನು ಆಯಾ ಕರ್ಮಗಳನ್ನು ಮಾಡುವವನು ; ಆದುದರಿಂದ ಜೀವನೇ ಸಂಸಾರದಲ್ಲಿ ಮುಳುಗಿರಲು ಅಥವಾ ಸಂಸಾರದಿಂದ ಏಳಲು ಕಾರಣನು. ಉದಾರಹಣೆಗೆ ಈಶ್ವರನು, ಸತ್ಯವನ್ನು ಹೇಳಿದವರಿಗೆ ಸುಖ ಬರುತ್ತದೆ. ಸುಳ್ಳನ್ನು ಹೇಳಿದವರಿಗೆ ದುಃಖ ಬರುತ್ತದೆ- ಎಂಬ ನಿಯಮವನ್ನು ಮಾಡಿಸಿದ್ದಾನೆ. ಮನುಷ್ಯನು ಅದನ್ನು ತಿಳಿಯುವ ಯೋಗ್ಯತೆಯನ್ನೂ ಕೊಟ್ಟಿರುತ್ತಾನೆ. ಆದುದರಿಂದ ಸತ್ಯವನ್ನೋ ಸುಳ್ಳನ್ನೋ ಹೇಳುವ ಜವಾಬ್ದಾರಿಯು ಆಯಾ ಮನುಷ್ಯನಿಗೇ ಸೇರಿದ್ದು, ಈಶ್ವರನು ಇವನು ಏನನ್ನು ಹೇಳುತ್ತಾನೆಯೋ ಅದನ್ನು ಹೇಳಿಸತಕ್ಕವನು. ಒಂದಾನೊಂದು ಕಾಲದಲ್ಲಿ ಒಬ್ಬ ವೀರರಾಜಕುಮಾರನು ದೇಶಸಂಚಾರಕ್ಕಾಗಿ ಹೊರಟು ಒಂದು ರಾಜಧಾನಿಯಾದ ದೊಡ್ಡ ಪಟ್ಟಣಕ್ಕೆ ಹೋದನು. ಆ ಕಾಲದಲ್ಲಿ ಹೋಟೆಲ್‌ಗಳು ಇರಲಿಲ್ಲ. ಅಜ್ಜಿಯ ಮನೆಯಲ್ಲಿಯೇ ಹೊಸಬರು ಇಳಿದುಕೊಳ್ಳುವ ಪದ್ಧತಿಯಿದ್ದಿತು. ಆ ಪದ್ಧತಿಯಂತೆ ರಾಜಕುಮಾರನು ಒಂದು ಅಜ್ಜಿಯ ಮನೆಗೆ ಹೋಗಿ ಇಳಿದುಕೊಂಡು ಆ ಅಜ್ಜಿಯನ್ನು ಆ ಪಟ್ಟಣದ ಸಮಾಚಾರವನ್ನು ಕೇಳಿದನು. ಆ ಅಜ್ಜಿಯು "ಅಯ್ಯ, ವೀರಕುಮಾರನೆ, ಈ ಪಟ್ಟಣದ ಹತ್ತಿರವಿರುವ ಕಾಡಿನಲ್ಲಿ ಒಂದು ಕಾಡಾನೆ ಇದೆ. ಅದು ಬಹಳ ಬಲಿಷ್ಠವಾದದ್ದು. ಅದನ್ನು ಹಿಡಿಯಲು ಯಾರಿಂದಲೂ ಸಾಧ್ಯವಾಗಿಲ್ಲ. ಅದು ರಾತ್ರಿಯ ಕಾಲದಲ್ಲಿ ಪಟ್ಟಣದೊಳಕ್ಕೆ ನುಗ್ಗಿ ಜನಗಳಿಗೆಲ್ಲ ಬಹಳ ತೊಂದರೆಯನ್ನು ಕೊಡುತ್ತಿದೆ. ಎಷ್ಟೋ ಜನರನ್ನು

ಹಿಂಸಿಸುತ್ತಿದೆ. ಪುರಜನರು ಈ ವಿಚಾರವನ್ನು ರಾಜನಿಗೂ ಮುಟ್ಟಿಸಿದರು. ರಾಜನು ಅದನ್ನು ಹಿಡಿಸಲು ಮಾಡಿದ ಸಾಹಸವು ವ್ಯರ್ಥವಾಯಿತು. ಆಗ ರಾಜನು"ಇದನ್ನು ಕೊಂದವರಿಗೆ ನನ್ನ ಮಗಳನ್ನು ಕೊಟ್ಟು ವಿವಾಹ ಮಾಡುತ್ತೇನೆ." ಎಂದು ನಗರದಲ್ಲೆಲ್ಲ ಪ್ರಸಿದ್ಧಪಡಿಸಿರುತ್ತಾನೆ, ಇದುವರೆಗೂ ಯಾರೂ ಕೊಂದಿಲ್ಲ" ಎಂದು ಹೇಳಿದಳು. ಅದನ್ನು ಕೇಳಿದ ವೀರರಾಜಕುಮಾರನು ಆ ರಾತ್ರೆಯಲ್ಲಿ ಆ ಕಾಡಾನೆ ಬರುವದನ್ನೇ ಕಾದಿದ್ದನು. ಅದು ಬಂದಿತು. ಆ ವೀರನು ತನ್ನ ಕತ್ತಿಯೊಡನೆ ನುಗ್ಗಿ ಅದರೊಡನೆ ಹೋರಾಡಿ ಕೊನೆಗೆ ಅದನ್ನು ಕೊಂದು ಅದರ ದಂತವನ್ನೂ ಬಾಲವನ್ನೂ ತೆಗೆದುಕೊಂಡು ಅಜ್ಜಿಯ ಮನೆಗೆ ಬಂದು ಮಲಗಿಕೊಂಡನು.

ಬೆಳಗಿನ ಝಾವದಲ್ಲಿ ಒಬ್ಬ ಅಗಸನು ಬಟ್ಟೆಗಳನ್ನು ಒಗೆಯಲು ಸಮೀಪದಲ್ಲಿದ್ದ ನದಿಗಾಗಿ ಹೊರಟನು. ದಾರಿಯಲ್ಲಿ ಆ ಕಾಡಾನೆ ಸತ್ತು ಬಿದ್ದದ್ದನ್ನೂ ಅಲ್ಲಿ ಯಾರೂ ಇಲ್ಲದ್ದನ್ನೂ ಕಂಡನು. ಕೂಡಲೇ ಅವನಿಗೆ ದುರಾಶೆಯುಂಟಾಯಿತು. ಮನೆಗೆ ಹೋಗಿ ಕೊಡಲಿಯನ್ನು ತಂದು ಆ ಸತ್ತ ಆನೆಯನ್ನು ಕಡಿಯುತ್ತ ಇದ್ದನು. ಬೆಳಗಾಯಿತು. ಜನರೆಲ್ಲರೂ ಆ ಅಗಸನು ಆನೆಯನ್ನು ಕಡಿಯುತ್ತಿದ್ದುದನ್ನು ಕಂಡರು. ಎಲ್ಲರೂ 'ಅಗಸನು ಆನೆಯನ್ನು ಕಡಿದನು'-ಎಂದು ಕೂಗಿದರು. ಆ ಕೂಗು ರಾಜನಿಗೂ ಮುಟ್ಟಿತು. ರಾಜನು ತನ್ನ ಪ್ರತಿಜ್ಞೆಯಂತೆ ತನ್ನ ಮಗಳನ್ನು ವಿವಾಹ ಮಾಡಿಕೊಡಲು ನಿಷ್ಕರ್ಷಿಸಿ ಆತನನ್ನು ಬರಮಾಡಿಕೊಂಡನು. ಸಭೆಯನ್ನು ಸೇರಿಸಿದನು. ರಾಜಕುಮಾರಿಯು ಮಾತ್ರ ಚಿಂತಾಸಮುದ್ರದಲ್ಲಿ ಮುಳುಗಿದಳು. ರಾಜನು ಆ ಅಗಸನನ್ನು ಸಭೆಯಲ್ಲಿ ಕರೆಯಿಸಿ "ನೀನು ಕಾಡಾನೆಯನ್ನು ಕೊಂದೆಯಾ?" ಗುರುತ್ತೇನಿದೆ? ಎಂದು ಕೇಳಿದನು. ಅಗಸನಿಗೆ ಮಾತು ನಿಂತಿತು. ಕೈಕಾಲುಗಳು ನಡುಗಿದವು. ಆಗ ರಾಜನು 'ಇವನು ಕಡಿದವನಲ್ಲ'. ಎಂದು ತಿಳಿದು ಅವನನ್ನು ಅಲ್ಲಿಯೇ ಕೂರಿಸಿ, "ಮತ್ತೆ ಯಾರು ಕೊಂದವರು? ಗುರುತಿನೊಡನೆ ಬನ್ನಿ" -ಎಂದು ಕೂಗಿ ಹೇಳಿದನು. ಆಗ ಆ ವೀರರಾಜ ಕುಮಾರನು ಆನೆಯ ದಂತವನ್ನೂ ಬಾಲವನ್ನೂ ತೆಗೆದುಕೊಂಡು ಬಂದನು. ಆತನನ್ನು ನೋಡಿ

ರಾಜನು ಪತ್ರಿಯನ್ನು ಕೊಟ್ಟು ಸಂತೋಷದಿಂದ ವಿವಾಹಮಾಡಿ ಗಂಡುಮಕ್ಕಳಿಲ್ಲದ್ದರಿಂದ ರಾಜ್ಯವನ್ನೇ ಕೊಟ್ಟು ರಾಜನನ್ನಾಗಿ ಮಾಡಿದನು. ಆ ಅಗಸನನ್ನು ಸುಳ್ಳು ಹೇಳಿದ್ದಕ್ಕಾಗಿ ಕಾರಾಗೃಹಕ್ಕೆ ಕಳುಹಿಸಿದನು. ಹೇಳಿದ ಸುಳ್ಳೇ ಅಲ್ಲವೆ ಕಾರಣ ಅಗಸನ ಕಾರಾಗೃಹ ವಾಸಕ್ಕೆ? ಹೇಗೆ ಅವರವರ ಕರ್ಮಗಳೇ ಅವರವರ ಸುಖ ದುಃಖಗಳಿಗೂ ಸಂಸಾರಕ್ಕೂ ಕಾರಣವೆಂಬುದನ್ನು ಹೇಳಲೇಬೇಕಾಗಿಲ್ಲ.

## ೧೫. ವಿಷಯ ಸುಖಗಳ ಯೋಗ್ಯತೆ.

ರಾಮಾಯಣದ ಕಥೆಯನ್ನು ಕೇಳದೇ ಇರುವವರೇ ಇಲ್ಲ. ರಾಮಾಯಣದ ಶ್ರೀರಾಮನಲ್ಲಿ ಮನಸ್ಸಿಟ್ಟಿದ್ದ ಸೀತೆಯು ಸುಖವಾಗಿದ್ದಳು. ಸೀತೆಯ ಮನಸ್ಸು ರಾಮನನ್ನು ಬಿಟ್ಟು ಮಾಯಾಮೃಗದ ಕಡೆಗೆ ಬಿತ್ತು. ಕಾಮವು ಹೆಚ್ಚಿತು. ಪತಿಯಾದ ರಾಮಚಂದ್ರನನ್ನೂ "ಆ ಮೃಗವನ್ನು ತಂದುಕೊಡು" ಎಂದು ಆಕೆಯು ಪ್ರೇರಿಸಿದಳು. ಅದು ಮೃಗವಲ್ಲವೆಂದು ಅವನು ಹೇಳಿದರೂ ಕೇಳಲಿಲ್ಲ. "ಚರ್ಮವನ್ನಾದರೂ ತಂದು ಕೊಡು" ಎಂದು ಹಠಮಾಡಿದಳು. ರಾಮನು ಹೊರಟು ಹೋಗಿ ಮೃಗವಲ್ಲವೆಂದು ತಿಳಿದು ಬಾಣದಿಂದ ಹೊಡೆಯಲು ಆ ಮಾಯಾಮೃಗವು ರಾಕ್ಷಸನಾಗಿ "ಅಯ್ಯೋ ಸೀತೆ, ಲಕ್ಷ್ಮಣ!" ಎಂದು ರಾಮನ ಧ್ವನಿಯಿಂದ ಕೂಗಿ ಪ್ರಾಣಬಿಟ್ಟಿತು. ಸೀತೆಯು 'ರಾಮನಿಗೆ ವಿಪತ್ತು ಬಂದಿದೆ'ಎಂದು ಆ ಕೂಗಿನಿಂದ ತಿಳಿದು ಲಕ್ಷ್ಮಣನನ್ನು ಆಡಬಾರದ ಮಾತನ್ನಾಡಿ ಕಳುಹಿಸಿದಳು. ರಾವಣನು ಸಂನ್ಯಾಸಿವೇಷದಿಂದ ಬಂದು ಆಕೆಯನ್ನು ಎತ್ತಿಕೊಂಡು ಹೋದನು. ಒಂದು ವರ್ಷಕಾಲ ಅನ್ನೋದಕಗಳಿಲ್ಲದೇ ಪತಿಯನ್ನಗಲಿ ಸಂಕಟಪಟ್ಟಳು. ಇಲ್ಲಿನೋಡಿ, ಸೀತೆಯ ದುಃಖಕ್ಕೆ ಕಾರಣವೇನು? ಮಾಯಾಮೃಗದ ಮೇಲೆ ಆಸೆಪಟ್ಟಿದ್ದಲ್ಲವೆ? ಹೀಗೆಯೇ ಜನರು ಮಾಯಾಮೃಗದಂತೆ ತೋರಿ ಹಾರುವ, ರಸವನ್ನು ಹಿಂಡಿದ ಕಬ್ಬಿನ ಸಿಪ್ಪೆಯಂತೆ ನಿಸ್ಸಾರವಾದ ವಿಷಯಗಳನ್ನು ಬಯಸಿ ಅದಕ್ಕಾಗಿ ತಮ್ಮ ತನು ಮನಧನಗಳನ್ನು ವ್ಯಯಮಾಡಿ ಸೋತು ಸೊರಗುತ್ತಾರೆ. ಸುಖವಂತೂ ಬೇಡ ಸುಖದ ಕನಸನ್ನು ಕೂಡ ಕಾಣುವದು

ಕಷ್ಟವಾಗಿರುತ್ತದೆ. ಇದನ್ನೇ ಭಗವದ್ಗೀತೆಯಲ್ಲಿ ಹೀಗೆ ಹೇಳಿರಲಾಗಿರುತ್ತದೆ.

ಯೇ ಹಿ ಸಂಸ್ಪರ್ಶಜಾ ಭೋಗಾ ದುಃಖಯೋನಯ ಏವ ತೇ ।
ಆದ್ಯನ್ತವನ್ತಃ ಕೌನ್ತೇಯ ನ ತೇಷು ರಮತೇ ಬುಧಃ ॥

ಅರ್ಥ:-"ಎಲೈ, ಕುಂತೀಪುತ್ರನೆ, ವಿಷಯೇಂದ್ರಿಯಗಳ ಸಂಬಂಧದಿಂದುಂಟಾದ ಭೋಗಗಳು ಅಂದರೆ ಅನುಭವಗಳು ಅವಿದ್ಯೆಯಿಂದಾಗಿರುವದರಿಂದ ದುಃಖಯೋನಿಗಳು ಮತ್ತೂ ಆದ್ಯಂತವುಳ್ಳವು. ವಿಷಯೇಂದ್ರಿಯ ಸಂಯೋಗವಾದಾಗ ಹುಟ್ಟುತ್ತವೆ. ವಿಯೋಗವಾದಾಗ ನಾಶವಾಗುತ್ತವೆ; ಆದುದರಿಂದ ಜ್ಞಾನಿಗಳು ಅವುಗಳಲ್ಲಿ ಆನಂದಪಡುವದಿಲ್ಲ. ಜ್ಞಾನಿಗಳಾದರೋ ಕಬ್ಬಿನ ರಸದಂತೆ ಸಾರಭೂತವಾದ ಪರಮಾತ್ಮನನ್ನು ಹೊಂದಿ ಆನಂದಾಮೃತಸಾಗರದಲ್ಲಿ ಮುಳುಗಿರುತ್ತಾರೆ. ಆದುದರಿಂದ ದುಃಖದಿಂದ ಪಾರಾಗಬೇಕೆಂಬುವವರು ಕಬ್ಬಿನ ಸಿಪ್ಪೆಯಂತೆ ನಿಸ್ಸಾರವಾದ ವಿಷಯಗಳ ಮೇಲಿನ ಆಸೆಯನ್ನು ತೊರೆದು ಸಾರ ಭೂತನಾದ ಪರಮಾತ್ಮನನ್ನು ಆಶ್ರಯಿಸಿ ಸುಖಿಗಳಾಗಬೇಕು."

## ೧೬. ವಿಷಯಗಳ ಮೇಲಿನ ಆಶೆಯನ್ನು ತಪ್ಪಿಸಿಕೊಳ್ಳಲು ಏನುಮಾಡಬೇಕು ?

ವಿಷಯಗಳನ್ನು ಧ್ಯಾನಿಸಿದರೆ ಅಂದರೆ 'ಅಂತಹ ವಸ್ತುವಿದೆ, 'ಇಂತಹ ವಸ್ತುವಿದೆ'-ಎಂಬೀ ಮೊದಲಾದ ವರ್ಣನೆಗಳನ್ನು ಕೇಳಿದರೆ, ಸಿನಿಮಾದ ಪ್ರಸಿದ್ಧ ಪತ್ರಗಳನ್ನು ಓದಿದರೆ, ವಾದ್ಯದ ಶಬ್ದವನ್ನು ಕೇಳಿದರೆ, ಹುಡುಗರು ಓಡಿ ಹೋಗುವಂತೆ, ಅವುಗಳಲ್ಲಿ ಮನುಷ್ಯರಿಗೆ ಸಂಗವುಂಟಾಗುತ್ತದೆ. ಅದರಿಂದ 'ಅವುಗಳನ್ನು ಸಂಪಾದಿಸಬೇಕು, ನೋಡಬೇಕು, ಅನುಭವಿಸಬೇಕು' - ಎಂಬ ಇಚ್ಛೆಯುಂಟಾಗುತ್ತದೆ. ಇಚ್ಛೆಯು ಈಡೇರದೇ ಹೋಗಲು ಅದೇ ಸಿಟ್ಟಿನ ರೂಪವನ್ನು ತಾಳುತ್ತದೆ. ಸಿಟ್ಟಿನಿಂದ ಸಂಮೋಹವೂ, ಅದರಿಂದ ಸ್ಮೃತಿನಾಶವೂ, ಅದರಿಂದ ಬುದ್ಧಿನಾಶವೂ, ಬುದ್ಧಿನಾಶದಿಂದ ತನ್ನ ನಾಶವೂ ಉಂಟಾಗುತ್ತದೆ.- ಎಂಬುದು ತಿಳಿದ ವಿಷಯವೇ ಆಗಿದೆ. ಹೀಗಿರುವದರಿಂದ

ಈ ಆತ್ಮನಾಶವನ್ನು ತಪ್ಪಿಸಿಕೊಳ್ಳಲು ಮನುಷ್ಯನು ಮೊದಲು ವಿಷಯಗಳ ಕಡೆಗೆ ವಿಮುಖನಾಗಬೇಕು ಅಂದರೆ ಬೆನ್ನು ತಿರುಗಿಸಬೇಕು. -ಇದು ಹೇಗೆ ಸಾಧ್ಯವೆಂದರೆ ವಿಷಯಗಳ ದೋಷಗಳನ್ನೂ ತತ್ತ್ವದ ಮಹಿಮೆಯನ್ನೂ ವಿಚಾರದಿಂದ ತಿಳಿದು ಪರಮಾತ್ಮತತ್ತ್ವದ ಕಡೆಗೆ ಗಮನವಿಡಬೇಕು. ಪರಮಾತ್ಮನಲ್ಲಿ ಗಮನವಿಟ್ಟಷ್ಟೂ ವಿಷಯಗಳ ಧ್ಯಾನ ತಪ್ಪುತ್ತದೆ. ಪರಮಾತ್ಮನ ಕಡೆಗೆ ಲಕ್ಷ್ಯವಿಡದೇ ವಿಷಯಗಳಿಂದ ದೂರವಾಗುತ್ತೇವೆಂದರೆ ಆ ವಿಷಯಗಳೇ ನಮ್ಮ ಮನಸ್ಸಿನಲ್ಲಿ ಭದ್ರವಾಗಿ ಬೇರೂರಿ ನಿಂತುಬಿಡುತ್ತವೆ. ಅವುಗಳ ಧ್ಯಾನವೇ ಹೆಚ್ಚು ಹೆಚ್ಚಾಗುತ್ತಾ ಬರುತ್ತದೆ. ಆದುದರಿಂದ ಪರಮಾತ್ಮನ ಕಡೆಗೆ ಲಕ್ಷ್ಯವಿಡುವದೇ ವಿಷಯಗಳ ಕಡೆಗೆ ವಿಮುಖರಾಗಲು ಕಾರಣ. ಚತುರ್ಥೀ ಚಂದ್ರನನ್ನು ನೋಡಬಾರದೆಂದಿಷ್ಟನ್ನೇ ಹೇಳಿದರೆ ಸುಮ್ಮನೇ ಇದ್ದವರೂ ಹೋಗಿ ನೋಡಿ ಬರುತ್ತಾರೆ; ಅದಕ್ಕೆ ಬದಲು ಗಣೇಶನ ಚರಿತ್ರೆಯನ್ನೂ ಮಹಿಮೆಯನ್ನೂ ಹೇಳಿದರೆ ಕೇಳುತ್ತಾ ಕುಳಿತು ಚಂದ್ರನ ಕಡೆಗೆ ಗಮನವನ್ನೇ ಕೊಡುವುದಿಲ್ಲ. ನೋಡುವುದೂ ಇಲ್ಲ. ಹಾಗೆಯೇ ಪರಮಾತ್ಮನ ಕಡೆಗೆ ದೃಷ್ಟಿಯನ್ನು ಹಾಕಿದರೆ ವಿಷಯಗಳ ದೃಷ್ಟಿಯು ತಾನಾಗಿಯೇ ತಪ್ಪುತ್ತದೆ; ಇದಕ್ಕೆ ಬದಲಾಗಿ ವಿಷಯಗಳನ್ನು ಭೋಗಿಸಿ ಅವನ್ನು ಬಿಡುತ್ತೇನೆಂದು ಪ್ರಾರಂಭಿಸಿದರೆ ವಿಷಯದ ಅಮಲು ಇನ್ನೂ ಏರಿ ಮಾಡಬಾರದ ಕಾರ್ಯಗಳನ್ನು ಮಾಡಿ ಅನರ್ಥಕ್ಕೇ ಈಡಾಗುತ್ತಾರೆ. ಉದಾಹರಣೆಗೆ ಒಂದೂರಿನ ತರುಣರೂ ವೃದ್ಧರೂ ಎಲ್ಲರೂ ಸೇರಿ ಒಂದು ಕಾರ್ಯನಿರ್ವಾಹಕ್ಕಾಗಿ ಶಕ್ತಿಯನ್ನು ಸಂಪಾದಿಸಲು ಮದ್ಯಪಾನ ಮಾಡಿಬಿಟ್ಟರಂತೆ. ಎಲ್ಲರಿಗೂ ಮದ್ಯದ ಅಮಲು ತಲೆಗೇರಿತು. ವೃದ್ಧರು ತರುಣರ ಹತ್ತಿರಕ್ಕೆ ಹೋಗಿ ಹೊಡೆಯುತ್ತೀರ? ಎಂದರು. ತರುಣರು ಹೊಡೆದರು. ಪರಿಣಾಮವೇನಾಯಿತು? ವೃದ್ಧರು ಸಾಯುವ ಸಮಯ ಒದಗಿತು. ಅಷ್ಟರಲ್ಲಿ ಮದ್ಯಪಾನವನ್ನು ಮಾಡದೇ ಇದ್ದ ವಿವೇಕಿಗಳಾದ ಪರಗ್ರಾಮದವರು ಬಂದು ನೋಡಿ ವೃದ್ಧರನ್ನು ಬಿಡಿಸಿದರು. ವೃದ್ಧರು ಬದುಕಿಕೊಂಡರು. ಇದರಂತೆಯೇ ವಿಷಯಧ್ಯಾನವೂ, ವಿಷಯಸೇವೆಯೂ ವಿವೇಕವನ್ನು ಹಾಳುಮಾಡಿ ಅಕಾರ್ಯವನ್ನು ಮಾಡಿಸಿ ನಾಶಮಾಡಿಸುತ್ತವೆ.

ಮದ್ಯಪಾನವನ್ನು ಮಾಡದವರಂತೆ ಇರುವ ವಿಷಯವಿಮುಖರಾದ, ಪರಮಾತ್ಮನ ಕಡೆಗೆ ಮನಸ್ಸನ್ನು ಹಾಕಿರುವ ಸತ್ಪುರುಷರ ಸಹವಾಸದಿಂದ ಮನಸ್ಸನ್ನು ಬಿಗಿಹಿಡಿದು ಪ್ರಪಂಚಕ್ಕೆ ಬೆನ್ನು ತಿರುಗಿಸಬೇಕು.

## ೧೭. ಮನಸ್ಸನ್ನು ಹೇಗೆ ಜಯಿಸುವದು ?

ಮನಸ್ಸನ್ನು ಜಯಿಸುವದು ನಿಜವಾಗಿಯೂ ಕಷ್ಟಸಾಧ್ಯವಾದದ್ದೇ ಹೌದು. ಗಾಯತ್ರೀಜಪವನ್ನು ಆರಂಭಿಸಿದರೆ ಒಂದೆರಡು ಜಪವನ್ನು ಮಾಡುವದರೊಳಗಾಗಿ ಮನಸ್ಸು ಎಲ್ಲೆಲ್ಲಿಯೋ ಹೋಗಿಬಿಟ್ಟಿರುತ್ತದೆ ಎಂಬುದನ್ನು ಅರಿಯದವರಾರು? ಆದರೂ ಒಂದಾನೊಂದು ಚಿತ್ತ ಭೂಮಿಕೆಯಲ್ಲಿ ಒಂದೇ ಬಗೆಯಾದ ಚಿತ್ತವೃತ್ತಿಯನ್ನು ಆಡಿಸುತ್ತಿರುವದರಿಂದಲೂ, ಕಂಡಿರುವ, ಮತ್ತು ಕಾಣದ, ನಮಗೆ ಬೇಕಾದ ಭೋಗಗಳಲ್ಲಿ ದೋಷವನ್ನು ಕಂಡು ಅದನ್ನು ಬಯಸದೇ ಇರುವದರಿಂದಲೂ ಮನಸ್ಸನ್ನು ಜಯಿಸಲು ಸಾಧ್ಯವಾಗುತ್ತದೆ. ಉದಾಹರಣೆಗೆ :- ಉತ್ತಮ ಭಕ್ಷ್ಯವನ್ನು ಮಾಡುತ್ತಿರುವದನ್ನು ನೋಡಿದ ಹುಡುಗನಿಗೆ ಬಾಯಿಯಲ್ಲಿ ನೀರು ಬರುತ್ತದೆ. ಆದರೆ ತಾಯಿತಂದೆಗಳು "ಅಪ್ಪ, ಇದನ್ನು ದೇವರ ನಿವೇದನೆಗಾಗಿ ಮಾಡುತ್ತಿದ್ದಾರೆ. ಇದನ್ನು ದೇವರಿಗೆ ನಿವೇದನೆ ಮಾಡದೇ ತಿಂದರೆ ದೇವರು ಮೆಚ್ಚುವದಿಲ್ಲ, ಮತ್ತೂ ಶಿಕ್ಷಿಸುತ್ತಾನೆ". ಎಂದು ಮುಂತಾಗಿ ಆ ವಿಧವಾದ ಭಕ್ಷ್ಯಗಳನ್ನು ತಿನ್ನುವದರಲ್ಲಿ ಉಂಟಾಗಬಹುದಾದ ದೋಷಗಳನ್ನು ವಿವರಿಸಿದರೆ ವಿವೇಕಾದಿಗಳಿಲ್ಲದ ಚಿಕ್ಕಹುಡುಗನೂ ಸಹ ಮನಸ್ಸನ್ನು ಬಿಗಿಹಿಡಿದುಕೊಂಡು ದೇವರ ಪೂಜೆಯು ಎಷ್ಟು ಹೊತ್ತಿಗೆ ಆಗುತ್ತದೆಯೊ? ದೇವರಿಗೆ ನಿವೇದನವು ಎಷ್ಟು ಹೊತ್ತಿಗೆ ಆಗುವದೊ? ಎಂದು ನಿರೀಕ್ಷಿಸುತ್ತಾ ಸುಮ್ಮನಿರುತ್ತಾನೆ. ಹೀಗೆಯೇ "ವಿಷಯಗಳನ್ನು ಸಂಪಾದಿಸುವದು ಕಷ್ಟ. ಅವುಗಳನ್ನು ರಕ್ಷಿಸುವದು ಮತ್ತೂ ಕಷ್ಟ. ಅವುಗಳ ಭೋಗವಂತೂ ಇಂದ್ರಿಯಗಳಿಗೂ ವಿಷಯಗಳಿಗೂ ಸಂಬಂಧವಾದ ಕ್ಷಣಮಾತ್ರ ಇರತಕ್ಕದ್ದು. ಉದಾಹರಣೆಗೆ :- ಗೋಧಿಯನ್ನೂ ಕಬ್ಬನ್ನೂ ಬೆಳೆಯುವದು ಎಷ್ಟು ಕಷ್ಟ? ಬೆಳೆದ ಮೇಲೆ ಅವನ್ನು ಭಕ್ಷ್ಯಕ್ಕೆ

ಅನುಕೂಲವಾಗುವ ರವೆ, ಸಕ್ಕರೆ ಮುಂತಾದ ರೂಪಗಳಿಗೆ ತರುವದು ಎಷ್ಟು ಕಷ್ಟ? ತುಪ್ಪವನ್ನು ಹೊಂದುವದು ಎಷ್ಟು ಕಷ್ಟ? ಇವೆಲ್ಲವನ್ನೂ ಸಿದ್ಧಮಾಡಿಕೊಂಡು ಭಕ್ಷ್ಯವನ್ನು ಮಾಡಿ ಆ ಭಕ್ಷ್ಯಕ್ಕೂ ನಾಲಿಗೆಗೂ ಸಂಬಂಧವಾಗಿರುವ ಅಲ್ಪ ಕಾಲದಲ್ಲಿ ಮಾತ್ರವೇ ಭೋಗವು. ತಿಂದು ಮುಗಿದ ಕೂಡಲೇ ಆ ಭೋಗವು ನಾಶವಾಗುವದು. 'ಖರ್ಚಾಯಿತಲ್ಲ? ಅಜೀರ್ಣವಾಯಿತಲ್ಲ?' - ಎಂದು ಮುಂತಾದ ಕಷ್ಟಗಳು ಅನಂತರ ಬರುತ್ತವೆ. ಈ ರೀತಿಯಲ್ಲಿ ವಿಷಯ ಸುಖವು ಕ್ಷಣಿಕವಾದದ್ದು. ದುಃಖಾಂತವಾದದ್ದು. ಆದ್ಯಂತವುಳ್ಳದ್ದು -ಎಂದು ಮುಂತಾಗಿ ವಿವರಿಸಿದರೆ ಎಂತಹ ಮನುಷ್ಯನಾದರೂ ಈ ರೀತಿಯಲ್ಲಿ ವಿವರಿಸಿದ್ದನ್ನು ಮನಸ್ಸಿಗೆ ತಂದುಕೊಂಡರೆ ಇಂದ್ರಿಯಗಳನ್ನೂ, ಮನಸ್ಸನ್ನೂ ನಿಗ್ರಹಿಸಬಹುದು. ವಿಷಯಗಳ ದೋಷವನ್ನು ಕಂಡುಕೊಂಡು ಮನಸ್ಸನ್ನು ಹಿಂತಿರುಗಿಸಿ ಪರಮಾತ್ಮನ ಕಡೆಗೆ ಆ ಮನಸ್ಸು ಹರಿಯುವಂತೆ ಮಾಡಬಹುದು

ಈ ರೀತಿಯಲ್ಲಿ ವಿಷಯಗಳ ದೋಷವನ್ನು ತಿಳಿಯುವದಕ್ಕಿಂತ ಮೊದಲು ವಿಷಯಗಳನ್ನು ದೂರಮಾಡಿರಬೇಕು. ಹತ್ತಿರವಿದ್ದರೆ ಮನಸ್ಸನ್ನು ಎಳೆದುಬಿಡುತ್ತದೆ. ಉದಾಹರಣೆಗೆ :- ಋಷ್ಯಶೃಂಗ ಋಷಿಯು ತಂದೆಯಾದ ವಿಭಾಂಡಕ ಮುನಿಯೊಬ್ಬನನ್ನು ನೋಡಿದ್ದನೇ ಹೊರತು ಮತ್ತೊಬ್ಬ ಪುರುಷನನ್ನಾಗಲೀ ಸ್ತ್ರೀಯನ್ನಾಗಲೀ ನೋಡಿದವನೇ ಅಲ್ಲ. ಕಾಮಾದಿಗಳನ್ನು ಕಂಡವನೇ ಅಲ್ಲ. ಅರಣ್ಯದಲ್ಲಿ ಪಿತೃಶುಶ್ರೂಷೆ, ಅಧ್ಯಯನ, ತಪಸ್ಸು ಮೊದಲಾದದ್ದನ್ನು ಮಾಡಿಕೊಂಡು ಇದ್ದವನು. ರೋಮಪಾದರಾಜನು ಕಳುಹಿಸಿದ ವೇಶ್ಯಾಸ್ತ್ರೀಯರನ್ನು ನೋಡಿ ಅವರ ಹಾವಭಾವಗಳನ್ನು ಕಂಡು ಕಾಮವಶನಾದನು. ಅವರು ಕರೆದುಕೊಂಡುಹೋದಕಡೆಗೆ ಅಂದರೆ ರೋಮಪಾದರಾಜನ ಊರಿಗೆ ಹೋದನು. ಅಲ್ಲಿ ರಾಜನಮಗಳಾದ ಶಾಂತಾದೇವಿಯನ್ನು ವಿವಾಹ ಮಾಡಿಕೊಂಡನು. ಹೀಗೆ ತಪಸ್ವಿಯೂ ಸಹ ಸ್ತ್ರೀ ದರ್ಶನ ಭಾಷಣಾದಿಗಳಿಂದ ಕಾಮವಶನಾಗಿರುವಾಗ ಸಾಮಾನ್ಯ ಜನರ ಪಾಡನ್ನು ಹೇಳತಕ್ಕದ್ದೇನಿದೆ? ಆದುದರಿಂದ ವಿಷಯಗಳಲ್ಲಿ

ದೋಷದರ್ಶನವನ್ನು ವಿವೇಕದಿಂದ ಹೊಂದುವವರೆಗೂ ಅವುಗಳಿಂದ ದೂರವಾಗಿರಬೇಕು. ಜೇನು ಹುಳುಗಳು ಊರಿನ ಹತ್ತಿರವಿರುವ ಮರಗಳಲ್ಲಿ ಜೇನು ತುಪ್ಪವನ್ನು ಕೂಡಿಟ್ಟು ಜನಗಳು ಅದನ್ನು ತೆಗೆದುಕೊಂಡು ಹೋದದ್ದನ್ನು ಕಂಡು ಹೇಗೆ ಜನಗಳಿರದ, ದೂರವಾದ ಕಾಡಿನಲ್ಲಿ ಹೂಟಿಯನ್ನು ಕಟ್ಟಿ ತುಪ್ಪವನ್ನು ಕೂಡಿಟ್ಟು ತಿಂದು ಆನಂದಪಡುತ್ತವೆಯೋ, ಅದೇ ರೀತಿಯಲ್ಲಿ ಮನುಷ್ಯನೂ ವಿಷಯಗಳಿಂದ ದೂರನಾಗಿ ಏಕಾಂತವಾಸಮಾಡಿ ವಿಷಯಗಳ ಸೆಳೆತಕ್ಕೆ ಸಿಕ್ಕದೇ ಪರಮಾತ್ಮನ ಕಡೆಗೆ ತಿರುಗಿ ಆನಂದವನ್ನು ಪಡೆಯಬೇಕು.

ವಿಷಯಗಳು ಸಿಕ್ಕದಿರುವಾಗ 'ವಿಷಯಗಳ ಮೇಲಿನ ಬಯಕೆಯನ್ನು ಇವನು ಹೊಂದಿಲ್ಲ 'ಎಂಬುದು ನಿಜವಾದ ಮನೋಜಯವಲ್ಲ. ಆಹಾರಾದಿಗಳನ್ನು ತೆಗೆದುಕೊಳ್ಳದೇ ದುರ್ಬಲನಾಗಿದ್ದಾಗ ಯಾವವಿಷಯಗಳ ಭೋಗವೂ ಬೇಕಾಗುವದಿಲ್ಲ; ಆದರೆ ಬಲಬಂದ ಒಡನೆಯೇ ಅವುಗಳಿಗೆ ಹಾತುವರೆಯುತ್ತಾನೆ; ಆದುದರಿಂದ ಇದು ಜಯವಲ್ಲ. ಒಬ್ಬ ಕಳ್ಳನಿಗೆ ಕದಿಯಲು ಅವಕಾಶವಾಗದಂತೆ ಸರ್ವವಿಧವಾದ ಭದ್ರತೆಯನ್ನೂ ಮಾಡಿ "ಇವನು ಕಳ್ಳನಲ್ಲ; ಏಕೆಂದರೆ ಇವನು ಕದಿಯಲಿಲ್ಲ". ಎಂದು ಹೇಳಿದರೆ ಅವನು ಕಳ್ಳನಲ್ಲದೇ ಹೋಗುತ್ತಾನೆಯೆ? ಇಲ್ಲ. ಅವಕಾಶ ದೊರೆತಕ್ಷಣದಲ್ಲಿಯೂ ಕಳ್ಳತನವನ್ನು ಮಾಡುತ್ತಾನೆ; ಆದರೆ "ಕಳ್ಳತನವು ಮಾಡತಕ್ಕದ್ದಲ್ಲ. ಅಧರ್ಮಭೂತವಾದದ್ದು" -ಎಂದು ಯಾವನು ತಿಳಿದಿರುತ್ತಾನೆಯೋ ಅವನು ಕಳ್ಳತನವನ್ನು ಮಾಡಲು ಸಂಪೂರ್ಣವಾದ ಅವಕಾಶವಿದ್ದಸಮಯದಲ್ಲಿಯೂ ಕಳ್ಳತನವನ್ನು ಮಾಡುವದಿಲ್ಲ. ಇದೇ ರೀತಿಯಲ್ಲಿ ಮನಸ್ಸಿನ ವೃತ್ತಿಗಳನ್ನು ನಿರೋಧಮಾಡಿದ ಮಾತ್ರದಿಂದ ನಿಜವಾದ ಮನೋಜಯವಾಗುವದಿಲ್ಲ; ಏಕೆಂದರೆ ಎಷ್ಟು ಹೊತ್ತು ಚಿತ್ತವೃತ್ತಿನಿರೋಧವನ್ನು ಮಾಡಿಕೊಂಡಿರುತ್ತಾನೆಯೋ, ಅಷ್ಟು ಹೊತ್ತು ವಿಷಯಗಳನ್ನು ಬಯಸದೇ ದ್ರಷ್ಟೃವಾದ ಆತ್ಮನ ನಿರತಿಶಯವಾದ ಆನಂದಸ್ವರೂಪದಲ್ಲಿರುತ್ತಾನೆ. ನಿರುದ್ಧವಾದ ಚಿತ್ತವೃತ್ತಿಯು

ಹೊರಮುಖವಾಯಿತು ಎಂದರೆ ಮೊದಲಿಗಿಂತಲೂ ಹೆಚ್ಚಿನ ವೇಗದಲ್ಲಿ ಭೋಗೇಚ್ಛೆಯು ಎದ್ದುಕೊಳ್ಳುತ್ತದೆ. ಊಟ ತಿಂಡಿಗಳಿಗೆ ಹಾತುವರೆಯುತ್ತಾನೆ; ಆದುದರಿಂದ ಇದೂ ನಿಜವಾದ ಮನೋಜಯವಲ್ಲ. ಯಾವಾತನು "ಆತ್ಮನೊಬ್ಬನೇ ಪರಮಾರ್ಥವಾಗಿರತಕ್ಕವನು. ಅವನಿಗಿಂತ ಭಿನ್ನವಾದ ಯಾವ ವಸ್ತುವೂ ಇಲ್ಲ. ಮನಸ್ಸೂ ಸಹ ಬರೀ ತೋರ್ರಿಕೆಯ ರೂಪವುಳ್ಳದ್ದು. ನೆರಳಿನಂತೆ ಸತ್ತಾಶೂನ್ಯವಾದದ್ದು. ಆತ್ಮನ ಸತ್ತೆಯಿಂದಲೇ ಇವೆಲ್ಲವೂ ಇರುವಂತೆ ತೋರುತ್ತಿರುತ್ತವೆ" -ಎಂಬ ಶ್ರುತಿಸಮ್ಮತವಾದ, ಗುರೂಪದಿಷ್ಟವಾದ ಜ್ಞಾನವನ್ನು ಹೊಂದಿ 'ಆತ್ಮನಿಗಿಂತ ಭಿನ್ನವಾಗಿ ಮನಸ್ಸೆಂಬುದಾಗಲೀ ವಿಷಯಗಳೆಂಬುವಾಗಲೀ ಪರಮಾರ್ಥವಾಗಿ ಇಲ್ಲವೇ ಇಲ್ಲ. ಆತ್ಮನೊಬ್ಬನೇ ಸತ್ಯ ಸ್ವರೂಪನು' ಎಂಬ ಅನುಭವರೂಪವಾದ ಜ್ಞಾನವನ್ನು ಹೊಂದಿರುತ್ತಾನೆಯೋ ಇವನೇ ಮನಸ್ಸನ್ನೂ ಇಂದ್ರಿಯಗಳನ್ನೂ ನಿಜವಾಗಿ ಜಯಿಸಿದವನು. ಆ ಜಯವೇ ನಿಜವಾದ ಮನೋಜಯ. ಮನಸ್ಸೂ, ಇಂದ್ರಿಯಗಳೂ ವಿಷಯಗಳೂ ಮನಸ್ಸಾಗಿಯೂ, ಇಂದ್ರಿಯಗಳಾಗಿಯೂ, ವಿಷಯಗಳಾಗಿಯೂ ಇಲ್ಲದೇ ಇರುವದರಿಂದಲೂ, ಆತ್ಮರೂಪವೇ ಆಗಿರುವದರಿಂದಲೂ ಪುನಃ ಅವು ಹೊರಮುಖವಾಗಲಾರವು. ಇಂದ್ರಿಯಗಳು ವಿಷಯದ ಕಡೆ ಹೋಗಲಾರವು. ಇದೇ ನಿಜವಾದ ಮನೋಜಯವು.

## ೧೮. ಪ್ರಪಂಚವನ್ನು ಸ್ವಪ್ನಸಮವೆಂದು ತಿಳಿಯಬೇಕು.

ಯಾವ ಭ್ರಾಂತಿ ಸಿದ್ಧವಸ್ತುವೂ ಭ್ರಾಂತಿಕಾಲದಲ್ಲಿ ಪರಮಾರ್ಥವಾದದ್ದೆಂದೇ ತಿಳಿಯಬರುತ್ತದೆ. ಭ್ರಾಂತಿಸಿದ್ಧವಸ್ತುವೆಂಬುದು ಬಾಧಿತವಾದ ಮೇಲೆಯೇ ತಿಳಿಯಬರುತ್ತದೆ. ಉದಾಹರಣೆಗೆ ಒಂದು ಹಗ್ಗವನ್ನು ಒಬ್ಬ ಮನುಷ್ಯನು ಭ್ರಾಂತಿಯಿಂದ ಸರ್ಪವನ್ನಾಗಿ ತಿಳಿಯುತ್ತಾನೆ. ಆಗ ಆ ಸರ್ಪವನ್ನು ನಿಜವಾದ ಸರ್ಪವೆಂದೇ ತಿಳಿದಿರುವದರಿಂದ ಹೆದರಿ ಓಡುತ್ತಾನೆ. ವಿಚಾರಮಾಡಿದಮೇಲೆ "ಇದು ಸರ್ಪವಲ್ಲ, ಬರೀ ಹಗ್ಗವು" - ಎಂದು ತಿಳಿದಮೇಲೆ ಹಗ್ಗವೇ ಸರ್ಪವಾಗಿ ತೋರಿತು. ಸರ್ಪ ಎಂಬುದು

ಮಿಥ್ಯಾಭೂತವಾದದ್ದು. ಅಂದರೆ ಬರೀ ತೋರ್ಕೆಯ ರೂಪದ್ದು "ಹಗ್ಗವೇ ನಿಜವಾಗಿ ಇರತಕ್ಕದ್ದು" - ಎಂಬುದು ಮನದಟ್ಟಾಗುತ್ತದೆ. ಹೀಗೆಯೇ ಈಗ ಈ ಸ್ಥಾವರಜಂಗಮಾತ್ಮಕವಾದ ಪ್ರಪಂಚವು ಪರಮಾರ್ಥವಾಗಿರುತ್ತದೆ -ಎಂದೇ ಎಲ್ಲರಿಗೂ ತಿಳಿಯ ಬರುತ್ತದೆ. ಇದನ್ನು ವಿಚಾರಮಾಡಿ ತಿಳಿಯಬೇಕಾದದ್ದು ಅವಶ್ಯಕವಾಗಿರುತ್ತದೆ. ಏಕೆಂದರೆ ಮೇಲೆಕೊಟ್ಟಿರುವ ಉದಾಹರಣೆಯಿಂದ ಯಾವ ಭ್ರಾಂತಿಸಿದ್ಧವಸ್ತುವಾಗಲೀ ಭ್ರಾಂತಿಕಾಲದಲ್ಲಿ ಸತ್ಯವಾದದ್ದಾಗಿಯೇ ತಿಳಿಯಬರುತ್ತದೆ. ಬಾಧಿತವಾದಮೇಲೆ ಅದರ ಅನೃತತ್ತ್ವವು ತಿಳಿಯಬರುತ್ತದೆ; ಆದುದರಿಂದ ಪ್ರಪಂಚವೂ ಭ್ರಾಂತಿ ಸಿದ್ಧವಸ್ತುವೊ? ಅಥವಾ ಅಬಾಧಿತವಾದ ಪರಮಾರ್ಥವಸ್ತುವೊ? ಎಂಬುದನ್ನು ವಿಮರ್ಶಿಸುವದು ಅವಶ್ಯಕವಾದದ್ದು. ಇದನ್ನು ವಿಮರ್ಶಿಸುವ ಮೊದಲು ಸ್ವಪ್ನಸ್ವರೂಪವನ್ನು ನೋಡೋಣ. ಸ್ವಪ್ನವು ಅನುಭವಿಸುವ ಕಾಲದಲ್ಲಿ ಜಾಗ್ರತ್ತಾಗಿಯೇ ತಿಳಿದು ಬಂದಿರುತ್ತದೆ. ಎಚ್ಚರವಾದ ಮೇಲೆ 'ಅದು ಸ್ವಪ್ನವು' ಎಂಬ ಅನುಭವ ಬರುತ್ತದೆ. ಯಾವ ಶಾಸ್ತ್ರಜ್ಞನೂ ಸ್ವಪ್ನವನ್ನು ಅನುಭವಿಸುವ ಕಾಲದಲ್ಲಿ ಸ್ವಪ್ನವೆಂದು ತಿಳಿಯುವದ ಕ್ಕಾಗುವದಿಲ್ಲ. ಆಗ ಅದನ್ನು ಜಾಗ್ರತ್ತೆಂದೇ ಅನುಭವಿಸುತ್ತಾನೆಂಬುದು ಎಲ್ಲರ ಅನುಭವದಲ್ಲಿಯೂ ಇರತಕ್ಕ ವಿಷಯವಾಗಿರುತ್ತದೆ. ಎಚ್ಚರವಾದಮೇಲೆ ಎಚ್ಚರದಲ್ಲಿರುವವನು ಕಳೆದುಹೋದದ್ದನ್ನು ಸ್ವಪ್ನವನ್ನಾಗಿ ವ್ಯವಹರಿಸುತ್ತಾನೆ. ಜಾಗ್ರತ್ತಿನಲ್ಲಿರುವಾಗ ಸ್ವಪ್ನವನ್ನು ನೋಡಿ ಅನುಭವಿಸಿ "ಇದು ಸ್ವಪ್ನ" ವೆಂದು ವ್ಯವಹರಿಸಲು ಯಾರಿಗೂ ಸಾಧ್ಯವಿಲ್ಲ. ಸ್ವಪ್ನ ಹೋದಮೇಲೆಯೇ ಎಚ್ಚರವಾಗುವದು. ಒಬ್ಬನಿಗೇ ಏಕಕಾಲದಲ್ಲಿ ಸ್ವಪ್ನಜಾಗ್ರತ್ತುಗಳೆರಡೂ ಅನುಭವಕ್ಕೆ ಬರುವಂತಿಲ್ಲ; ಆದುದರಿಂದ ಸ್ವಪ್ನವನ್ನು ಸ್ವಪ್ನವೆಂದು ವ್ಯವಹರಿಸುವಾಗ ಸ್ವಪ್ನವಿರುವುದಿಲ್ಲ. ಎಚ್ಚರವಿರುತ್ತದೆ. ಎಚ್ಚರದಲ್ಲಿದ್ದವನು ಆಗ ಸ್ವಪ್ನವನ್ನು ನೋಡದೆ "ಸ್ವಪ್ನ" ಎಂದು ಕಳೆದುಹೋದದ್ದನ್ನು ತೀರ್ಮಾನಿಸುತ್ತಾನೆ.

ಸ್ವಪ್ನವನ್ನು ಹೇಗೆ ಅನುಭವಿಸುತ್ತಾನೆ? ಸ್ವಪ್ನವನ್ನು ಅನುಭವಿಸುವ ಕಾಲದಲ್ಲಿ ಸ್ವಪ್ನದ ಮನುಷ್ಯನು ನಿಜವಾಗಿ ಸ್ವಪ್ನವನ್ನು ಜಾಗ್ರತ್ತನ್ನಾಗಿಯೇ

ಅನುಭವಿಸುತ್ತಾನೆ. ಸ್ವಪ್ನದಲ್ಲಿ ಇಲ್ಲಿಯಂತಹ ದೇಹವನ್ನೋ, ಬೇರೆಯ ವಿಧವಾದ ದೇಹವನ್ನೋ, ವಿರುದ್ಧ ಜಾತಿಯ ಸಿಹ್ಮಾದಿ ದೇಹವನ್ನೋ, ಮೃಗಪಕ್ಷಿಗಳ ದೇಹವನ್ನೋ ತಾನೇ ಎಂದೂ, ಆ ದೇಹದಲ್ಲಿರತಕ್ಕ ಇಂದ್ರಿಯಗಳು ತನ್ನವೇ ಎಂದೂ ತಿಳಿದು ತಾನು ಬ್ರಾಹ್ಮಣನು, ಕ್ಷತ್ರಿಯನು, ಹುಲಿಯು, ಕರಡಿಯು, ಪಕ್ಷಿಯು, ಹಾರಾಡುವ ಮನುಷ್ಯನು-ಎಂದು ಮುಂತಾಗಿ ತಿಳಿದಿರುತ್ತಾನೆ. ಅಲ್ಲಿಯೂ "ಪ್ರಪಂಚವು ಅನಾದಿಕಾಲ ಪ್ರವೃತ್ತವಾದದ್ದು; ಅನಂತವಾದದ್ದು, ಪರಮಾರ್ಥವಾದದ್ದು. ರೂಪಗಳು ಮಾತ್ರವೇ ವಿಕಾರವಾಗತಕ್ಕವು" -ಎಂದು ತಿಳಿದಿರುತ್ತಾನೆ. ದೇಶವನ್ನೂ ಕಾಲವನ್ನೂ ಪರಮಾರ್ಥವಾದದ್ದನ್ನಾಗಿಯೇ ತಿಳಿದಿರುತ್ತಾನೆ. ನಿಜವಾಗಿ ರೈಲಿನಲ್ಲಿ ಕುಳಿತು ಪ್ರಯಾಣಮಾಡಿ ಕಾಶಿಗೆ ಹೋಗಿ ಗಂಗಾನದಿಯಲ್ಲಿ ಪುರೋಹಿತರ ಮುಖದಿಂದ ಸಂಕಲ್ಪವನ್ನು ಹೇಳಿಸಿಕೊಂಡು ತಾನೂ ಹೇಳಿ ಸ್ನಾನವನ್ನು ಮಾಡುತ್ತಾನೆ. ದಾನಧರ್ಮಗಳನ್ನು ಮಾಡುತ್ತಾನೆ. ತನಗೆ ನೂರು ವರ್ಷಗಳು ಆಗಿರುವಂತೆ ತಿಳಿದು ಶತಾಭಿಷೇಕವನ್ನು ಮಾಡಿಸಿಕೊಳ್ಳುತ್ತಾನೆ. ಮರಿಮಗನು ಹುಟ್ಟಿದ ನಿಮಿತ್ತದಿಂದ ಕನಕಾಭಿಷೇಕವನ್ನು ಮಾಡಿಸಿಕೊಳ್ಳುತ್ತಾನೆ. ರಾಜನಾಗಿ ರಾಜ್ಯವ್ಯವಹಾರವನ್ನು ನಡೆಸುತ್ತಾನೆ. ಶತ್ರುಗಳೊಡನೆ ಹೋರಾಡಿ ಶತ್ರುಗಳನ್ನು ಸಂಹರಿಸುತ್ತಾನೆ, ಅಥವಾ ತಾನೇ ಮಡಿಯುತ್ತಾನೆ. ವ್ಯಾಪಾರಸ್ಥನಾಗಿ ವ್ಯಾಪಾರವನ್ನು ಮಾಡುತ್ತಾನೆ. ಸಾಲವನ್ನು ಕೊಡುವದು, ತೆಗೆಯುವದು-ಮುಂತಾದ ವ್ಯವಹಾರವನ್ನು ಮಾಡುತ್ತಾನೆ. ಅತಿಥಿಸತ್ಕಾರ, ಬ್ರಾಹ್ಮಣಭೋಜನ ಮೊದಲಾದದ್ದನ್ನು ಮಾಡುತ್ತಾ ಮಾಡಿಸುತ್ತಾ ಇರುತ್ತಾನೆ. ಉಪಾಧ್ಯಾಯನಾಗಿ ಪಾಠವನ್ನು ಹೇಳಿಕೊಡುತ್ತಾನೆ. ಭಿಕ್ಷುಕನಾಗಿ ಭಿಕ್ಷೆಯನ್ನು ಬೇಡುತ್ತಾನೆ. ರೋಗಿಯಾಗಿ ನರಳುತ್ತಾನೆ. ಹುಡುಗನಾಗಿ ಆಟವಾಡುತ್ತಾನೆ. ಇಷ್ಟೂ ಅಲ್ಲದೆ ಕಳೆದು ಹೋದ ವಿಷಯಗಳನ್ನು ಸ್ಮರಿಸಿಕೊಳ್ಳುತ್ತಾನೆ. ಕನಸುಗಳನ್ನು ಕಾಣುತ್ತಾನೆ. ತಾನು ಎಚ್ಚರದಲ್ಲಿದ್ದೇನೆಂದು ತಿಳಿದು "ನನಗೆ ಕನಸಾಯಿತು. ಹೀಗಾಯಿತು. ಹಾಗಾಯಿತು"-ಎಂದು ಮುಂತಾಗಿ ಇತರರಿಗೆ

ಹೇಳುತ್ತಾನೆ. ತಾನೊಬ್ಬನಲ್ಲದೆ ಬೇಕಾದಷ್ಟು ಬೇರೆ ಬೇರೆ ಜನರನ್ನು ನೋಡುತ್ತಾನೆ. ಅವರೊಡನೆ ವ್ಯವಹರಿಸುತ್ತಾನೆ. ಜಾಗ್ರತ್ತಿನ ದೃಷ್ಟಿಯಿಂದ ನೋಡಿದಾಗ ವಿರುದ್ಧವಾಗಿ ಕಾಣಬರುವ-ಮನುಷ್ಯರು ರೆಕ್ಕೆಗಳುಳ್ಳವರಾಗಿ ಆಕಾಶದಲ್ಲಿ ಹಾರಾಡುವಂತೆ ಕಾಣುವ ದೃಶ್ಯವನ್ನೂ, ಅಸಂಭವವಾಗಿ ಕಾಣಬರುವ-ತನ್ನ ತಲೆಯನ್ನು ತಾನು ಕತ್ತರಿಸಿ ತನ್ನ ಕೈಯಲ್ಲಿಯೇ ಹಿಡಿದುಕೊಂಡು ತಾನೇ ನೋಡುತ್ತಿರುವಂತೆಯೂ ಕಾಣುವ ದೃಶ್ಯವನ್ನೂ ನೋಡುತ್ತಾನೆ; ಆದರೆ ಅವನು ಆಗ ಅವನ್ನು ವಿರುದ್ಧವಾದವನ್ನಾಗಿಯೂ ಅಸಂಭವವಾದವನ್ನಾಗಿಯೂ ತಿಳಿಯುವದಿಲ್ಲ. ಅದನ್ನು ಸಹಜವಾದವುಗಳನ್ನಾಗಿಯೇ ತಿಳಿಯುತ್ತಾನೆ. ಎಚ್ಚರದಲ್ಲಿ ಕುಳಿತವನು ಬೇಕಾದರೆ ಅವನ್ನೆಲ್ಲ 'ಬರಿಯ ಮನಸ್ಸಿನ ತೋರ್ಕೆ' -ಎಂದು ಮುಂತಾಗಿ ತನಗೆ ತೋರಿದಂತೆ ಹೇಳಬಹುದು; ಆದರೆ ಆಗ ಮಾತ್ರ ನಿಜವಾಗಿಯೇ ಪರಮಾರ್ಥವಾಗಿಯೇ ಎಲ್ಲವೂ ಸಮಂಜಸವಾಗಿ ನಡೆಯುತ್ತಿವೆ-ಎಂದೇ ತಿಳಿಯುತ್ತಾನೆ -ಎಂಬುದು ಎಲ್ಲರಿಗೂ ಅನುಭವದಲ್ಲಿರುವ ವಿಷಯವಾಗಿದೆ. ಇಷ್ಟೇಅಲ್ಲದೇ ಪ್ರಮಾಣಗಳನ್ನುಪಯೋಗಿಸಿ ಪ್ರಮೇಯಗಳನ್ನು ತಿಳಿಯುತ್ತಾನೆ. ಕಣ್ಣು ಮೊದಲಾದ ಇಂದ್ರಿಯಗಳನ್ನುಪಯೋಗಿಸಿ ರೂಪ ಮೊದಲಾದ ವಿಷಯಗಳನ್ನು ತಿಳಿಯುತ್ತಾನೆ. ಅನುಮಾನ ಪ್ರಮಾಣದಿಂದ ಅನುಮೇಯವಾದ ವಿಷಯಗಳನ್ನು ತಿಳಿಯುತ್ತಾನೆ. ಶಬ್ದಪ್ರಮಾಣದಿಂದ ಪ್ರತ್ಯಕ್ಷಾದಿಗಳಿಗೆ ಅಗಮ್ಯವಾದ ಸ್ವರ್ಗನರಕಾದಿಗಳನ್ನು ತಿಳಿಯುತ್ತಾನೆ. ಸತ್ಯಮಿಥ್ಯಾವಿಭಾಗಗಳನ್ನು ಮಾಡಿಕೊಂಡು ಇದು ಸತ್ಯವಾದದ್ದು, ಇದು ಅನೃತವಾದದ್ದು-ಎಂದು ಮುಂತಾಗಿ ವಿಭಾಗಮಾಡಿ ತಿಳಿಯುತ್ತಾನೆ. ಕನಸನ್ನು ಅನುಭವಿಸಿದೆನೆಂದು ಕನಸನ್ನು ವಿವರಿಸುತ್ತಾನೆ. ಕನಸಿನ ವಸ್ತುಗಳನ್ನು ಅನೃತವಾದವನ್ನಾಗಿಯೂ ಎಚ್ಚರದವೆಂದು ಅನುಭವಿಸುತ್ತಿರುವ ಆಗಿನ ವಸ್ತುಗಳನ್ನು ಸತ್ಯವಾದವನ್ನಾಗಿಯೂ ತಿಳಿಯುತ್ತಾನೆ.

ಹೀಗೆ ಎಚ್ಚರದಂತೆಯೇ ಸಮಸ್ತ ವ್ಯವಹಾರವನ್ನೂ ಮಾಡುತ್ತಿದ್ದವನು ನಿಜವಾಗಿ ಎಚ್ಚೆತ್ತಕೂಡಲೇ ಹಿಂದೆ ಕಂಡದ್ದು ಯಾವದೂ ಇಲ್ಲದ್ದರಿಂದ

ಹಿಂದಿನ ಸರ್ವವ್ಯವಹಾರವನ್ನೂ ಒಂದಿಷ್ಟೂ ಇಲ್ಲದ ಬರಿಯ ತೋರ್ಿಕೆಯ ಕನಸನ್ನಾಗಿ ತಿಳಿಯುತ್ತಾನೆಂಬುದು ಸರ್ವರಿಗೂ ಗೊತ್ತೇಇದೆ. ಮತ್ತೂ ಸ್ವಪ್ನವನ್ನು ಅನುಭವಿಸಿದ ತಾನು ಮಾತ್ರ ಇಲ್ಲವೆಂದೆನಿಸಿಕೊಳ್ಳದ ರೀತಿಯಲ್ಲಿ ಇದ್ದೇನೆಂಬುದೂ ಸರ್ವರಿಗೂ ಗೊತ್ತೇ ಇದೆ. ಇದೇ ರೀತಿಯಲ್ಲಿ ಎಚ್ಚರದಲ್ಲಿ ನೋಡಿದ, ಊಹಿಸಿದ, ಕೇಳಿದ ಸಮಸ್ತ ಚರಾಚರಾತ್ಮಕವಾದ ಪ್ರಪಂಚವೂ ಸ್ವಪ್ನದಲ್ಲಿ ಒಂದಿಷ್ಟೂ ಇಲ್ಲದಂತೆ ಅಳಿಸಿ ಹೋಗಿರುವದರಿಂದ ಎಚ್ಚರವೂ, ಎಚ್ಚರದಲ್ಲಿ ಕಂಡ ಸಮಸ್ತ ಪ್ರಪಂಚವೂ ಸ್ವಪ್ನ ಪ್ರಪಂಚದಂತೆಯೇ ಬರೀ ತೋರ್ಿಕೆಯೇ ಹೊರತು ಪರಮಾರ್ಥವಾಗಿ ಇರತಕ್ಕದಲ್ಲ -ಎಂಬುದು ವಿಮರ್ಶಕರಿಗೆ ಮನದಟ್ಟಾಗುವದರಲ್ಲಿ ಯಾವ ಸಂದೇಹವೂ ಇಲ್ಲ. ಭ್ರಾಂತಿಕಾಲದಲ್ಲಿ ಭ್ರಾಂತಿಸಿದ್ಧವಾದ ವಸ್ತುವು ಸತ್ಯವಾಗಿ ತೋರುವಂತೆ ಎಚ್ಚರದ ಪ್ರಪಂಚವೂ ಭ್ರಾಂತಿರೂಪವಾದ ಎಚ್ಚರ ಕಾಲದಲ್ಲಿ ಸತ್ಯವಾಗಿಯೇ ತೋರಿದರೂ ಸ್ವಪ್ನದಲ್ಲಿ ಇಲ್ಲದಿರುವದರಿಂದ ಸ್ವಪ್ನದಂತೆಯೇ ಹುಸಿ ತೋರ್ಿಕೆರೂಪವಾದದ್ದು -ಅದನ್ನು ಅನುಭವಿಸಿದವನು ಮಾತ್ರ ಇಲ್ಲವೆಂದೆನಿಸಿಕೊಳ್ಳದಿರುವುದರಿಂದ ಸತ್ಯವಾದವನು-ಎಂದು ಸಿದ್ಧವಾಗುತ್ತದೆ. ಈ ರೀತಿಯಲ್ಲಿ ಎರಡು ಅವಸ್ಥೆಗಳೂ ಅನುಭವಕಾಲದಲ್ಲಿ ಒಂದೇ ರೀತಿಯಲ್ಲಿರುವದರಿಂದ ಸ್ವಪ್ನವು ಹೇಗೆ ಬರೀ ತೋರ್ಿಕೆಯ ರೂಪದ್ದೋ ಹಾಗೆಯೇ ಎಚ್ಚರವೂ ಬರೀ ತೋರ್ಿಕೆಯ ರೂಪದ್ದು; ಆದುದರಿಂದ ಎಚ್ಚರವೂ ಸ್ವಪ್ನಸಮಾನವಾದದ್ದು -ಎಂದು ತಿಳಿಯಬರುತ್ತದೆ.

"ಕನಸು ಎಚ್ಚರದ ಮನಸ್ಸಿನ ತೋರ್ಿಕೆಯು. ಎಚ್ಚರದ ಮನಸ್ಸು ಎಚ್ಚರದಲ್ಲಿ ನಾನಾ ವಿಧವಾದ ಅನುಭವಗಳನ್ನು ಅನುಭವಿಸಿ ಆ ಅನುಭವಗಳಿಂದುಂಟಾದ ಸಂಸ್ಕಾರವನ್ನು ಹೊಂದಿರುತ್ತದೆ. ಈ ಸಂಸ್ಕಾರವು ಸರಿಯಾಗಿ ಪೂರ್ಣವಾಗಿ ಸ್ವಪ್ನದಲ್ಲಿ ಉದ್ಬುದ್ಧವಾದರೆ ಇಲ್ಲಿರುವಂತೆಯೇ ಅಲ್ಲಿಯೂ ವಿಷಯಗಳನ್ನು ಅನುಭವಿಸುತ್ತಾನೆ. ಇಲ್ಲಿಯಂತೆ ಮನುಷ್ಯರನ್ನೂ ಮೃಗಪಕ್ಷಿಗಳನ್ನೂ ರಾಜ್ಯಾದಿ ವ್ಯವಹಾರವನ್ನೂ ಕಾಣುತ್ತಾನೆ ಆ ಸಂಸ್ಕಾರವು ಸರಿಯಾಗಿ ಉದ್ಬುದ್ಧವಾಗದೇ ಇದ್ದಾಗ ಒಂದು ಅನುಭವದ

ಸಂಸ್ಕಾರೈಕದೇಶವನ್ನು ಮತ್ತೊಂದು ಅನುಭವದ ಸಂಸ್ಕಾರೈಕದೇಶದೊಡನೆ ಸೇರಿಸಿ ಅಂದರೆ ಮನುಷ್ಯನು ಓಡಾಡಿದ್ದನ್ನು ನೋಡಿದ ಅನುಭವ ಸಂಸ್ಕಾರದಲ್ಲಿ ಓಡಾಡಿದ್ದನ್ನು ಬಿಟ್ಟು ಮನುಷ್ಯರು ಎಂಬ ಅನುಭವದ ಸಂಸ್ಕಾರಕ್ಕೆ ಪಕ್ಷಿಗಳು ಹಾರಾಡಿದ್ದನ್ನು ನೋಡಿದ ಅನುಭವದ ಸಂಸ್ಕಾರದ ಏಕದೇಶವಾದ ಹಾರಾಡಿದ್ದನ್ನು ಸೇರಿಸಿಕೊಂಡು ಮನುಷ್ಯನಾಗಿ ಹಾರಾಡುವಂತೆ ಅನುಭವಿಸುತ್ತಾನೆ. ಹೀಗೆ ಜಾಗ್ರತ್ತಿನ ಮನಸ್ಸು ಬೇರೆ ಬೇರೆಯ ಅನುಭವದಿಂದುಂಟಾದ ಸಂಸ್ಕಾರಗಳ ಸಂಯೋಗ, ವಿಯೋಗ, ಏಕದೇಶ ಸಂಯೋಗ, ವಿಯೋಗ, ವಿರುದ್ಧ ಸಂಸ್ಕಾರ ಸಂಯೋಗ ಇತ್ಯಾದಿಗಳಿಂದ ಅನುರೂಪವಾದ, ಅನನುರೂಪವಾದ, ವಿರುದ್ಧವಾದ ದೃಶ್ಯಗಳನ್ನು ಅನುಭವಿಸುವಂತೆ ತಿಳಿಯುತ್ತದೆ; ಆದುದರಿಂದ ಸ್ವಪ್ನವು ಜಾಗ್ರತ್ತಿನ ಮನಸ್ಸಿನ ವಿವಿಧವಿಲಾಸವು. ಜಾಗ್ರತ್ತು ಪರಮಾರ್ಥವಾದ ವಿಷಯಗಳಿಂದ ತುಂಬಿದ ಸ್ಥಾನವು. 'ಇಷ್ಟು ಪರಸ್ಪರ ಭೇದವಿರುವಾಗ ಇವೆರಡೂ ಹೇಗೆ ಒಂದು ಆದಾವು? ಹೀಗೆ ಭಿನ್ನ ಭಿನ್ನ ರೂಪದಲ್ಲಿರುವಾಗ ಜಾಗ್ರತ್ತನ್ನು ಸ್ವಪ್ನ ಸಮವೆಂದು ಹೇಳುವುದು ಯಾವ ನ್ಯಾಯವು?" ಎಂಬ ಶಂಕೆ ಬರುವದು ಸಹಜವಾಗಿದೆ. ಆದರೆ ನಿಜವಾಗಿ ವಿಮರ್ಶಿಸಿದರೆ ಜಾಗ್ರತ್ತಿನ ಮನಸ್ಸು ಸ್ವಪ್ನಕ್ಕೆ ಹೋಗಬಲ್ಲದೆ? ಎಂದೆಂದಿಗೂ ಹೋಗಲಾರದು-ಎಂಬುದನ್ನು ವಿಚಾರದಿಂದ ಮನಗಾಣಬೇಕು.

ಜಾಗ್ರತ್ತಿಲ್ಲಿ ವಿದ್ಯಾವಂತನಾದವನು, ಐಶ್ವರ್ಯವಂತನಾದವನು, ಶೂರನಾದವನು ಸ್ವಪ್ನದಲ್ಲಿ ವಿದ್ಯಾವಿಹೀನನೂ, ದರಿದ್ರನೂ ಹೇಡಿಯೂ ಆಗಿರುತ್ತಾನೆ. ಒಂದೇ ಮನಸ್ಸಾಗಿದ್ದರೆ ಹೇಗೆ ಇದನ್ನು ಒಪ್ಪುತ್ತದೆ? ಜಾಗ್ರತ್ತಿನ ಅರ್ಧರಾತ್ರಿಯಲ್ಲಿ ಮಲಗಿದವನು ಕನಸಿನಲ್ಲಿ ಮಧ್ಯಾಹ್ನದ ಬಿಸಿಲಿನ ತಾಪವನ್ನು ಅನುಭವಿಸುತ್ತಾನೆ. ಹೀಗೆ ಕಾಲಭೇದವನ್ನು ಒಂದೇ ಮನಸ್ಸಾಗಿದ್ದರೆ ಹೇಗೆ ಒಪ್ಪುತ್ತದೆ? ಜಾಗ್ರತ್ತಿನ ಮೈಸೂರಲ್ಲಿ ಮಲಗಿದವನು ಕಾಶಿಯಲ್ಲಿದ್ದಂತೆ ಕನಸಿನಲ್ಲಿ ಕಾಣುತ್ತಾನೆ. ಹೀಗೆ ದೇಶಭೇದವನ್ನು ಒಂದೇ ಮನಸ್ಸಾಗಿದ್ದರೆ ಹೇಗೆ ಒಪ್ಪುತ್ತದೆ? ತಾನು ಮನುಷ್ಯನಾಗಿ ಹಾರಾಡಿದಂತೆ

ಕನಸಿನಲ್ಲಿ ಅನುಭವಿಸುತ್ತಾನೆ. ಒಂದೇ ಮನಸ್ಸಾಗಿದ್ದರೆ ಮನುಷ್ಯನು ಹಾರಾಡುವದನ್ನು ಹೇಗೆ ಒಪ್ಪುತ್ತದೆ? ಜಾಗ್ರತ್ತಿನ ಭಿನ್ನ ಭಿನ್ನ ಸಂಸ್ಕಾರಗಳ ಏಕದೇಶವನ್ನು ಒಬ್ಬನಲ್ಲಿ ಒಂದು ಕಾಲದಲ್ಲಿ ಕೂಡಿಸಿದ್ದನ್ನು ಅನುಭವಿಸದಿರುವಾಗ ಸ್ವಪ್ನದಲ್ಲಿ ಹೇಗೆ ಕೂಡಿಸಿಕೊಂಡು ಮನುಷ್ಯನಾಗಿ ಹಾರಾಡುವಂತೆ ಅನುಭವಿಸಬಲ್ಲನು? ಮತ್ತು ಜಾಗ್ರತ್ತಿನಲ್ಲಿ ತನ್ನ ತಲೆಯನ್ನು ನೋಡಿರಬಹುದು. ಇನ್ನೊಬ್ಬನು ಇನ್ನೊಬ್ಬನ ತಲೆಯನ್ನು ಕತ್ತರಿಸಿದ್ದನ್ನು ನೋಡಿರಬಹುದು. ಆದರೆ ಆ ಅನುಭವಗಳಿಂದುಂಟಾದ ಸಂಸ್ಕಾರಗಳನ್ನು ವಿರುದ್ಧವಾಗಿ ಸೇರಿಸಿಕೊಂಡು ತನ್ನ ತಲೆಯನ್ನು ಕತ್ತರಿಸಿದ್ದನ್ನಾಗಿ ತಾನೇ ನೋಡುವಂತೆ ಅನುಭವಿಸುವದು ಹೇಗೆ ಸಾಧ್ಯ? 'ಸರಿಯಾಗಿದೆ' ಎಂದೇ ಅನುಭವಿಸುತ್ತಿರುತ್ತಾನೆ. ಆದುದರಿಂದ ಸ್ವಪ್ನದ ಮನುಷ್ಯ, ಸ್ವಪ್ನದ ಮನಸ್ಸು, ಸ್ವಪ್ನದ ಇಂದ್ರಿಯಗಳು, ಸ್ವಪ್ನದ ವಿಷಯಗಳು, ಸ್ವಪ್ನದ ದೇಶ, ಸ್ವಪ್ನದ ಕಾಲ-ಎಲ್ಲವೂ ಜಾಗ್ರತ್ತಿನವುಗಳಿಗಿಂತ ಭಿನ್ನವಾದವುಗಳು ಎಂದು ಇಷ್ಟವಿಲ್ಲದಿದ್ದರೂ ಒಪ್ಪಲೇಬೇಕು. ಸ್ವಪ್ನದಲ್ಲಿಯೂ ಜಾಗ್ರತ್ತಿನಂತೆಯೇ ಪ್ರಮಾತೃಪ್ರಮಾಣ ಪ್ರಮೇಯಾದಿ ವ್ಯವಹಾರಗಳೆಲ್ಲವೂ ಇದ್ದೇ ಇರುತ್ತವೆ. ಸತ್ಯಮಿಥ್ಯಾವಿಭಾಗಗಳಿರುತ್ತವೆ. ಅನಾದ್ಯನನ್ತವೆಂದು ವ್ಯವಹರಿಸಲ್ಪಡುವ ದೇಶ ಕಾಲಗಳಿರುತ್ತವೆ. ಜೀವೇಶ್ವರಾದಿವ್ಯವಹಾರವಿರುತ್ತದೆ. ಅದನ್ನು ಜಾಗ್ರತ್ತೆಂದೂ ಅಲ್ಲಿ ಒಂದು ಸ್ವಪ್ನವಾಯಿತೆಂದೂ ವ್ಯವಹರಿಸುತ್ತಾನೆ. ಎಚ್ಚರದ ಅನುಭವದಂತೆ ನೂರಾರು ವರ್ಷಗಳ ಅನುಭವ ವ್ಯವಹಾರವನ್ನು ಮಾಡುತ್ತಾನೆ. ಎಚ್ಚರದ ಕಾಲದ ದೃಷ್ಟಿಯಿಂದ ಸ್ವಪ್ನದ ಕಾಲವನ್ನು ಸ್ವಲ್ಪ ಕಾಲವೆಂದೆನ್ನಬಹುದು; ಆದರೆ ನಿಜವಾಗಿ ಸ್ವಪ್ನದ ದೃಷ್ಟಿಯಿಂದ ನೋಡಿದಾಗ ನೂರಾರು ವರ್ಷಗಳ ಕಾಲವನ್ನು ಅನುಭವಿಸಿದಂತೆಯೇ ಅನುಭವಿಸುತ್ತಾನೆ. ಈ ರೀತಿಯಲ್ಲಿ ಆ ಕಾಲದಲ್ಲಿ ಎಲ್ಲ ವಿಧದಲ್ಲಿಯೂ ಜಾಗ್ರತ್ತಾಗಿಯೂ ಸತ್ಯವಾದದ್ದಾಗಿಯೂ ಅನುಭವಿಸಲ್ಪಟ್ಟಿದ್ದರೂ ನಿಜವಾಗಿ ಎಚ್ಚತ್ತ ಮೇಲೆ ಅವೆಲ್ಲವೂ ಬಾಧಿತವಾಗಿರುವವದರಿಂದ ಹೇಗೆ ಸ್ವಪ್ನವು ಮಿಥ್ಯಾಭೂತವಾದದ್ದೆಂದು ಹೇಳಲ್ಪಡುತ್ತದೆಯೋ, ಹಾಗೆಯೇ ಜಾಗ್ರದವಸ್ಥೆಯೂ ತತ್ಕಾಲದಲ್ಲಿ ಸತ್ಯವಾದದ್ದಾಗಿ ತೋರಿದರೂ, ಸ್ವಪ್ನದಲ್ಲಿ

ಒಂದಿಷ್ಟೂ ಇಲ್ಲದಂತೆ ನಿಶ್ಶೇಷವಾಗಿ ಇಲ್ಲದಿರುವದರಿಂದ ಎಚ್ಚರವೂ ಸ್ವಪ್ನದಂತೆಯೇ ಮಿಥ್ಯಾಭೂತವಾದದ್ದು ಎಂಬುದು ನಿರ್ವಿವಾದ ವಿಷಯವು. 'ನನಗೆ ಇಂತಹ ಸ್ವಪ್ನವಾಯಿತು. ಅಂತಹ ಸ್ವಪ್ನವಾಯಿತು' ಎಂದು ಮುಂತಾಗಿ ಸ್ವಪ್ನದ ಬರುವಿಕೆಯನ್ನೂ ಹೋಗುವಿಕೆಯನ್ನು ನೋಡುವ ಆತ್ಮನು ಮಾತ್ರ ಅಬಾಧಿತನಾಗಿರುವದರಿಂಲೂ,ಅವ್ಯಭಿಚರಿತಸ್ವರೂಪದವನಾಗಿರುವದ ರಿಂದಲೂ ಪರಮಾರ್ಥವಾದ ಸತ್ಸ್ವರೂಪನು. ಎಂಬುದು ನಿರ್ವಿವಾದವಾಗಿ ಸಿದ್ಧವಾಗುತ್ತದೆ; ಆದುದರಿಂದ ಜಾಗ್ರತ್ತು ಸ್ವಪ್ನಸಮಾನವೆಂಬ ಮಾತು ವಿಚಾರದಿಂದ ನಿರ್ಣಯಿಸಿದ ಮಾತು-ಎಂಬುದನ್ನು ವಿಮರ್ಶಕರು ಮನಗಾಣ ಬಹುದಾಗಿದೆ.

## ೧೯. ಸುಷುಪ್ತಿಯನ್ನು ನೋಡಬೇಕು

ಸುಷುಪ್ತಿಯೆಂದರೆ ಈಗ ನಾವು ಹೇಗೆ ತಿಳಿದಿರುತ್ತೇವೆ-ಎಂದರೆ, ಎಚ್ಚರದಲ್ಲಿ ದೇಹೇಂದ್ರಿಯಗಳು ಕೆಲಸಮಾಡಿ ಆಯಾಸಗೊಂಡಿರುತ್ತವೆ. ಶಕ್ತಿಮೀರಿ ನಡೆದಾಗ ಕಾಲುಗಳು ಸೋಲುತ್ತವೆ. ಹೆಚ್ಚು ಕೈಗೆಲಸವನ್ನು ಮಾಡಿದಾಗ ಕೈ ಸೋಲುತ್ತದೆ. ಹೀಗೆಯೇ ಇತರ ಇಂದ್ರಿಯಗಳೂ ಹೆಚ್ಚು ಹೆಚ್ಚು ಕೆಲಸಮಾಡಿ ಸೋಲುತ್ತವೆ. ಕನಸ್ಸಿನಲ್ಲಿ ಮನಸ್ಸು ನಾನಾ ವಿಧವಾದ ರೂಪವನ್ನು ಹೊಂದಿ ವ್ಯವಹರಿಸಿ ಸೋಲುತ್ತದೆ. ಹೀಗೆ ದೇಹವೂ, ಇಂದ್ರಿಯಗಳೂ ಮತ್ತು ಮನಸ್ಸೂ ಎದ್ದಾಗಿನಿಂದ ಗಾಢನಿದ್ರೆಯನ್ನು ಹೊಂದುವವರೆಗೂ ನಾನಾ ವಿಧವಾದ ಕೆಲಸಗಳನ್ನು ಮಾಡಿ ಬಹಳ ಆಯಾಸಗೊಂಡಿರುತ್ತವೆ. ಹೀಗೆ ಆಯಾಸಗೊಂಡ ದೇಹೇಂದ್ರಿಯಗಳಿಗೆ ವಿಶ್ರಾಂತಿಯಿಲ್ಲದಿದ್ದರೆ ಇನ್ನುಮುಂದೆ ಕೆಲಸವನ್ನೇ ಮಾಡಲಾರದೆ ಹೋಗುತ್ತವೆ. ಆದುದರಿಂದ ಅವುಗಳಿಗೆ ವಿಶ್ರಾಂತಿಯು ಅವಶ್ಯಕವಾಗಿ ಬೇಕಾಗಿರುತ್ತದೆ. ಹೀಗೆ ದೇಹೇಂದ್ರಿಯಗಳೂ ಮನಸ್ಸೂ ಸಂಪೂರ್ಣ ವಿಶ್ರಾಂತಿಯನ್ನು ಪಡೆಯುವ ಸ್ಥಿತಿಗೆ ಸುಷುಪ್ತಿಯೆಂದು ಹೆಸರು. ಸುಷುಪ್ತಿಯಲ್ಲಿ ದೇಹವೂ, ಇಂದ್ರಿಯಗಳೂ, ಮನಸ್ಸೂ ಯಾವ ಕೆಲಸವನ್ನೂ ಮಾಡದೇ ಸಂಪೂರ್ಣವಾದ ವಿಶ್ರಾಂತಿಯನ್ನು ಪಡೆಯುತ್ತಿರುತ್ತವೆ -ಎಂದು

ಮುಂತಾಗಿ ಸಾಮಾನ್ಯವಾಗಿ ನಾವು ತಿಳಿದಿದ್ದೇವೆ. ಕೆಲವು ಶಾಸ್ತ್ರಜ್ಞರು ಸಹ "ಜೀವನು ಸುಷುಪ್ತಿಯಲ್ಲಿ ಜೀವತ್ವವನ್ನು ಬಿಡದೇ ಅವಿದ್ಯಾವೃತನಾಗಿರುತ್ತಾನೆ. ಅವಿದ್ಯಾವೃತನಾಗಿರುವದರಿಂದ ಅವನಿಗೆ 'ನಾನು, ಇದು'-ಎಂಬ ವಿಶೇಷ ಜ್ಞಾನವುಂಟಾಗುವುದಿಲ್ಲ. ಆಗಲೂ ಜೀವತ್ವವನ್ನು ಬಿಡದೇ ಹೊಂದಿಯೇ ಇರುತ್ತಾನೆ; ಆದರೆ ಯಾವ ಕಾರ್ಯವನ್ನೂ ಮಾಡದೇ ಸುಮ್ಮನೇ ಇರುತ್ತಾನೆ."ಎಂದು ಮುಂತಾಗಿ ವಿವರಿಸುತ್ತಿದ್ದಾರೆ. ಮತ್ತೆ ಕೆಲವರು "ಸುಷುಪ್ತಿಯಲ್ಲಿಯೂ ಜೀವನು ಜೀವನಾಗಿಯೇ ಇರುತ್ತಾನೆ. ಅಲ್ಲಿ ಜೀವನು ಜೀವನಾಗಿಲ್ಲದಿದ್ದರೆ ಸುಷುಪ್ತಿಯನ್ನು ಅನುಭವಿಸುವವನು ಯಾರು? ಅನುಭವಿಸುವವನಿಲ್ಲದೇ ಅನುಭವವೆಂಬುದೇ ಸಿದ್ಧವಾಗುವುದಿಲ್ಲ. ಅನುಭವವನ್ನು ಇಲ್ಲವೆನ್ನುವಹಾಗಿಲ್ಲ; ಆದುದರಿಂದ ಸುಷುಪ್ತಿಯಲ್ಲಿಯೂ ಜೀವನು ಸುಷುಪ್ತಿಯನ್ನು ಅನುಭವಿಸುವವನಾಗಿ ಇದ್ದೇ ಇರಬೇಕು. ನಾನು, ಇದು-ಎಂಬ ರೂಪದ ವಿಶೇಷಾನುಭವವು ಮನಸ್ಸು ಕೆಲಸ ಮಾಡದೇ ವಿಶ್ರಾಂತಿಯನ್ನು ಅನುಭವಿಸುತ್ತಿರುವದರಿಂದ ಉಂಟಾಗಲು ಸಾಧ್ಯವಿಲ್ಲ. ಹೀಗಲ್ಲದೇ ಸುಷುಪ್ತಿಯಲ್ಲಿ ಜೀವನು ಜೀವತ್ವವನ್ನು ಕಳೆದುಕೊಂಡಿರುತ್ತಾನೆ ಎಂದು ಹೇಳುವದಾದರೆ ಎಚ್ಚೆತ್ತ ಮೇಲೆ ಅದೇ ಜೀವನಾಗಿ ಬರುತ್ತಾನಲ್ಲ? ಇದು ಹೇಗೆ ಸಾಧ್ಯ? ಜೀವತ್ವವು ಹೋಗಿದ್ದಿದ್ದರೆ ಪುನಃ ಹೇಗೆ ಬರುತ್ತಿತ್ತು? ಇಲ್ಲದ್ದನ್ನು ಬರಿಸಲು ಯಾವ ಕಾರಣಕ್ಕೂ ಶಕ್ತಿ ಇಲ್ಲ. ಆದುದರಿಂದ ಸುಷುಪ್ತಿಯಲ್ಲಿಯೂ ಜೀವನು ಜೀವನಾಗಿಯೇ ಇರುತ್ತಾನೆ"-ಎಂದು ಮುಂತಾಗಿ ವಿವರಿಸುತ್ತಾರೆ.

ಈ ರೀತಿಯಲ್ಲಿ ವಿವರಿಸುವವರೆಲ್ಲರೂ ಎಚ್ಚರದಲ್ಲಿ ನಿಂತುಕೊಂಡು ಸುಷುಪ್ತಿಯ ವಿಚಾರದ ಮಾತುಗಳನ್ನು ಆಡತಕ್ಕವರು-ಎಂಬುವನ್ನು ಜ್ಞಾಪಕದಲ್ಲಿಡಬೇಕು. ನಿಜವಾಗಿ ಎಚ್ಚರವೆಂಬುದು ಹೇಗೆ ತನ್ನ ಸ್ವಂತ ಅನುಭವವೋ ಹಾಗೆಯೇ ಸುಷುಪ್ತಿಯೆಂಬುವೂ ತನ್ನ ಸ್ವಂತ ಅನುಭವವಾಗಿದೆ. ಅನುಭವವನ್ನು ಅನುಭವಿಸಿದಂತೆಯೇ ತಿಳಿಯಬೇಕೇ ಹೊರತು, ಅನುಭವವನ್ನು ಅನುಮಾನಾದಿಗಳಿಂದ ಅನುಭವಕ್ಕೆ ವಿರುದ್ಧವಾಗಿ

ವಿವರಿಸುವದು ಸರಿಯಲ್ಲ; ಆದುದರಿಂದ ಸುಷುಪ್ತಿಯ ಕಾಲದಲ್ಲಿ ಸುಷುಪ್ತಿಯ ಅನುಭವವು ಯಾವ ರೀತಿಯಾಗಿತ್ತು? ಎಂಬುದನ್ನು ಚೆನ್ನಾಗಿ ವಿಚಾರಮಾಡಿ ನಿರ್ಣಯಿಸುವದು ಅತ್ಯಂತ ಮುಖ್ಯವಾದದ್ದು. ಸುಷುಪ್ತಿಯ ಅನುಭವವು ಸಮಾಧ್ಯಾದಿ ಅನುಭವಗಳಂತೆ ಒಬ್ಬೊಬ್ಬನಿಗೆ ಮಾತ್ರ ಬರಬಹುದಾದ ಅನುಭವವಲ್ಲ. ಸರ್ವರಿಗೂ ಇರತಕ್ಕ ಅನುಭವವಾಗಿದೆ ; ಆದುದರಿಂದ ಸುಷುಪ್ತಿಯನ್ನು ಅನುಭವಿಸುವ ಕಾಲದಲ್ಲಿ ಆ ಅನುಭವವು ಯಾವ ರೀತಿಯಾಗಿತ್ತೆಂಬುದನ್ನು ಚೆನ್ನಾಗಿ ವಿಮರ್ಶಿಸಿದರೆ ಜೀವತ್ವವೇ ಮೊದಲಾದ ಸಮಸ್ತ ಭೇದವನ್ನೂ ತನ್ನ ಪರಮಾರ್ಥವಾದ ಅದ್ವಿತೀಯಾನನ್ದಸ್ವರೂಪದ ಆತ್ಮನಲ್ಲಿ ಲಯ ಮಾಡಿಕೊಂಡು ತಾನೂ ಆ ಆನನ್ದಾತ್ಮನಲ್ಲಿ ಒಂದಾಗಿರುತ್ತಾನೆ. "ಇದೇ ತನ್ನ ಪರಮಾರ್ಥವಾದ ಸ್ವರೂಪವು -ಆದುದರಿಂದ 'ನಾನು, ಇದು'-ಎಂಬ ವಿಶೇಷ ಜ್ಞಾನವನ್ನು ಹೊಂದಲು ಸಾಧ್ಯವಿಲ್ಲ" ಎಂದು ತಿಳಿಯದೇ ಇರುವದರಿಂದ ಮತ್ತೆ ಮತ್ತೆ ಆಯಾ ಮನುಷ್ಯನೇ ಆಗಿ ಎಚ್ಚರಗೊಳ್ಳುತ್ತಾನೆ. ಎಚ್ಚರದಲ್ಲಿರುವಾಗಲೇ ತನ್ನ ಸ್ವರೂಪವು 'ಅದ್ವಿತೀಯವಾದ ಆನಂದಾತ್ಮಸ್ವರೂಪವು' ಎಂದು ತಿಳಿದುಕೊಂಡರೆ ಕೃತಾರ್ಥನಾಗುತ್ತಾನೆ; ಎಂಬುದು ಎಲ್ಲರಿಗೂ ಮನದಟ್ಟಾಗುತ್ತದೆ. ಶ್ರೀ ಶಿವಾನಂದ ಸರಸ್ವತೀ ಸ್ವಾಮಿಗಳು ಸೂತ್ರರೂಪವಾಗಿ "ಸುಷುಪ್ತಿಯನ್ನು ನೋಡಬೇಕು"-ಎಂದು ಉಪದೇಶಿಸುತ್ತಿದ್ದರು. ಈ ಸೂತ್ರವಾಕ್ಯವು ಬೃಹದಾರಣ್ಯಕದ ದೃಪ್ತಬಾಲಾಕಿಗಾರ್ಗ್ಯ ಮತ್ತು ಅಜಾತ ಶತ್ರು - ಇವರುಗಳ ಸಂವಾದವನ್ನು ಸೂಚಿಸುತ್ತದೆ. ಅಲ್ಲಿ ದೃಪ್ತ ಬಾಲಾಕಿಗಾರ್ಗ್ಯನು ಸಮಷ್ಟಿಯಾದ ಪ್ರಾಣನನ್ನು ಬ್ರಹ್ಮವನ್ನಾಗಿ ತಿಳಿದಿದ್ದವನು. ಬಾಲಾಕಿಯು ಗರ್ಗಗೋತ್ರದಲ್ಲಿ ಹುಟ್ಟಿದವನು. ಅನುವಚನ ಸಮರ್ಥನು ಅಂದರೆ ವಾಗ್ಮಿಯು ಆದುದರಿಂದ ಗರ್ವಿತನಾಗಿದ್ದನು. ಈತನು ಸಮಷ್ಟಿ ಪ್ರಾಣವನ್ನು ಆತ್ಮನನ್ನಾಗಿ ತಿಳಿದವನಾಗಿದ್ದುದರಿಂದ ವ್ಯಷ್ಟಿಯಾದ ದೇಹಾದಿ ಸಂಘಾತವನ್ನು ಆತ್ಮನೆಂದು ತಿಳಿದ ಸಾಮಾನ್ಯ ಜನರಿಗಿಂತ ಬಹಳ ಮೇಲಾದವನು; ಆದರೆ ನಿಜವಾದ ಬ್ರಹ್ಮವನ್ನು ತಿಳಿಯದವನು; ಆದುದರಿಂದ

ಅವನಿಗೆ ಗರ್ವವಿದ್ದಿತು. ಆತನು ಒಂದು ದಿನ ಕಾಶಿಯ ರಾಜನಾದ ಅಜಾತಶತ್ರುವಿನ ಬಳಿಗೆ ಹೋಗಿ "ಬ್ರಹ್ಮವನ್ನು ನಿನಗೆ ಹೇಳಿಕೊಡುತ್ತೇನೆ" -ಎಂದು ಹೇಳಿದನು. ಆ ಅಜಾತಶತ್ರುವಾದರೋ ಸಮಷ್ಟಿಪ್ರಾಣವನ್ನು ಬ್ರಹ್ಮವನ್ನಾಗಿ ತಿಳಿದವನಲ್ಲದೇ ಅದಕ್ಕಿಂತ ಹೆಚ್ಚಿನವಾದ ಶುದ್ಧ ಬ್ರಹ್ಮವನ್ನೇ ಆತ್ಮವನ್ನಾಗಿ ತಿಳಿದವನಾಗಿದ್ದನು. ಆದುದರಿಂದ "ಈ ಮಾತನ್ನು ಹೇಳಿದ್ದಕ್ಕೆ ಸಂತೋಷದಿಂದ ಸಹಸ್ರ ಗೋವುಗಳನ್ನು ಕೊಡುತ್ತೇನೆ; ಏಕೆಂದರೆ ಎಲ್ಲರೂ ಜನಕನು ದಾನ ಮಾಡುವವನು ಜನಕನು ಕೇಳುವವ ಎಂದು ಜನಕನ ಬಳಿಗೇ ತತ್ತ್ವವನ್ನು ಹೇಳಲಿಚ್ಛೆಯುಳ್ಳವರೂ, ಏನನ್ನಾದರೂ ತೆಗೆದು ಕೊಳ್ಳಲಿಚ್ಛೆಯುಳ್ಳವರೂ ಹೋಗುತ್ತಾರೆ. ಇದೆಲ್ಲವೂ ನನ್ನಲ್ಲಿಯೂ ಸಂಭವವೆಂದು ನೀನು ತಿಳಿದು ಬ್ರಹ್ಮವನ್ನು ನಿನಗೆ ಹೇಳುತ್ತೇನೆಂದು ಹೇಳಿದೆಯಲ್ಲ" ಎಂದು ಅಜಾತಶತ್ರುವು ಹೇಳಿದನು.

ಆಗ ಬಾಲಾಕಿಯು "ಆದಿತ್ಯನು ಕಣ್ಣಿನ ಮೂಲಕವಾಗಿ ಹೃದಯದಲ್ಲಿ ಕರ್ತೃಭೋಕ್ತೃವಾಗಿದ್ದಾನೆ. ಚಂದ್ರನು ಮನಸ್ಸಿನ ಮೂಲಕವಾಗಿ ಹೃದಯದಲ್ಲಿ ಕರ್ತೃಭೋಕ್ತೃವಾಗಿದ್ದಾನೆ-ಎಂದು ಮುಂತಾಗಿ ಉಪಾಸನೆಯನ್ನು ಮಾಡಬೇಕು. ಅದೇ ಬ್ರಹ್ಮವು"ಎಂದು ಹೇಳಿದನು. ಇದನ್ನು ಕೇಳಿದ ಅಜಾತಶತ್ರುವು" ನೀವು ಹೇಳಿದ್ದೆಲ್ಲ ನನಗೆ ಗೊತ್ತಿದೆ" -ಎಂದು ಆದಿತ್ಯಾದಿಗಳ ಉಪಾಸನೆಯನ್ನೂ ಅವುಗಳ ಗುಣವಿಶೇಷಗಳನ್ನೂ, ಅವುಗಳ ಫಲವಿಶೇಷಗಳನ್ನೂ ಸಂಪೂರ್ಣವಾಗಿ ವಿವರಿಸಿದನು. ಕೊನೆಯಲ್ಲಿ ಗಾರ್ಗ್ಯನು ಸಮಷ್ಟಿಪ್ರಾಣರೂಪನಾದ, ಪ್ರಜಾಪತಿಯ ಬುದ್ಧಿಯಲ್ಲಿರುವ ಪುರುಷನನ್ನೇ ಅಧ್ಯಾತ್ಮವಾಗಿ ಬುದ್ಧಿಯ ಮೂಲಕ ಹೃದಯದಲ್ಲಿರುವ ಕರ್ತೃಭೋಕ್ತೃರೂಪವಾದ ಬ್ರಹ್ಮವನ್ನಾಗಿ ತಿಳಿಸಿದನು. ಆಗ ಅಜಾತಶತ್ರುವು "ಇದಿಷ್ಟೂ ನನಗೆ ತಿಳಿದಿರುವದೇ ಆಗಿದೆ. ಇನ್ನೂ ಇದಕ್ಕಿಂತ ಹೆಚ್ಚಿನ ಬ್ರಹ್ಮವನ್ನು ತಿಳಿದಿದ್ದರೆ ಹೇಳಿ" ಎಂದು ಕೇಳಲು ತನಗೆ ಇದಕ್ಕಿಂತ ಹೆಚ್ಚಿನ ಬ್ರಹ್ಮತ್ವ ತಿಳಿದಿರಲಿಲ್ಲವಾದುದರಿಂದ ಗಾರ್ಗ್ಯನು ಗರ್ವವನ್ನು ಬಿಟ್ಟು "ಎಲೈ ಅಜಾತಶತ್ರುವೆ, ನಾನು ನಿನ್ನ ಶಿಷ್ಯನಾಗಿದ್ದೇನೆ. ನನಗೆ ಇದಕ್ಕಿಂತ ಹೆಚ್ಚಿನ ಬ್ರಹ್ಮವು ತಿಳಿಯದು. ನೀನು ಅದನ್ನು ನನಗೆ ತಿಳಿಸು" -ಎನ್ನಲು ಅಜಾತಶತ್ರುವು

"ನಾನು ಕ್ಷತ್ರಿಯನು. ನೀನು ಬ್ರಾಹ್ಮಣನು. ಕ್ಷತ್ರಿಯನು ಬ್ರಾಹ್ಮಣನಿಗೆ ಉಪದೇಶ ಮಾಡುವದು ಯುಕ್ತವಲ್ಲ. ನಿನಗೆ ನಾನು ವಿಜ್ಞಾಪಿಸುತ್ತೇನೆ" -ಎಂದು ಹೇಳಿ ಆ ಗಾರ್ಗ್ಯನನ್ನು ಒಬ್ಬ ನಿದ್ದೆ ಮಾಡುತ್ತಿದ್ದ ಪುರುಷನ ಬಳಿಗೆ ಕರೆದುಕೊಂಡು ಹೋದನು. ಅಲ್ಲಿ ಅಜಾತಶತ್ರುವು ನಿದ್ರೆಮಾಡುತ್ತಿದ್ದವನನ್ನು ಪ್ರಾಣದೇವತೆಯ ಹೆಸರುಗಳಿಂದ 'ಬೃಹನ್, ಪಾಂಡರವಾಸ, ಸೋಮರಾಜನ್,' -ಎಂದು ಮುಂತಾಗಿ ಕರೆದನು. ಆ ಹೆಸರುಗಳಿಂದ ಕರೆದರೂ ಆ ನಿದ್ರೆಮಾಡುತ್ತಿದ್ದವನು ಎಚ್ಚರಗೊಳ್ಳಲಿಲ್ಲ. ಅನಂತರದಲ್ಲಿ ಆತನನ್ನು ಕೈಯಿಂದ ಹೊರಳಿಸಿ ಎಬ್ಬಿಸಲು ಆಗ ಆತನು ಎಚ್ಚರಗೊಂಡನು. ಇದರಿಂದ ಏನು ನಿರ್ಣಯವಾಯಿತು? ಗಾರ್ಗ್ಯನು ಉಪಾಸನೆ ಮಾಡುತ್ತಿದ್ದ ಸಮಷ್ಟಿ ಪ್ರಾಣವೇ ನಿಜವಾದ ದೇವತೆಯಾಗಿ ಆಗ ಇದ್ದಿದ್ದರೆ ಆ ಪ್ರಾಣನ ಹೆಸರನ್ನೂ ಗುಣವಿಶೇಷಗಳನ್ನೂ ಹೇಳಿ ಕರೆದಾಗ ಆತನು ಎಚ್ಚರಗೊಳ್ಳಬೇಕಾಗಿದ್ದಿತು. ಎಚ್ಚರಗೊಳ್ಳಲಿಲ್ಲ. ಗಾರ್ಗ್ಯನು 'ವಾಗಾದಿಗಳು ಸುಷುಪ್ತಿಯಲ್ಲಿ ಅಸ್ತವಾದರೂ ಪ್ರಾಣನೊಬ್ಬನು ಮಾತ್ರ ಅಸ್ತಮಿತನಾಗದೇ ಇರುತ್ತಾನೆ. ಈ ಪ್ರಾಣನು ತನಗೆ ಎರಡನೆಯವನಿಲ್ಲದ್ದರಿಂದ ಬೃಹನ್, ಇವನು ಸೋಮರಾಜನು' -ಎಂದು ಮುಂತಾಗಿ ತಿಳಿದಿದ್ದನು. ಇಂತಹ ಪ್ರಾಣನು ಅಲ್ಲಿ ಭೋಕ್ತೃವಾಗಿದ್ದಿದ್ದರೆ ಇವನು ಕೂಗಿದ ಹೆಸರನ್ನು ಭೋಗಿಸಬೇಕಾಗಿದ್ದಿತು. ಅಂದರೆ ತಿಳಿಯಬೇಕಾಗಿದ್ದಿತು;ಆದರೆ ತಿಳಿಯಲಿಲ್ಲ. ಆದುದರಿಂದ ಆಗ ಸಮಷ್ಟಿ ಪ್ರಾಣನು ಭೋಕ್ತೃವಾಗಿರಲಿಲ್ಲ-ಎಂದು ಸಿದ್ಧವಾಯಿತು. ಮತ್ತು ಆ ಶಬ್ದಕ್ಕೂ ತನಗೂ ಇರತಕ್ಕ ಸಂಬಂಧವನ್ನು ಯಾವದಾದರೂ ಕಾರಣದಿಂದ ತಿಳಿಯದೇ ಸುಮ್ಮನಿದ್ದನು ಎಂದು ಹೇಳುವದಕ್ಕೂ ಬರುವಂತಿಲ್ಲ; ಏಕೆಂದರೆ ಚಂದ್ರನೇ ಮೊದಲಾದ ದೇವತೆಯೇ ಅಧ್ಯಾತ್ಮದಲ್ಲಿ ಪ್ರಾಣನಾಗಿದ್ದಾರೆ-ಎಂದು ಒಪ್ಪಿರುವದರಿಂದ ಸಾಮಾನ್ಯ ಮನುಷ್ಯರಂತೆ ಸಂಬಂಧವನ್ನು ತಿಳಿಯಲಿಲ್ಲ; ಆದುದರಿಂದ ಸುಮ್ಮನಿದ್ದನು -ಎಂದು ಹೇಳುವದಕ್ಕೆ ಬರುವಂತಿಲ್ಲ. ತನ್ನ ವಿಶೇಷ ನಾಮಕ್ಕೂ ತನಗೂ ಇರತಕ್ಕ ಸಂಬಂಧವನ್ನು ತಿಳಿದು ಎಚ್ಚರಗೊಳ್ಳಲೇಬೇಕಾಗಿತ್ತು. ಹಾಗೆ ಎಚ್ಚರಗೊಳ್ಳದೇ ಇದ್ದದ್ದರಿಂದ ಆ ಸಮಷ್ಟಿ ಪ್ರಾಣಾತ್ಮರೂಪದಿಂದ ಆಗ ಆತನು

ಇರಲಿಲ್ಲವೆಂಬುದು ಸ್ಪಷ್ಟವಾಯಿತು.

'ಪ್ರಾಣವೆಂಬ ಪ್ರಸಿದ್ಧವಾದ ಹೆಸರನ್ನು ಬಿಟ್ಟು ಅಪ್ರಸಿದ್ಧವಾದ ಬೃಹತ್ ಮೊದಲಾದ ಹೆಸರುಗಳಿಂದ ಕರೆದದ್ದರಿಂದ ಎಚ್ಚರಗೊಳ್ಳಲಿಲ್ಲ.' ಎಂದು ಹೇಳುವದಕ್ಕೂ ಬರುವಂತಿಲ್ಲ; ಏಕೆಂದರೆ ಚಂದ್ರದೇವತೆಯಾದ ಪ್ರಾಣನು ಈ ಶರೀರದಲ್ಲಿ ಭೋಕ್ತೃವಾಗಿದ್ದಾನೆಂದು ಗಾರ್ಗ್ಯನು ತಿಳಿದಿದ್ದನು. ಹಾಗೆ ಚಂದ್ರದೇವತೆಯಾದ ಪ್ರಾಣವು ಇದ್ದಿದ್ದರೆ ದೇವತಾ ವಿಶೇಷ ನಾಮವನ್ನು ಹೇಳಿದಾಗ ತಿಳಿಯಬೇಕಾಗಿತ್ತು ; ಆದರೆ ತಿಳಿಯಲಿಲ್ಲ; ಆದುದರಿಂದ ಆಗ ಚಂದ್ರದೇವತೆಯಾದ ಪ್ರಾಣಸ್ವರೂಪದಿಂದ ಭೋಕ್ತೃವಾಗಿರಲಿಲ್ಲ - ಎಂಬುದು ಸ್ಪಷ್ಟವಾಗುತ್ತದೆ. ಮತ್ತು ಪ್ರಾಣವೂ, ಇಂದ್ರಿಯಗಳೂ, ದೇಹವೂ ಸಹ ಸಂಘಾತವಾಗಿರುವದರಿಂದ 'ಸಂಘಾತ ಪರಾರ್ಥತ್ವಾತ್' -ಎಂಬ ನಿಯಮದಿಂದ ಪ್ರಾಣಾದಿಗಳು ಪ್ರಾಣಾದಿಗಳಿಗಿಂತ ವ್ಯತಿರಿಕ್ತವಾದ ಭೋಕ್ತೃವಿಗಾಗಿಯೇ ಇರತಕ್ಕವು. ಮತ್ತು ಗುಣಭಾವವನ್ನು ಹೊಂದಿದವು. ತಾವು ಒಂದೊಂದಾಗಿಯೂ ಒಟ್ಟಾಗಿಯೂ ಭೋಕ್ತೃವಾಗಲಾರವು, ಪ್ರಾಣಾದಿಸಂಘಾತಕ್ಕಿಂತ ವ್ಯತಿರಿಕ್ತನು ಭೋಕ್ತೃವು-ಎಂಬುದೂ ಸಿದ್ಧವಾಯಿತು.

ಆಗ ಅಜಾತಶತ್ರುವು ಗಾರ್ಗ್ಯನಿಗೆ ನಿಜವಾದ ಬ್ರಹ್ಮವನ್ನು ತಿಳಿಸಿಕೊಡಬೇಕೆಂದು ಉದ್ದೇಶಿಸಿ "ಸುಷುಪ್ತಿಕಾಲದಲ್ಲಿ ಈ ವಿಜ್ಞಾನಮಯನು ಎಲ್ಲಿದ್ದನು? ಎಲ್ಲಿಂದ ಬಂದನು?" ಎಂದು ಕೇಳಿದನು. ಗಾರ್ಗ್ಯನು ಅದನ್ನು ತಿಳಿದಿರಲಿಲ್ಲ. ಅದನ್ನು ತಿಳಿಸಬೇಕೆಂದು ಅಜಾತಶತ್ರುವು "ಯಾವಾಗ ಇವನು ನಿದ್ದೆ ಮಾಡಿದನೋ ಆಗ ಇವನು ವಾಗಾದಿ ಪ್ರಾಣಗಳ ವಿಜ್ಞಾನವನ್ನು ವಿಜ್ಞಾನದಿಂದ ತೆಗೆದುಕೊಂಡು ಅಂತರ್ಹೃದಯದ ಆಕಾಶವಿದೆಯಲ್ಲ ಅಂದರೆ ಆಕಾಶ ಶಬ್ದದಿಂದ ಹೇಳಲ್ಪಡುವ ಪರಮಾತ್ಮನಾದ ತನ್ನ ಪರಮಾರ್ಥ ಆತ್ಮನಿದ್ದಾನಲ್ಲ, ಆ ಅಸಂಸಾರಿಯಾದ ಆತ್ಮನಲ್ಲಿ ಮಲಗಿರುತ್ತಾನೆ. ಸ್ಥೂಲ ಸೂಕ್ಷ್ಮವಾದ ಯಾವ ಉಪಾಧಿ ಸಂಬಂಧವನ್ನೂ ಹೊಂದದೇ ನಿರ್ವಿಶೇಷಸ್ವರೂಪನಾದ ಸ್ವಾಭಾವಿಕವಾದ ಆತ್ಮನಲ್ಲಿ ಸೇರಿರುತ್ತಾನೆ. ಅಂದರೆ ಒಂದಾಗಿರುತ್ತಾನೆ"ಎಂದು ತಿಳಿಸಿದನು. ಮತ್ತು "ಸ್ವಪಿತಿ-ಅಂದರೆ

ನಿದ್ರೆಮಾಡುತ್ತಾನೆ ಎಂಬ ಶಬ್ದವೇ ತನ್ನ ಪರಮಾರ್ಥಸ್ವರೂಪದಲ್ಲಿ ಲಯವಾಗಿರುತ್ತಾನೆ-ಎಂಬ ಅರ್ಥವನ್ನು ತಿಳಿಸುತ್ತದೆ. ಸ್ವ ಎಂದರೆ ತನ್ನ ಪರಮಾರ್ಥಸ್ವರೂಪವನ್ನೇ 'ಅಪೀತಿ' - ಸೇರಿ ಲಯವಾಗುತ್ತಾನೆ. ತನ್ನ ಸ್ವರೂಪದಲ್ಲಿಯೇ ಸೇರಿರುತ್ತಾನೆ. ಅಂದರೆ ಪರಮಾರ್ಥ ಸ್ವರೂಪನಾಗಿರುತ್ತಾನೆ-ಎಂದರ್ಥ. ತನ್ನ ಸ್ವರೂಪವು ಎಚ್ಚರ ಕನಸುಗಳಲ್ಲಿ ಕರ್ತೃಭೋಕ್ತೃ ಸ್ವರೂಪವಾಗಿರುವದರಿಂದ ಸುಷುಪ್ತಿಯಲ್ಲಿ ನಿರ್ವಿಶೇಷಸ್ವರೂಪದವನು ಆಗಿರುತ್ತಾನೆಂದು ಹೇಳುವದು ಯಾವ ನ್ಯಾಯ? ಎಂಬ ಶಂಕೆ ಬರಬಹುದು. ಈ ಶಂಕೆಯನ್ನು ಪರಿಹರಿಸುವುದಕ್ಕಾಗಿ ಸ್ವಪ್ನವು ಎಲ್ಲ ವಿಧದಲ್ಲಿಯೂ ಎಚ್ಚರದಂತೆಯೇ ಆ ಕಾಲದಲ್ಲಿ ತೋರಿದರೂ ಎಚ್ಚರವಾದ ಮೇಲೆ ಒಂದಿಷ್ಟೂ ಇಲ್ಲದಿರುವದರಿಂದ ಹೇಗೆ ಮಿಥ್ಯಾಭೂತವಾದದ್ದು ಅಂದರೆ ಬರೀ ತೋರ್ವಿಕೆಯ ರೂಪವಾದದ್ದು ಎಂದು ಸಿದ್ಧವಾಗುತ್ತದೆಯೋ, ಹಾಗೆಯೇ ಎಚ್ಚರವೂ ಎಚ್ಚರಕಾಲದಲ್ಲಿ ಸತ್ಯವಾದದ್ದಾಗಿ ತೋರಿದರೂ ಕನಸಿನಲ್ಲಿ ಒಂದಿಷ್ಟೂ ಇಲ್ಲವಾಗಿರುವದರಿಂದ ಬರೀ ಹುಸಿ ತೋರ್ವಿಕೆಯೇ ಹೊರ್ತು ಪರಮಾರ್ಥವಾಗಿರುವದಿಲ್ಲ; ಆದುದರಿಂದ ಯಾವ ನಿರ್ವಿಶೇಷಸ್ವರೂಪವು ಅಚ್ಚಳಿಯದಂತೆ ಸುಷುಪ್ತಿಯಲ್ಲಿ ಇದ್ದೀತೋ ಆ ಸ್ವರೂಪವೇ ಈಗಲೂ ನಮ್ಮ ಪರಮಾರ್ಥವಾದ ಸ್ವರೂಪವು ಎಂಬುದು ನಿರ್ವಿವಾದವಾಗಿ ಸಿದ್ಧವಾಗುತ್ತದೆ. ಹಾಗಲ್ಲದೇ ಭೋಕ್ತೃತ್ವವು ನಮ್ಮ ಸ್ವರೂಪವಾಗಿದ್ದಿದ್ದರೆ ಸುಷುಪ್ತಿಯಲ್ಲಿಯೂ ಇರಬೇಕಾಗಿದ್ದಿತು. ಅಲ್ಲಿ ಇಲ್ಲ. ಸ್ವರೂಪವು ಬಂದು ಹೋಗುವ ರೂಪದ್ದಾಗುವದಿಲ್ಲ. ಯಾವದು ಯಾವಾಗಲೂ ಅಹೇಯವಾಗಿಯೂ ಅನುಪಾದೇಯವಾಗಿಯೂ ಇರುತ್ತದೆಯೋ ಅದೇ ಸ್ವರೂಪವು. ಸುಷುಪ್ತಿಯಲ್ಲಿ ಆತ್ಮನು ಅದ್ವಿತೀಯನಾಗಿರುತ್ತಾನೆ. ಮತ್ತು ಯಾವದೊಂದನ್ನು ಅರಿಯದೇ ಅರಿವಿನ ಸ್ವರೂಪನಾಗಿಯೇ ಇರುತ್ತಾನೆ. ಸುಪ್ತನೆಂದರೆ ದರ್ಶನ ವೃತ್ತಿಯನ್ನು ಬಿಟ್ಟು ಸ್ವಾಭಾವ್ಯವನ್ನು ಹೊಂದಿದವನು ಎಂದರ್ಥ-ಅಂದರೆ ಯಾವ ವಿಶೇಷ ವಿಜ್ಞಾನವನ್ನೂ ಹೊಂದದೇ

ವಿಜ್ಞಾನಸ್ವರೂಪನಾಗಿ ಇರುತ್ತಾನೆ ಎಂದರ್ಥ. ಸುಷುಪ್ತಿಯಲ್ಲಿ ರಾಜನಾಗಲೀ ರಂಕನಾಗಲೀ, ರೋಗಿಯಾಗಲಿ ಆರೋಗ ದೃಢಕಾಯನಾಗಲಿ, ಹುಡುಗನಾಗಲೀ ಮುದುಕನಾಗಲೀ ಸಂಸಾರದ ಸರ್ವ ಸುಖದುಃಖಗಳನ್ನೂ ಕೊಡವಿಕೊಂಡು ಆನಂದಸ್ವರೂಪದಲ್ಲಿ ಒಂದಾಗಿರುತ್ತಾನೆ". -ಎಂದು ಮುಂತಾಗಿ ವಿವರಿಸಿ ಸುಷುಪ್ತಿಕಾಲದಲ್ಲಿ ಈ ಜೀವನು ಎಲ್ಲಿ ಇದ್ದನು? ಎಂಬ ಪ್ರಶ್ನೆಗೆ ಉತ್ತರವಾಗಿ ನಿರ್ವಿಶೇಷವಾದ ಆತ್ಮಾನಂದಸ್ವರೂಪದಲ್ಲಿ ಒಂದಾಗಿದ್ದನು-ಎಂದು ತಿಳಿಸಿದನು.

ಎಲ್ಲಿಂದ ಬಂದನು? ಎಂಬ ಪ್ರಶ್ನೆಗೆ ಉತ್ತರವನ್ನು ಈಗ ಹೇಳುತ್ತಾನೆ. "ಯಾವನೇ ಆಗಲಿ ಎಲ್ಲಿಗೆ ಹೋಗಿರುತ್ತಾನೆಯೋ ಅಲ್ಲಿಂದಲೇ ಬರುತ್ತಾನೆ -ಎಂಬುದು ಲೋಕದಲ್ಲಿ ದೃಷ್ಟವಾಗಿರುತ್ತದೆ. ಇದನ್ನೇ ಶ್ರುತಿಯೂ ಕೂಡ ದೃಷ್ಟಾಂತದಿಂದ ಹೇಳುತ್ತಿದೆ. ಆತ್ಮನೆಂದರೆ ಈಗ ನಾವು ತಿಳಿದಿರುವ ದೇಹಾದಿ ರೂಪನಾಗಿರುವ ಆತ್ಮನು ಆತ್ಮನಲ್ಲ. ಸುಷುಪ್ತಿಯಲ್ಲಿ ದೇಹಾದಿ ವಿಶೇಷಗಳನ್ನೆಲ್ಲವನ್ನೂ ನಿಶ್ಶೇಷವಾಗಿ ತನ್ನ ಪರಮಾರ್ಥಸ್ವರೂಪದಲ್ಲಿಯೇ ಲಯಮಾಡಿಕೊಂಡು ಯಾವ ನಿರ್ವಿಶೇಷವಾದ, ಅದ್ವಿತೀಯವಾದ, ಆನಂದ ಸ್ವರೂಪನಾದ ಆತ್ಮನಾಗಿರುತ್ತಾನೆಯೋ ಆ ಆತ್ಮನೇ ನಿಜವಾದ ಆತ್ಮನು ಎಂದು -ತಿಳಿಯಬೇಕು. ಅಂತಹ ಆತ್ಮನೊಬ್ಬನೇ ಸತ್ಯಸ್ವರೂಪನು, ಬಾಕಿಯೆಲ್ಲವುಗಳೂ ಸತ್ಯವಾದವೆಂದು ಆಯಾ ಕಾಲದಲ್ಲಿ ವ್ಯವಹರಿಸಲ್ಪಡತಕ್ಕವು. ನಿಜವಾಗಿ ಅನೃತಸ್ವರೂಪದವುಗಳು. ಈ ಆತ್ಮನೊಬ್ಬನೇ ಮೂರು ಅವಸ್ಥೆಗಳಲ್ಲಿಯೂ ತಪ್ಪದೇ ಇರುವದರಿಂದ ಪರಮಾರ್ಥವಾದ ಸತ್ಯಸ್ವರೂಪನು. ಈ ಆತ್ಮನಿಂದಲೇ ಪ್ರಾಣಾದಿ ಸಮಸ್ತವೂ ಬರುತ್ತದೆ. ಯಾವದರಿಂದ ಯಾವದು ಬರುತ್ತದೆಯೋ ಅದೇ ಅದರ ನಿಜವಾದ ಸ್ವರೂಪವು.-ಎಂದು ಅಜಾತಶತ್ರುವು ಗಾರ್ಗ್ಯನಿಗೆ ತಿಳಿಸಿದನು. ಹೀಗೆ ಅಜಾತಶತ್ರುವು ಸುಷುಪ್ತ ಪುರುಷನನ್ನು ತೋರಿಸಿ, ನಿರ್ವಿಶೇಷನಾದ, ಅದ್ವಿತೀಯನಾದ, ಆನಂದಸ್ವರೂಪನಾದ, ಆತ್ಮನನ್ನು ಆ ವಿಜ್ಞಾನಮಯನ ನಿಜವಾದ ಆತ್ಮನನ್ನಾಗಿ ಸಿದ್ಧಪಡಿಸಿಕೊಟ್ಟನು. ಸುಷುಪ್ತಿಯೆಂಬುದು

ಪ್ರತಿಯೊಬ್ಬನ ಅನುಭವದಲ್ಲಿರುವದರಿಂದ ಆಗ ಹೇಗೆ ಆತ್ಮಸ್ವರೂಪವನ್ನು ಅನುಭವಿಸಿದನು? ಎಂಬುದನ್ನು ಮನಸ್ಸಿಗೆ ತಂದುಕೊಂಡರೆ ನಿರ್ವಿಶೇಷಾತ್ಮಸ್ವರೂಪನಾಗಿಯೇ ಆತ್ಮನು ಇರುವದನ್ನು ಅನುಭವಿಸಿರುವದು ಮನದಟ್ಟಾಗುವುದು.

"ಜೇಡರ ಹುಳುವು ತಾನೇ ಹೇಗೆ ದಾರವಾಗಿ ಮುಂದುವರೆಯುತ್ತದೆಯೋ, ಬೆಂಕಿಯು ತಾನೇ ಹೇಗೆ ಸಣ್ಣ ಕಿಡಿಗಳಾಗಿ ಸಿಡಿಯುತ್ತದೆಯೋ, ಹಾಗೆಯೇ ಈ ನಿಜವಾದ ಆತ್ಮನು ಎಲ್ಲ ಪ್ರಾಣಗಳೂ, ಲೋಕಗಳೂ, ದೇವತೆಗಳೂ, ಭೂತಗಳೂ ಆಗಿರುತ್ತಾನೆ.-ಎಂದು ದೃಷ್ಟಾಂತವನ್ನು ಕೊಟ್ಟು ಶ್ರುತಿಯು ಹೇಳುತ್ತದೆ"-ಎಂದು ಮುಂತಾಗಿ ಅಜಾತ ಶತ್ರುವು ನಿರ್ವಿಶೇಷವಾದ ಆತ್ಮಸ್ವರೂಪವೇ ಬ್ರಹ್ಮವು;ಸಮಷ್ಟಿಯಾದ ಪ್ರಾಣನು ಬ್ರಹ್ಮನಲ್ಲ. -ಎಂದು ಅನುಭವಕ್ಕೆಬರುವಂತೆ ತಿಳಿಸಿದನು. ಇದರಿಂದ ಏನು ಸಿದ್ಧವಾಗುತ್ತದೆ? ಹೇಗೆ ಲೋಕದಲ್ಲಿ ಕಾರ್ಯವೆಂಬ ಮಡಕೆ ಮೊದಲಾದವು ತಮ್ಮ ಉಪಾದಾನ ಕಾರಣಗಳಾದ ಮಣ್ಣು ಮೊದಲಾದವುಗಳಿಗಿಂತ ಬೇರೆಯಾಗಿ ಇರಲಾರವೋ ಕಾರ್ಯವೆಂಬ ಮಣ್ಣು ಮೊದಲಾದವುಗಳೇ ಪರಮಾರ್ಥವಾಗಿ ಇರತಕ್ಕವೋ ಕಾರ್ಯವೆಂಬ ಮಡಕೆ ಮೊದಲಾದದ್ದು ಬರೀ ಹೆಸರೋ, ಅದೇ ರೀತಿಯಲ್ಲಿ ಉಪಾದಾನಕಾರಣವಾದ ಆತ್ಮನಿಗಿಂತ ಬೇರೆಯಾಗಿ ಪ್ರಾಣಾದಿ ಜಗತ್ತೆಂಬ ಕಾರ್ಯವು ಇಲ್ಲವೇ ಇಲ್ಲ. ಕಾರಣನಾದ ಆತ್ಮನೊಬ್ಬನೇ ಪರಮಾರ್ಥವಾಗಿ ಇರತಕ್ಕವನು, ಆತ್ಮನನ್ನು ಬಿಟ್ಟು ಮಿಕ್ಕದ್ದೆಲ್ಲವೂ ಕಾರ್ಯವಾಗಿರುವದರಿಂದ ಬರೀ ಹೆಸರೇ. ನಿರವಯುವನಾದ, ನಿರ್ವಿಶೇಷನಾದ ಆತ್ಮನಿಂದ ಪ್ರಾಣಾದಿ ಜಗತ್ತು ಹುಟ್ಟಿತು-ಎಂದು ಮುಂತಾದ ಶ್ರುತಿಯ ವ್ಯವಹಾರವೂ ಆತ್ಮಸ್ವರೂಪವನ್ನು ತಿಳಿಯದ, ದೇಹಾದಿಗಳನ್ನೇ ಆತ್ಮನೆಂದೂ ತಿಳಿದ ಅಜ್ಞಾನಿಯಿಂದ ಕಲ್ಪಿಸಲ್ಪಟ್ಟ ವ್ಯವಹಾರವೇ ಹೊರತು ಪರಮಾರ್ಥವಾದದ್ದಲ್ಲ. ಆತ್ಮನು ಯಾವಾಗಲೂ ಅದ್ವಿತೀಯಾನಂದ ಸ್ವರೂಪನು-ಎಂಬುದು ಸುಷುಪ್ತಿಯನ್ನು ಸರಿಯಾಗಿ ನೋಡಿದ್ದರಿಂದ ಅಂದರೆ ಸುಷುಪ್ತಿಯನ್ನು ಅನುಭವ ರೂಪದಿಂದ ನೋಡಿದ್ದರಿಂದ ಉಂಟಾಗುವ

ನಿಶ್ಚಯಜ್ಞಾನವು-ಎಂಬುದು ಸಿದ್ಧವಾಗುತ್ತದೆ. ಇಂತಹ ಸ್ವರೂಪವನ್ನು ಆತ್ಮಸ್ವರೂಪವನ್ನಾಗಿ ಅನುಭವದಿಂದ ಎಚ್ಚರದಲ್ಲಿಯೇ ತಿಳಿದರೆ ಕೂಡಲೇ ಫಲ. ಇಲ್ಲವಾದರೆ ಸಂಸಾರ ಎಂದೂ ಸಿದ್ಧವಾಗುತ್ತದೆ.

## ೨೦. ಜ್ಞಾನದ ಸ್ವರೂಪ

ಯಾವ ವಸ್ತುವು ಹೇಗೆ ಇರುತ್ತದೆಯೋ ಹಾಗೆಯೇ ಸಂಶಯ ವಿಪರ್ಯಾಸಾದಿಗಳಿಲ್ಲದಂತೆ ಅದನ್ನು ತಿಳಿಯುವದೇ ಅದರ ಜ್ಞಾನವು. ಒಂದುಸಲ ನಾರದರು ಸನತ್ಕುಮಾರರಲ್ಲಿಗೆ ಹೋಗಿ "ಅಧೀಹಿ ಭಗವಃ" "ಪೂಜ್ಯರೆ, ತತ್ತ್ವವನ್ನು ಹೇಳಿಕೊಡಿ" ಎಂದು ಕೇಳಿದನು. ಆಗ ಸನತ್ಕುಮಾರನು "ನಿನಗೆ ಬರುವದನ್ನೆಲ್ಲಾ ತಿಳಿಸಿದರೆ ಅನಂತರ ತಿಳಿಯದೇ ಇರುವುದನ್ನು ತಿಳಿಸುತ್ತೇನೆ" ಎಂದು ಹೇಳಿದನು. ಆಗ ನಾರದರು "ಪೂಜ್ಯರೇ, ನಾನು ಋಗ್ವೇದಾದಿವೇದಗಳನ್ನೂ, ಇತಿಹಾಸ ಪುರಾಣವನ್ನೂ, ವ್ಯಾಕರಣವನ್ನೂ, ಶ್ರಾದ್ಧಕಲ್ಪವನ್ನೂ, ಗಣಿತವನ್ನೂ, ಉತ್ಪಾತಜ್ಞಾನವನ್ನೂ, ನಿಧಿಶಾಸ್ತ್ರವನ್ನೂ, ತರ್ಕಶಾಸ್ತ್ರವನ್ನೂ, ನೀತಿ ಶಾಸ್ತ್ರವನ್ನೂ, ನಿರುಕ್ತವನ್ನೂ, ಶಿಕ್ಷಾಕಲ್ಪಚ್ಛನ್ದೋ ವಿದ್ಯೆಗಳನ್ನೂ, ಭೂತತಂತ್ರವನ್ನೂ, ಧನುರ್ವೇದವನ್ನೂ, ಜ್ಯೋತಿಷವನ್ನೂ, ಗಾರುಡ ವಿದ್ಯೆಯನ್ನೂ, ನೃತ್ಯಗೀತಶಿಲ್ಪಾದಿವಿದ್ಯೆಗಳನ್ನೂ ತಿಳಿದಿದ್ದೇನೆ. ನಾನು ಮಂತ್ರವನ್ನು ತಿಳಿದವನು ಅಂದರೆ ಕರ್ಮವನ್ನು ತಿಳಿದಿದ್ದವನು ಮಾತ್ರ ಆಗಿದ್ದೇನೆ ಆತ್ಮನನ್ನು ತಿಳಿದಿಲ್ಲ. ಕರ್ಮಕಾರ್ಯವೆಲ್ಲವೂ ವಿಕಾರಿಯಾದದ್ದು. ಆದುದರಿಂದ ನಾನು ವಿಕಾರವುಳ್ಳ ವಸ್ತುಗಳ ಜ್ಞಾನವನ್ನು ಸಂಪಾದಿಸಿದ್ದೇನೆ. ಅವಿಕಾರಿಯಾದ ಆತ್ಮನ ಜ್ಞಾನವನ್ನು ಸಂಪಾದಿಸಿಲ್ಲ. ತಮ್ಮಂತಹವರಿಂದ "ಆತ್ಮನನ್ನು ತಿಳಿದವನು ಶೋಕವನ್ನು ದಾಟುತ್ತಾನೆ" -ಎಂಬುದನ್ನು ತಿಳಿದಿದ್ದೇನೆ. ನಾನು ಶೋಕವನ್ನು ದಾಟಿಲ್ಲ; ಆದುದರಿಂದ ತಾವು ತತ್ತ್ವಜ್ಞಾನವನ್ನು ಉಪದೇಶಿಸಿ ಶೋಕವನ್ನು ದಾಟಿಸಬೇಕು" -ಎಂದು ಕೇಳಿದರು. ಇದರಿಂದ ತಿಳಿಯುವದೇನೆಂದರೆ ಅನಾತ್ಮವಸ್ತುವು ಅಜ್ಞಾನಿಗೆ ಮಾತ್ರ ನಿಜವಾಗಿ ಇರುವಂತೆ ಕಾಣುತ್ತದೆಯೇ

ಹೊರತು ಪರಮಾರ್ಥವಾಗಿ ಇರತಕ್ಕದ್ದಲ್ಲ. ಪರಮಾರ್ಥವಾಗಿ ಇರತಕ್ಕದ್ದಾಗಿದ್ದರೆ ಸುಷುಪ್ತ್ಯಾದಿಗಳಲ್ಲಿ ಇಲ್ಲದೇ ಹೋಗುತ್ತಿರಲಿಲ್ಲ. ಸುಷುಪ್ತ್ಯಾದಿಗಳಲ್ಲಿ ಅನಾತ್ಮದ ಗಂಧವೂ ಇಲ್ಲದಂತೆ ಹೋಗಿರುವದು ಸರ್ವರ ಅನುಭವದಲ್ಲಿಯೂ ಇದ್ದೇ ಇದೆ; ಆದರೆ ಅದನ್ನು ಸಾಮಾನ್ಯವಾಗಿ ಗಮನಿಸುವದಿಲ್ಲ. ಆದುದರಿಂದ ಪರಮಾರ್ಥವಾಗಿ ಇಲ್ಲದ ಅನಾತ್ಮ ವಸ್ತುವನ್ನು "ಇದು ಇದೆ". -ಎಂದು ತಿಳಿಯುವದು ಅಜ್ಞಾನವೆಂದು ಹೇಳಲೇ ಬೇಕಾಗಿಲ್ಲ. ಅವಸ್ಥಾತ್ರಯದಲ್ಲಿಯೂ ಅವ್ಯಭಿಚರಿತಸ್ವರೂಪದಿಂದ ಇರತಕ್ಕದ್ದು ಆತ್ಮವಸ್ತು ಒಂದೇ ಒಂದು. ಈ ಆತ್ಮವಸ್ತುವು ನಿಜವಾಗಿ ಯಾವ ರೀತಿಯಾಗಿದೆಯೋ ಆ ರೀತಿಯಾಗಿ ಅದನ್ನು ತಿಳಿಯುವದೇ ಜ್ಞಾನವು. ಅನ್ಯಥಾ ತಿಳಿಯುವದು ಅಜ್ಞಾನವು. ನಾರದರು ತಪ್ಪಾಗಿ ಆತ್ಮಸ್ವರೂಪವನ್ನು ತಿಳಿದಿದ್ದದ್ದರಿಂದ ಬೇರೆ ಅನೇಕ ಶಾಸ್ತ್ರಗಳನ್ನು ತಿಳಿದಿದ್ದರೂ ಶೋಕಕ್ಕೆ ವಶರಾಗಿದ್ದರು.-ಎಂಬುದು ಸಿದ್ಧವಾಯಿತು.

ಸನತ್ಕುಮಾರರು ನಾಮದಿಂದ ಪ್ರಾರಂಭಿಸಿ ಪ್ರಾಣದವರೆಗೂ ಒಂದಕ್ಕಿಂತ ಒಂದು ಅತಿಶಯವಾದದ್ದು ಎಂಬುದನ್ನು ತಿಳಿಸಿ ಈ ಮೂಲಕವಾಗಿ ನಿರತಿಶಯವಾದ ಭೂಮಸ್ವರೂಪದ ಬ್ರಹ್ಮವನ್ನು ತಿಳಿಸಿ ಈ ಭೂಮಸ್ವರೂಪದ ಬ್ರಹ್ಮವನ್ನು ಆತ್ವಸ್ವರೂಪವನ್ನಾಗಿ ತಿಳಿದವನು ಆನಂದವನ್ನು ಹೊಂದುತ್ತಾನೆ. ಅಲ್ಪವಾದ ಅನಾತ್ಮವನ್ನು ತಿಳಿದವನಿಗೆ ಸುಖವು ಇಲ್ಲ-ಎಂದು ಸರ್ವವ್ಯಾಪಕವಾದ ನಿರ್ವಿಶೇಷಾತ್ಮಸ್ವರೂಪವಾದ, ನಿರತಿಶಯ ಭೂಮಸ್ವರೂಪವಾದ ಬ್ರಹ್ಮವನ್ನೇ ಆತ್ಮಸ್ವರೂಪವನ್ನಾಗಿಯೂ ಈ ಆತ್ಮದಿಂದಲೇ ಪ್ರಾಣಾದಿ ಸಮಸ್ತ ಜಗತ್ತಿನ ಉತ್ಪತ್ತ್ಯಾದಿಗಳು ಆಗುತ್ತಿವೆ-ಎಂಬುದನ್ನೂ ತಿಳಿಸಿ ನಾರದರ ಶೋಕವನ್ನು ಹೋಗಲಾಡಿಸಿದರು. ಪ್ರಪಂಚದಲ್ಲಿ ಸಮಸ್ತ ಜನರೂ ಸ್ವಭಾವವಾಗಿಯೇ ಅನೃತಸ್ವಭಾವದ ದೇಹವನ್ನೋ, ಇಂದ್ರಿಯಗಳನ್ನೋ, ಪ್ರಾಣವನ್ನೋ, ಮನಸ್ಸನ್ನೋ, ಬುದ್ಧಿಯನ್ನೋ -ಇವುಗಳಲ್ಲಿ ಯಾವದಾದರೂ ಒಂದನ್ನೋ ಅಥವಾ ಇವುಗಳ ಸಂಘಾತವನ್ನೋ-ತನ್ನನ್ನಾಗಿ ತಿಳಿದು "ನಾನು ಹೋಗುತ್ತೇನೆ. ನಾನು ನೋಡುತ್ತೇನೆ, ನಾನು ಕೇಳುತ್ತೇನೆ, ನಾನು ಮುಟ್ಟುತ್ತೇನೆ. ನಾನು ರುಚಿ

ನೋಡುತ್ತೇನೆ, ನಾನು ಮೂಸಿ ನೋಡುತ್ತೇನೆ, ನಾನು ಉಸಿರಾಡುತ್ತೇನೆ, ನಾನು ಯೋಚಿಸುತ್ತೇನೆ, ನಾನು ನಿರ್ಣಯಿಸುತ್ತೇನೆ, ನಾನು ಯಜ್ಞದಾನ ತಪಸ್ಸುಗಳನ್ನು ಮಾಡುತ್ತೇನೆ-ಎಂದು ಮುಂತಾಗಿ ತಿಳಿಯುವದನ್ನೇ ಜ್ಞಾನವನ್ನಾಗಿ ವ್ಯವಹರಿಸುತ್ತಾರೆ. ಆದರೆ ಇದು ನಿಜವಾಗಿ ಅಜ್ಞಾನವು;ಏಕೆಂದರೆ ಆತ್ಮನು ದೇಹಾದಿ ರೂಪನಾಗಿಲ್ಲ. ದೇಹಾದಿಗಳು ದೃಶ್ಯಗಳು. ಆತ್ಮನ ಇರುವಿಕೆಯಿಂದ ಇರುವಿಕೆಯನ್ನು ಹೊಂದಿದವುಗಳು. ಸ್ವತಂತ್ರಸತ್ತೆಯನ್ನು ಹೊಂದಿದವಲ್ಲ. ಆತ್ಮನನ್ನು ಬಿಟ್ಟು ಅವು ಯಾವವೂ ಇರಲಾರವು. ಆತ್ಮನಾದರೋ ಅನಾತ್ಮದ ಹಂಗನ್ನು ಸ್ವಲ್ಪಮಟ್ಟಿಗೂ ಹೊಂದದೇ ಇರಬಲ್ಲನು. ಸ್ವತಂತ್ರನು. (ಸುಷುಪ್ತಿಯನ್ನು ನೋಡಿ) -ಇವೆರಡನ್ನೂ ಒಂದನ್ನೊಂದಾಗಿ ತಿಳಿಯುವದು ಅಜ್ಞಾನವಲ್ಲದೇ ಮತ್ತೇನು? ಅನೃತವಾದ ದೇಹಾದಿ ಸಮಸ್ತವಸ್ತುವನ್ನೂ-ತನ್ನಿಂದ ಹೊರಕ್ಕೆ ತಳ್ಳಿ ತಾನು ತಾನಾಗಿಯೇ ನಿಂತು ತನ್ನ ಸ್ವರೂಪದಿಂದಲೇ ತನ್ನನ್ನು ನೋಡಿದರೆ ತಾನು ಅದ್ವಿತೀಯ ಸ್ವರೂಪನು. ಎರಡನೆಯದಾದ ಅನಾತ್ಮವಸ್ತುವು ದೇಹಾದಿಗಳಲ್ಲಿ ನಾನು ಎಂಬ ತಪ್ಪುತಿಳುವಳಿಕೆ ಇದ್ದಾಗಲೇ ಕಾಣುತ್ತದೆ. ಈ ತಪ್ಪುತಿಳುವಳಿಕೆಯನ್ನು ತನ್ನ ಯಥಾರ್ಥವಾದ, ಅದ್ವಿತೀಯಾತ್ಮ ಸ್ವರೂಪವಾದ ಪರಮಾರ್ಥ ಸ್ವರೂಪದ ಆತ್ಮನ ಜ್ಞಾನದಿಂದ ಕಳೆದುಕೊಂಡು ಕ್ಷೇತ್ರಜ್ಞನನ್ನು-ಅಂದರೆ ಕ್ಷೇತ್ರವನ್ನು ಕ್ಷೇತ್ರವನ್ನಾಗಿ ತಳ್ಳಿ ಕ್ಷೇತ್ರದಿಂದ ವಿವೇಕವನ್ನು ಹೊಂದಿದ ಕ್ಷೇತ್ರಜ್ಞನನ್ನು-ಬ್ರಹ್ಮವನ್ನಾಗಿ ತಿಳಿಯುವದೆಂಬ ಆತ್ಮನ ಜ್ಞಾನದಿಂದ ದೇಹಾದಿಗಳನ್ನು ತಾನೆಂದು ತಿಳಿದ ಅಜ್ಞಾನವನ್ನು ಬಾಧಿಸಿ ಆತ್ಮಸ್ವರೂಪದಲ್ಲಿನಿಂತು ಆತ್ಮನನ್ನು ಅದ್ವಿತೀಯವಾದ ಅಖಂಡಚಿನ್ಮಾತ್ರ ಸ್ವರೂಪವನ್ನಾಗಿ ತಿಳಿಯುವಾಗ ಅನಾತ್ಮವಸ್ತುವು ಒಂದಿಷ್ಟೂ ಯಾವ ರೂಪದಿಂದಲೂ ಇರುವದೇ ಇಲ್ಲ. ಆತ್ಮವಸ್ತುವಾದರೋ ಯಾವಾಗಲೂ "ಇಲ್ಲ" ಎಂದು ಎನ್ನಿಸಿಕೊಳ್ಳದಂತೆ ಸರ್ವದಾ ಅಖಂಡೈಕಾನಂದಸ್ವರೂಪದ್ದೇ ಆಗಿರುತ್ತದೆ. ಆತ್ಮ ವಸ್ತುವನ್ನು 'ಇಲ್ಲ' ಎಂದು ತಿರಸ್ಕರಿಸಬೇಕಾದರೂ ತಿರಸ್ಕರಿಸುವವನೊಬ್ಬನಂತೂ ಇದ್ದೇ ಇರಬೇಕಷ್ಟೆ! ಅವನನ್ನೂ ಇಲ್ಲವೆಂದು ಹೇಳುವದಕ್ಕೆ ಆಗುವಂತೆಯೇ ಇಲ್ಲವಷ್ಟೆ! ಹೀಗೆ ಅನೃತಭೂತವಾದ

ಸಮಸ್ತವನ್ನೂ "ಇದು ಆತ್ಮವಲ್ಲ" "ಇದು ಆತ್ಮನಲ್ಲ"ಎಂದು ತಿರಸ್ಕರಿಸಿ ಯಾವ ಸ್ವರೂಪವು ತಿರಸ್ಕರಿಸುವದಕ್ಕೆ ಆಗದಂತೆ ತಿರಸ್ಕರಿಸುವವನ ಸ್ವರೂಪವೇ ಆಗಿದೆಯೋ ಅದೇ ಆತ್ಮವಸ್ತುವು. "ಆ ಅವ್ಯಭಿಚರಿತ ಸ್ವರೂಪವುಳ್ಳ ಆತ್ಮನು ನಾನೇ ಆಗಿದ್ದೇನೆ" -ಎಂಬ ನಿಶ್ಚಯ ರೂಪವಾದ ಮತ್ತು ಅನುಭವರೂಪವಾದ ಜ್ಞಾನವೇ ಇಲ್ಲಿ ಜ್ಞಾನವು -ಎಂಬ ಶಬ್ದದಿಂದ ಹೇಳಲ್ಪಡತಕ್ಕದ್ದಾಗಿದೆ.

## ೨೧. ಜ್ಞಾನದ ಫಲವು ಜ್ಞಾನಸಮಕಾಲಿಕವಾದದ್ದು

ಕರ್ಮದ ಫಲವು ಕರ್ಮದ ವಿಧಿಯನ್ನು ತಿಳಿದು ಅದರಂತೆ ಮಾಡಿದರೆ, ಮಾಡಿದ ಮೇಲೆ ಕಾಲಾನ್ತರದಲ್ಲಿ ತಯಾರಾಗಬೇಕಾದದ್ದಾಗಿದೆ. ಅದನ್ನು ಎಷ್ಟರಮಟ್ಟಿಗೆ ಶ್ರದ್ಧಾಭಕ್ತಿಗಳಿಂದ ಮಾಡಿರುತ್ತಾನೆಯೋ ಅಷ್ಟರಮಟ್ಟಿಗೆ ಫಲವು ಉಂಟಾಗತಕ್ಕದ್ದಾಗಿರುತ್ತದೆ. ಕರ್ಮದಸ್ವರೂಪವೂ ತಾರತಮ್ಯವುಳ್ಳದ್ದಾಗಿರುತ್ತದೆ. ಮತ್ತು ಕರ್ಮದಿಂದ ಸಂಪಾದಿಸಲ್ಪಡುವ ಫಲವು ನಾಶಹೊಂದತಕ್ಕದ್ದೂ ಆಗಿರುತ್ತದೆ.

ಜ್ಞಾನದ ಫಲವಾದರೋ ಹೀಗಿರುವದಿಲ್ಲ. ಜ್ಞಾನವು ಇರತಕ್ಕ ಫಲವನ್ನು ತಿಳಿಸುತ್ತದೆ. ಇಲ್ಲದ ಫಲವನ್ನು ಹೊಸದಾಗಿ ಹುಟ್ಟಿಸುವದಿಲ್ಲ. ಇದ್ದ ಫಲವನ್ನು ನಾಶಮಾಡುವುದಿಲ್ಲ. ಇದ್ದ ಫಲವಾಗಿದ್ದರೂ ತಿಳಿಯದೇ ಇದ್ದಾಗ ಪ್ರಯೋಜನವಿಲ್ಲದ್ದಾಗಿ ಇಲ್ಲದ್ದರಂತೆ ಇರುತ್ತದೆ. ತಿಳಿದ ಕೂಡಲೇ ಪ್ರಯೋಜವುಳ್ಳದ್ದಾಗಿ ಫಲವೆಂದೆನಿಸಿಕೊಳ್ಳುತ್ತದೆ; ಆದುದರಿಂದ ಇದ್ದದ್ದೇ ಆದರೂ ತಿಳಿದ ಮೇಲೆ ಪ್ರಯೋಜನಕಾರಿಯಾಗುವದರಿಂದ ಅದನ್ನು ಫಲವೆಂದು ಉಪಚಾರಕ್ಕಾಗಿ ಕರೆಯುತ್ತಾರೆ. ಉದಾಹರಣೆಗೆ ಒಬ್ಬ ರಾಜಕುಮಾರನು ಬಾಲ್ಯದಲ್ಲಿಯೇ ತಾಯಿತಂದೆಗಳನ್ನು ಕಳೆದುಕೊಂಡು ದಾದಿಯಾದ ವ್ಯಾಧಜಾತಿಯ ಸ್ತ್ರೀಯಿಂದ ರಕ್ಷಿಸಲ್ಪಟ್ಟು ತಾನು ವ್ಯಾಧಪುತ್ರನು ಎಂದು ತನ್ನನ್ನು ತಿಳಿದಿದ್ದನು. ಇವನು ಪ್ರಾಪ್ತ ವಯಸ್ಕನಾದ ಮೇಲೆ ಆ ದಾದಿಯು "ನೀನು ನನ್ನ ಮಗನಲ್ಲ. ರಾಜಪುತ್ರನು. ಇಂತಹ ಶತ್ರುವು ನಿಮ್ಮ ತಾಯಿತಂದೆಗಳನ್ನುಕೊಂದು ರಾಜ್ಯವನ್ನು ಅಪಹರಿಸಿದನು" -ಎಂದು ಹೇಳಿದ

ಮೇಲೆ ಅವಳ ಮಾತನ್ನು ಕೇಳಿ, ಮನನಮಾಡಿ, ಗಮನಿಸಿ ತಾನೇ ರಾಜಪುತ್ರನೆಂದು ತಿಳಿದು ಮೊದಲೇ ರಾಜಪುತ್ರನಾಗಿದ್ದರೂ ಆಗ ಜ್ಞಾನದಿಂದ ರಾಜಪುತ್ರನಾದನು. ಶತ್ರುಗಳನ್ನು ಸಂಹರಿಸಿ ರಾಜನಾದನು.

ಇಲ್ಲಿ ಮೊದಲೇ ರಾಜಪುತ್ರನಾಗಿದ್ದರೂ ತನಗೆ ತಿಳಿಯದೇ ಇದ್ದುದ್ದರಿಂದ ತಪ್ಪಾಗಿ ವ್ಯಾಧಪುತ್ರನೆಂದು ತಿಳಿದಿದ್ದನು. ಆ ತಪ್ಪುತಿಳಿವಳಿಕೆಯು ಸರಿಯಾದ ಉಪದೇಶದಿಂದ ಬಂದ ಸಮ್ಯಜ್ಞಾನದಿಂದ ಹೋದ ಕೂಡಲೇ ತಾನು ರಾಜಪುತ್ರನೆಂದು ತಿಳಿದುಕೊಂಡು ರಾಜಪುತ್ರನಾದನು. ರಾಜ ಪುತ್ರನಾದನು ಎಂಬುದು ಇಲ್ಲಿ ಉಪಚಾರದ ಮಾತಲ್ಲವೆ?

ಹೀಗೆಯೇ ಸರ್ವರೂ ಸರ್ವದಾ ಪರಬ್ರಹ್ಮಸ್ವರೂಪರೇ ಆಗಿದ್ದಾರೆ; ಆದರೆ ಪರಬ್ರಹ್ಮಸ್ವರೂಪರಾಗಿದ್ದೇವೆಂಬ ಜ್ಞಾನವಿಲ್ಲದೇ 'ನಾವು ಮನುಷ್ಯರು, ದೇವತೆಗಳು -ಮುಂತಾದ ರೂಪದಿಂದ ತಮ್ಮನ್ನು ತಿಳಿದಿದ್ದಾರೆ. ಯಾವಾಗ ವೇದವು "ಯಾವ ಜಗತ್ಕಾರಣವಾದ, ಸದ್ರೂಪವಾದ ಬ್ರಹ್ಮವಿದೆಯೋ ಅದೇ ನಿಮ್ಮ ಸ್ವರೂಪವು. ದೇಹಾದಿಗಳು ಇರತಕ್ಕವಲ್ಲ. ನೀವು ಆ ದೇಹಾದಿ ಸ್ವರೂಪರೂ ಅಲ್ಲ, ನಿಮ್ಮ ಸುಷುಪ್ತಿಯನ್ನು ನೋಡಿ. ಆ ಸದ್ರೂಪ ಬ್ರಹ್ಮದಲ್ಲಿ ಒಂದಾಗಿದ್ದೀರಿ. ಅಖಂಡರಾಗಿದ್ದೀರಿ" -ಎಂದು ತಿಳಿಸಿದ ಕೂಡಲೇ ಆ ವಾಕ್ಯವನ್ನು ಪದಾರ್ಥಜ್ಞಾನಪೂರ್ವಕವಾಗಿ ಕೇಳಿ, ಮನನಮಾಡಿ, ಲಕ್ಷ್ಯವಿಟ್ಟು ತಿಳಿದರೆ 'ಆ ಜಗತ್ಕಾರಣವಾದ ಸದ್ರೂಪವೇ ನಮ್ಮ ಸ್ವರೂಪವು' ಎಂಬ ನಿಶ್ಚಿತವಾದ, ಅನುಭವ ರೂಪವಾದ ಜ್ಞಾನವು ಬರುವುದು. ಜ್ಞಾನವು ಬರುವಾಗಲೇ 'ನಾವು ಮನುಷ್ಯರು-ಮುಂತಾದ ರೂಪದ ಅಜ್ಞಾನವನ್ನು ಕಳೆದುಕೊಂಡೇ ಬರುವದರಿಂದ ಜ್ಞಾನಬಂದ ಸಮಕಾಲದಲ್ಲಿಯೇ, "ಮೊದಲೇ ನಾವು ಬ್ರಹ್ಮಸ್ವರೂಪರಾಗಿರುವದರಿಂದ ಈಗ ಜ್ಞಾನದಿಂದ ಬ್ರಹ್ಮಸ್ವರೂಪವನ್ನು ಪಡೆದಿದ್ದೇವೆ". -ಎಂಬ ಜ್ಞಾನದ ಫಲವನ್ನು ಪಡೆಯುತ್ತಾರೆ.

ಶ್ರೀ ಶಂಕರಭಗವತ್ಪಾದರವರು ತಮ್ಮ ಬೃಹದಾರಣ್ಯಕ ಭಾಷ್ಯದಲ್ಲಿ ೧-೪-೧೦ ರಲ್ಲಿ ಈ ರೀತಿಯಾಗಿ ಬರೆದಿರುತ್ತಾರೆ.

"ವಿದ್ಯಾಕಾಲಾನನ್ತರಿತತ್ವಾದ್ಬ್ರಹ್ಮಪ್ರಾಪ್ತಿಫಲಸ್ಯ। ಕಥಮ್? ಯಥಾ ಲೋಕೇ ದ್ರಷ್ಟುಃ ಚಕ್ಷುಷಃ ಆಲೋಕೇನ ಸಂಯೋಗಃ ಯತ್ಕಾಲಃ ತತ್ಕಾಲ ಏವ ರೂಪಾಭಿವ್ಯಕ್ತಿಃ, ಏವಮಾತ್ಮವಿಷಯಂ ವಿಜ್ಞಾನಂ ಯತ್ಕಾಲಂ ತತ್ಕಾಲ ಏವ ತದ್ವಿಷಯಾಜ್ಞಾನತಿರೋಭಾವಸ್ಸ್ಯಾತ್ । ಅಜ್ಞಾನಾಪಗಮ ಏವ ಮೋಕ್ಷಃ ನಿತ್ಯನಿರ್ವೃತ್ತಾತ್ಮರೂಪತ್ವಾತ್ । ಅತೋ ಬ್ರಹ್ಮವಿದ್ಯಾಯಾಂ ಸತ್ಯಾಂ ಅವಿದ್ಯಾತತ್ಕಾರ್ಯಾನುಪಪತ್ತಿಃ ಪ್ರದೀಪ ಇವ ತಮಃ ಕಾರ್ಯಸ್ಯ" -ಎಂದು ಬರೆದಿದ್ದಾರೆ. ಅರ್ಥ-ಬ್ರಹ್ಮಪ್ರಾಪ್ತಿ ಎಂಬ ಫಲವು ವಿದ್ಯೆಯುಂಟಾಗುವ ಕಾಲಕ್ಕಿಂತ ಬೇರೆಯ ಕಾಲದಲ್ಲಾಗುವದಲ್ಲ. ಹೇಗೆಂದರೆ, ಲೋಕದಲ್ಲಿ ನೋಡುವ ಮನುಷ್ಯನ ಕಣ್ಣಿಗೆ ಬೆಳಕಿನ ಸಂಯೋಗವು ಯಾವ ಕಾಲದಲ್ಲಿ ಆಗುವದೋ ಅದೇ ಕಾಲದಲ್ಲಿಯೇ ಹೇಗೆ ರೂಪವು ತೋರಿಕೊಳ್ಳುವದೋ, ಹಾಗೆಯೇ ಆತ್ಮವಿಷಯದ ವಿಜ್ಞಾನವು ಯಾವ ಕಾಲದಲ್ಲಾಗುವದೋ ಅದೇ ಕಾಲದಲ್ಲಿಯೇ ಆ ಆತ್ಮವಿಷಯದ ಅಜ್ಞಾನವು ಮರೆಯಾಗಬೇಕು. ಆದುದರಿಂದ ಬ್ರಹ್ಮ ವಿದ್ಯೆಯು ಉಂಟಾಗಲಾಗಿ, ಪ್ರದೀಪವಿರಲಾಗಿ ತಮಸ್ಸಿನ ಕಾರ್ಯವು ಹೇಗೆ ಇರಲಾರದೋ ಹಾಗೆ ಅವಿದ್ಯೆಯ ಕಾರ್ಯವು ಇರಲಾರದು.

**ಬ್ರಹ್ಮ ಸೂತ್ರಭಾಷ್ಯ ೩-೩-೩೨ ರಲ್ಲಿ ಹೀಗೆ ಬರೆದಿರುತ್ತಾರೆ.**

ಪ್ರತ್ಯಕ್ಷಫಲತ್ವಾಚ್ಚ ಜ್ಞಾನಸ್ಯ ಫಲವಿರಹಶಙ್ಕಾನುಪಪತ್ತಿಃ। ಕರ್ಮಫಲೇ ಹಿ ಸ್ವರ್ಗಾದೌ ಅನುಭವಾನಾರೂಢೇ ಸ್ಯಾದಾಶಙ್ಕಾ ಭವೇದ್ವಾನವೇತಿ। ಅನುಭವಾರೂಢಂತು ಜ್ಞಾನಫಲಮ್ 'ಯತ್ಸಾಕ್ಷಾದ ಪರೋಕ್ಷಾದ್ಬ್ರಹ್ಮ' (ಬೃ ೩-೪-೧) ಇತಿ ಶ್ರುತೇಃ । ' ತತ್ತ್ವಮಸಿ' (ಛಾಂ ೬-೮-೭) ಇತಿ ಚ ಸಿದ್ಧವದುಪದೇಶಾತ್। ನ ಹಿ ತತ್ತ್ವಮಸಿ ಇತ್ಯಸ್ಯ ವಾಕ್ಯಸ್ಯ ಅರ್ಥಃ ತತ್ತ್ವಂ ಮೃತೋ ಭವಿಷ್ಯಸಿ ಇತ್ಯೇವಂ ಪರಿಣೇತುಂ ಶಕ್ಯಃ ॥ "ತದ್ಧೈತತ್ಪಶ್ಯನ್ ಋಷಿರ್ವಾಮದೇವಃ ಪ್ರತಿ. ಪೇದೇಽಹಂ ಮನುರಭವಂ ಸೂರ್ಯಶ್ಚ॥"(ಬೃಹ ೧-೪-೧೦) ಇತಿ ಚ ಸಮ್ಯಗ್ದರ್ಶನಕಾಲಮೇವ ತತ್ಫಲಂ ಸರ್ವಾತ್ಮತ್ವಂ ದರ್ಶಯತಿ॥ ತಸ್ಮಾದೈಕಾನ್ತಿಕೀ ವಿದುಷಃ ಕೈವಲ್ಯಸಿದ್ಧಿಃ॥ ಅರ್ಥ:- ಜ್ಞಾನದ ಫಲವು ಪ್ರತ್ಯಕ್ಷವಾಗಿರುವದರಿಂದಲೂ ಜ್ಞಾನಕ್ಕೆ ಫಲವಾಗಲಾರದೆಂಬ

ಶಂಕೆಯು ಹೊಂದುವದಿಲ್ಲ. ಕರ್ಮಫಲವಾದ ಸ್ವರ್ಗಾದಿಗಳು ಅನುಭವಕ್ಕೆ ಇಲ್ಲಿ ಬರುವದಿಲ್ಲವಾದುದರಿಂದ ಆದಾವೋ? ಇಲ್ಲವೋ? ಎಂಬ ಶಂಕೆಯು ಉಂಟಾಗಬಹುದು; ಆದರೆ ಜ್ಞಾನದ ಫಲವು ಇಲ್ಲಿಯೇ ಈಗಲೇ ಅನುಭವಕ್ಕೆ ಬರುವದಾಗಿರುತ್ತದೆ. "ಯಾವದು ನೇರಾದ ಅಪರೋಕ್ಷವಾದ ಬ್ರಹ್ಮವೋ" (ಬೃ ೩-೪-೧) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು. "ಅದು ನೀನಾಗಿರುವೆ" ಛಾಂ(೬-೮-೭) ಎಂದು ಈಗಲೇ ಇದ್ದುಕೊಂಡಿರುವಂತೆ ಉಪದೇಶ ಮಾಡಿರುವದರಿಂದಲೂ (ಅದೇ ನೀನಾಗಿರುವೆ.) ಎಂಬೀ ವಾಕ್ಯದ ಅರ್ಥವನ್ನು ನೀನು ಸತ್ತು ಅದು ಆಗುವೆ - ಎಂದು ಅರ್ಥವನ್ನು ತಿರುಗಿಸುವದಕ್ಕೆ ಆಗಲಾರದಷ್ಟೇ! ಮತ್ತು "ಆ ಇದನ್ನು ಕಂಡುಕೊಂಡ ವಾಮದೇವನು ನಾನು ಮನುವಾಗಿದ್ದೆನು. ಸೂರ್ಯನಾಗಿದ್ದೆನು -ಎಂದು ತಿಳಿದುಕೊಂಡನು" (ಬೃ ೧-೪-೧೦)ಎಂದು ಸಮ್ಯಗ್ದರ್ಶನ ಕಾಲದಲ್ಲಿಯೇ ಅದರ ಫಲವಾದ ಸರ್ವಾತ್ಮತ್ವವನ್ನು ಶ್ರುತಿಯು ತಿಳಿಸುತ್ತದೆ. ಆದ್ದರಿಂದಲೂ ಜ್ಞಾನಿಗೆ ಕೈವಲ್ಯ ಸಿದ್ಧಿಯು ನಿಯಮದಿಂದ ಜ್ಞಾನಸಮಕಾಲದಲ್ಲಿಯೇ ಆಗುತ್ತದೆ. -ಎಂಬುದು ಸಿದ್ಧವಾಗುತ್ತದೆ.

ಈ ರೀತಿಯಲ್ಲಿ ಭಾಷ್ಯಕಾರರು ಜ್ಞಾನಸಮಕಾಲದಲ್ಲಿಯೇ ಜ್ಞಾನದ ಫಲವನ್ನು ಪ್ರತಿಪಾದಿಸಿರುವದರಿಂದ ಜ್ಞಾನದ ಫಲವಾದ ಬ್ರಹ್ಮಸ್ವರೂಪ ಪ್ರಾಪ್ತಿಯು "ನಾನು ಬ್ರಹ್ಮನಾಗಿದ್ದೇನೆ"ಎಂಬ-ಜ್ಞಾನಾಭಾವ ಸಂಶಯ ವಿಪರೀತಜ್ಞಾನಾದಿಗಳನ್ನು ಕಳೆದ ನಿಶ್ಚಿತವಾದ ಜ್ಞಾನವು ಬಂದ ಸಮಕಾಲದಲ್ಲಿಯೇ ಬರುತ್ತದೆ. ಕಾಲಾನ್ತರ ನಿರೀಕ್ಷೆಯನ್ನು ಮಾಡುವದಿಲ್ಲ. ಇದು ಪ್ರತ್ಯಕ್ಷಫಲವು, ಇಲ್ಲಿಯೇ ಜ್ಞಾನಕಾಲದಲ್ಲಿಯೇ ಹೊಂದತಕ್ಕದ್ದು -ಎಂಬುದು ಸ್ಪಷ್ಟವಾಗಿ ತಿಳಿಯಬರುತ್ತದೆ. ಮತ್ತು ಶ್ರೀ ಶಂಕರಭಗವತ್ಪಾದ ರವರು ಬ್ರಹ್ಮಸೂತ್ರ ಭಾಷ್ಯ ೨-೧-೧೪ ರಲ್ಲಿ ಹೀಗೆ ಹೇಳಿರುತ್ತಾರೆ. ಅತಶ್ಚೇದಂ ಶಾಸ್ತ್ರೀಯಂ ಬ್ರಾಹ್ಮಾತ್ಮತ್ವಂ ಅವಗಮ್ಯಮಾನಂ ಸ್ವಾಭಾವಿಕಸ್ಯ ಶಾರೀರಾತ್ಮತ್ವಸ್ಯ ಬಾಧಕಂ ಸಂಪದ್ಯತೇ । ರಜ್ಜ್ವಾದಿಬುದ್ಧಯ ಇವ ಸರ್ಪಾದಿಬುದ್ಧೀನಾಮ್ ॥ ಬಾಧಿತೇಚ ಶಾರೀರಾತ್ಮತ್ವೇ ತದಾಶ್ರಯಃ ಸಮಸ್ತಃ

ಸ್ವಾಭಾವಿಕೋ ವ್ಯವಹಾರೋ ಬಾಧಿತೋಭವತಿ|| ಅರ್ಥ:- ಆದ್ದರಿಂದ ಈ ಶಾಸ್ತ್ರೀಯವಾದ ಬ್ರಹ್ಮಾತ್ಮತ್ವವನ್ನು ಅರಿತುಕೊಂಡರೆ ಈ ತಿಳಿವಳಿಕೆಯು ಸ್ವಾಭಾವಿಕವಾದ ಶಾರೀರಾತ್ಮತ್ವಕ್ಕೆ, ಹಗ್ಗದ ಬುದ್ಧಿಯೇ ಮುಂತಾದವುಗಳು ಹಾವಿನ ಬುದ್ಧಿಯೇ ಮುಂತಾದವುಗಳಿಗೆ ಬಾಧಕವಾಗುವಂತೆ ಬಾಧಕವಾಗುತ್ತದೆ. ಶಾರೀರಾತ್ಮತ್ವವು ಬಾಧಿತವಾದರೆ ಅದನ್ನು ಆಶ್ರಯಿಸಿಕೊಂಡಿರುವ ಸ್ವಾಭಾವಿಕವಾದ ವ್ಯವಹಾರವೆಲ್ಲವೂ ಬಾಧಿತವಾಗುತ್ತದೆ.

ನಾನಲ್ಲದ ದೇಹಾದಿಸಂಘಾತದಲ್ಲಿ "ನಾನು" ಎಂಬ ತಪ್ಪು ತಿಳಿವಳಿಕೆಯನ್ನು ಆಶ್ರಯಿಸಿಯೇ ಸಮಸ್ತ ವ್ಯವಹಾರವೂ ಅಂದರೆ -ಇದು ಜಗತ್ತು, ಈ ಜಗತ್ತಿಗೆ ಉಪಾದಾನ ಕಾರಣವಾದದ್ದು ತತ್ತ್ವಾನ್ಯತ್ವಗಳಿಂದ ಅನಿರ್ವಚನೀಯವಾದ ಮಾಯೆಯು, ಇದು ಕರ್ಮ; ಇದು ಕರ್ಮಫಲವಾದ ಸ್ವರ್ಗ, ಇವನು ಜೀವನು, ಇವನು ಈಶ್ವರನು, ಇದು ಪ್ರಮಾಣವು ಇದು ಪ್ರಮೇಯವು - ಎಂದು ಮುಂತಾದ ಸಮಸ್ತ ವ್ಯವಹಾರವೂ ಉಂಟಾಗಿರುವದರಿಂದ ಈ ಸಂಘಾತದಲ್ಲಿ "ನಾನು" -ಎಂಬ ತಪ್ಪು ತಿಳಿವಳಿಕೆಯು "ನಾನು ಸಚ್ಚಿದಾನಂದ ಸ್ವರೂಪವಾದ ಬ್ರಹ್ಮವು" -ಎಂಬ ಅನುಭವ ರೂಪವಾದ, ಯಥಾರ್ಥವಾದ ಜ್ಞಾನದಿಂದ ಬಾಧಿತವಾದ ಕೂಡಲೆ ಆ ತಪ್ಪು ತಿಳುವಳಿಕೆಯನ್ನೇ ಆಶ್ರಯಿಸಿಕೊಂಡು ಬಂದಿರುವ, ಮೇಲೆ ವಿವರಿಸಿರುವ ಕಾರ್ಯ, ಕಾರಣ, ಕರ್ಮ, ತತ್ಫಲ, ಕರ್ತೃ ಭೋಕ್ತೃ ಮುಂತಾದ ಸಮಸ್ತವ್ಯವಹಾರವೂ ಬಾಧಿತವಾಗುತ್ತದೆ. ಹೀಗೆ ಅನಾತ್ಮವಸ್ತುವೆಲ್ಲವೂ ಬಾಧಿತವಾಗಿಬಿಡುವದರಿಂದ ಜ್ಞಾನ ಸಮಕಾಲದಲ್ಲಿಯೇ ಅದ್ವಿತೀಯ ಬ್ರಹ್ಮಾತ್ಮತ್ವ ಪ್ರಾಪ್ತಿಯೆಂಬ ಫಲವು ನಿಯತವಾಗಿ ಸಿದ್ಧಿಸುತ್ತದೆ. ಇಷ್ಟೂ ಅಲ್ಲದೇ "ನೀನು ಬ್ರಹ್ಮವಾಗಿದೀಯೆ"-ಎಂದು ಬೋಧಿಸಿದ ವೇದಾಂತ ಶಾಸ್ತ್ರವೂ ಕೂಡ ಆ ದೇಹೇಂದ್ರಿಯಾದಿ ಸಂಘಾತದಲ್ಲಿ 'ನಾನು' ಎಂಬ ತಪ್ಪು ತಿಳಿವಳಿಕೆಯನ್ನೇ ಆಶ್ರಯಿಸಿ ಬಂದಿರುವದಾಗಿರುವದರಿಂದ ಆ ತಪ್ಪು ತಿಳಿವಳಿಕೆಯು ಸಮ್ಯಗ್ಜ್ಞಾನದಿಂದ ಬಾಧಿತವಾದ ಕೂಡಲೇ, ಎಚ್ಚರವಾದ

ಕೂಡಲೇ ಕನಸೂ, ಕನಸಿನ ಸಮಸ್ತವ್ಯವಹಾರವೂ ಬಾಧಿತವಾಗುವಂತೆ -ಬಾಧಿತವಾಗಿಬಿಡುತ್ತದೆ. ಮತ್ತು ಶಾಸ್ತ್ರ, ಶಿಷ್ಯ-ಮುಂತಾದ ಯಾವ ಭೇದವೂ ಇಲ್ಲದ ಅಖಂಡ ಸಚ್ಚಿದಾನಂದ ಸ್ವರೂಪವಾದ ಬ್ರಹ್ಮಪ್ರಾಪ್ತಿಯೆಂಬ ಫಲವು ಜ್ಞಾನಕಾಲದಲ್ಲಿಯೇ ಸಿದ್ಧವಾಗಿಬಿಡುತ್ತದೆ; ಇದನ್ನು ಮುಂಡಕ ಶ್ರುತಿಯು ೨-೨-೯ನೆಯ ಮಂತ್ರದಲ್ಲಿ ಹೀಗೆ ಹೇಳುತ್ತಿದೆ;

ಭಿದ್ಯತೇ ಹೃದಯಗ್ರನ್ಥಿಶ್ಛಿದ್ಯನ್ತೇ ಸರ್ವಸಂಶಯಾಃ ।
ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥

ಅರ್ಥ :- ತಸ್ಮಿನ್=ಆ ಸರ್ವಜ್ಞನಾದ, ಸಂಸಾರಿಯಲ್ಲದ ಪರಾವರೇ = ಕಾರಣ ರೂಪದಿಂದ ಪರನೂ ಅಂದರೆ ಹೆಚ್ಚಿನವನೂ, ಕಾರ್ಯರೂಪದಿಂದ ಅವರನೂ ಅಂದರೆ, ಕಡಿಮೆಯವನೂ ಆಗಿರುವ -ಆ ಪರಾವರನು ದೃಷ್ಟೇಸತಿ=ನಾನೇ ಅವನಾಗಿರುವೆನು-ಎಂದುನೇರಾಗಿ ಕಂಡುಕೊಳ್ಳಲಾಗಿ ಅಂದರೆ ತನ್ನನ್ನು ಆ ಪರಮಾತ್ಮ ರೂಪದಿಂದ ಅನುಭವಿಸಲಾಗಿ ಹೃದಯಗ್ರಂಥಿಃ- ದೇಹಾದಿ ಸಂಘಾತದಲ್ಲಿ ನಾನು ಎಂಬ ತಪ್ಪುತಿಳಿವಳಿಕೆಯ ರೂಪದ ಅಜ್ಞಾನದ ವಾಸನೆಗಳಿಂದ ಬೆಳೆದುಕೊಂಡಿರುವ, ಬುದ್ಧಿಯನ್ನು ಆಶ್ರಯಿಸಿಕೊಂಡಿರುವ ಕಾಮವು ಭಿದ್ಯತೇ=ನಾಶವನ್ನು ಹೊಂದುತ್ತದೆ. ಸರ್ವಸಂಶಯಾಃ =ಸಕಲಜ್ಞೇಯಗಳ ವಿಷಯದಲ್ಲಿ ಲೋಕದ ಜನರಿಗೆ ಸಾಯುವ ವರೆಗೂ ಗಂಗಾಪ್ರವಾಹದಂತೆ ಬರುತ್ತಿರುವ ಸಂಶಯಗಳು ಛಿದ್ಯನ್ತೇ= ಛೇದವಾಗುವುದು. ಅಸ್ಯ=ಇಂತಹ ಅಪರೋಕ್ಷಜ್ಞಾನವನ್ನು ಹೊಂದಿದ ಈತನ ಸರ್ವಕರ್ಮಾಣಿ=ಅಜ್ಞಾನಿಯ ದೃಷ್ಟಿಯಿಂದ ಇರುವ ಪ್ರಾರಬ್ಧ ಕರ್ಮವೊಂದನ್ನು ಬಿಟ್ಟು ಬಾಕಿ ಎಲ್ಲ ಸಂಚಿತ ಆಗಾಮಿ ಕರ್ಮಗಳು, ಜ್ಞಾನಿಯ ದೃಷ್ಟಿಯಿಂದ ಸರ್ವಕರ್ಮಗಳೂ ಕ್ಷೀಯನ್ತೇ=ಕ್ಷಯವಾಗುವವು. ಅಂದರೆ ಆ ಸರ್ವಜ್ಞನಾದ ಸಂಸಾರಿಯಲ್ಲದ ಪರಾವರನನ್ನು ನೇರಾಗಿ "ನಾನೇ ಅವನಾಗಿದ್ದೇನೆ" ಎಂದು ಕಂಡುಕೊಂಡರೆ ಸಂಸಾರದ ಕಾರಣವಾದ ಅಜ್ಞಾನವು ನಾಶವಾಗಿಬಿಡುವದರಿಂದ ಕೂಡಲೇ ಮುಕ್ತಿಯನ್ನು ಪಡೆಯುತ್ತಾನೆ.

ಒಟ್ಟಿನಲ್ಲಿ ಜ್ಞಾನದ ಫಲವು ಕಾಲಾನ್ತರವನ್ನಾಗಲೀ, ದೇಶಾನ್ತರವನ್ನಾಗಲೀ

ಸಾಧನಾಂತರವನ್ನಾಗಲೀ ಬಯಸದೇ ಜ್ಞಾನದ ಸಮಕಾಲದಲ್ಲಿಯೇ ಬರುತ್ತದೆ. ಏಕೆಂದರೆ ಪೂರ್ವದಲ್ಲಿಯೇ ಸಿದ್ಧವಾಗಿದ್ದ ಫಲವನ್ನು ಜ್ಞಾನವು ಅಡ್ಡಿಯಾದ ಅಜ್ಞಾನವನ್ನು ಕಳೆಯುವದರ ಮೂಲಕ ಜ್ಞಾಪಿಸುತ್ತದೆ. ಆದುದರಿಂದ ಇಂತಹ ಜ್ಞಾನವನ್ನು ಹೊಂದಿ ನಿತ್ಯಾನಂದ ಸ್ವರೂಪರಾಗಿರಲು ಸರ್ವರೂ ಪ್ರಯತ್ನಿಸಬೇಕು.

## ೨೨. ಬ್ರಹ್ಮಜ್ಞಾನಿಗೆ ಪ್ರಾರಬ್ಧ ಕರ್ಮ ಉಂಟೆ ?

ಅಜ್ಞಾನಿಗಳು ಬ್ರಹ್ಮಜ್ಞಾನಿಯನ್ನು ನೋಡಿ ಆಡುವ ಮಾತುಗಳು ಏನೆಂದರೆ :-ಜ್ಞಾನವೆಂಬುದು ಅಂತಃಕರಣದ ಯಥಾರ್ಥವಾದ ವೃತ್ತಿ. ಈ ಯಥಾರ್ಥವಾದ ವೃತ್ತಿ ಇರಬೇಕಾದರೆ ಅಂತಃಕರಣವಿಲ್ಲದೇ ಇರಲು ಸಾಧ್ಯವಿಲ್ಲ. ಅಂತಃಕರಣವಿರಬೇಕಾದರೆ ದೇಹವಿದ್ದೇ ಇರಬೇಕು. ಆದುದರಿಂದ ಜ್ಞಾನಿಗೂ ಶರೀರವಿರುವುದಕ್ಕೆ ಬೇಕಾದ ಅಂದರೆ ಪ್ರಾರಬ್ಧರೂಪವಾದ ಕರ್ಮವೊಂದು ಇದ್ದೇ ಇರಬೇಕು. ಜ್ಞಾನವು ಸರ್ವ ಕರ್ಮಗಳನ್ನೂ ನಾಶಮಾಡುತ್ತದೆ. ಅಂದರೆ ಈ ಶರೀರವನ್ನು ಕೊಟ್ಟಿರುವ ಪ್ರಾರಬ್ಧಕರ್ಮವೊಂದನ್ನು ಬಿಟ್ಟು ಬಾಕಿ ಕರ್ಮಗಳನ್ನು ಎಲ್ಲವನ್ನೂ ನಾಶಮಾಡುತ್ತದೆ. ಎಂದು ಅರ್ಥ ಮಾಡಬೇಕು. ಹೀಗಲ್ಲದೇ ಪ್ರಾರಬ್ಧ ಕರ್ಮವನ್ನೂ ನಾಶಮಾಡುತ್ತದೆ-ಎಂದು ಅರ್ಥಮಾಡುವದಾದರೆ ಜ್ಞಾನ ಬಂದ ಕೂಡಲೇ ಶರೀರವೇ ಬಿದ್ದು ಹೋಗುವದಾದರೆ ಜ್ಞಾನಿಯೇ ಇಲ್ಲದಂತಾಗುವದರಿಂದ ಜ್ಞಾನವನ್ನು ಹೇಳುವವರು ಯಾರು? ಆದುದರಿಂದ ಪ್ರಾರಬ್ಧ ಕರ್ಮವೊಂದನ್ನು ಬಿಟ್ಟು ಬಾಕಿ ಕರ್ಮಗಳನ್ನು ಜ್ಞಾನವು ನಾಶ ಮಾಡುತ್ತದೆ -ಎಂದೂ ಪ್ರಾರಬ್ಧವು ಉಪಭೋಗದಿಂದ ನಾಶವಾಗುತ್ತದೆ ಎಂದೂ ಹೇಳುವದು ಯುಕ್ತವಾದದ್ದು. ಆದುದರಿಂದ ಬ್ರಹ್ಮಜ್ಞಾನಿಗೂ ಪ್ರಾರಬ್ಧ ಕರ್ಮವು ಉಂಟು ಎಂದು ಒಪ್ಪಬೇಕು. -ಈ ರೀತಿಯಲ್ಲಿ ಆಡುವ ಅಜ್ಞಾನಿಗಳ ಮಾತುಗಳನ್ನು ವಿಮರ್ಶೆ ಮಾಡಬೇಕು. ಜ್ಞಾನದ ಸ್ವರೂಪವೇನು? "ಮೂರುಕಾಲಗಳಲ್ಲಿಯೂ ನಾನು ಅಕರ್ತೃವೂ, ಅಭೋಕ್ತೃವೂ ಆದ,

ಅದ್ವಿತೀಯವಾದ ಬ್ರಹ್ಮಸ್ವರೂಪನೇ ಆಗಿರುತ್ತೇನೆ. ನಾನು ಜೀವನೆಂದು ನನ್ನನ್ನು ತಪ್ಪಾಗಿ ತಿಳಿದ ಕಾಲದಲ್ಲಿಯೂ ನಾನು ಬ್ರಹ್ಮವೇ ಆಗಿದ್ದೆನು. ಬ್ರಹ್ಮವನ್ನಾಗಿ ತಿಳಿಯದೇ ಜೀವನೆಂದು ತಪ್ಪಾಗಿ ತಿಳಿದಿದ್ದೆನು. ಬ್ರಹ್ಮಕ್ಕಿಂತ ವ್ಯತಿರಿಕ್ತವಾದದ್ದು ಯಾವದೊಂದೂ ಇಲ್ಲ. -ಆ ಬ್ರಹ್ಮವು ನಾನೇ -ಎಂಬ ತಿಳಿವಳಿಕೆಯು ಜ್ಞಾನವು. ಇಂತಹ ಜ್ಞಾನವು ಬಂದಮೇಲೆ ನಾನು ಕರ್ತೃವೇ ಅಲ್ಲ ಎಂದು ತಿಳಿದಮೇಲೆ ಕರ್ಮ ಹೇಗೆ ಸಂಭವವಾದೀತು? ಕರ್ಮವನ್ನೂ ಸಹ ಬ್ರಹ್ಮಸ್ವರೂಪವನ್ನಾಗಿಯೇ ತಿಳಿದಿರುತ್ತಾನಾದುದರಿಂದ ಪ್ರಾರಬ್ಧ ಕರ್ಮವೊಂದು ಹೇಗೆ ಉಳಿಯಬಲ್ಲದು? ಜ್ಞಾನವಿರಬೇಕಾದರೆ ದೇಹವಿರಬೇಕಲ್ಲ? ಎಂಬುದೂ ಅಜ್ಞಾನಿಯ ಮಾತು. ಜ್ಞಾನಿಯಾದರೋ ಸರ್ವವನ್ನೂ ಬ್ರಹ್ಮವನ್ನಾಗಿಯೇ ಅನುಭವಿಸುವವನಾಗಿರುವದರಿಂದ ಬ್ರಹ್ಮಕ್ಕಿಂತ ವ್ಯತಿರಿಕ್ತವಾದ ಶರೀರಾದಿ ಯಾವದೊಂದೂ ಇರುವದಕ್ಕೆ ಸಾಧ್ಯವೇ ಇಲ್ಲ. ಪೂರ್ವದಲ್ಲಿ ಶರೀರವಿದೆ ಎಂಬ ಭ್ರಾಂತಿಜ್ಞಾನವಿತ್ತು. ಈಗ ಆ ಭ್ರಾಂತಿಜ್ಞಾನವು "ನಾನು ಅದ್ವಿತೀಯವಾದ ಬ್ರಹ್ಮವಾಗಿದ್ದೇನೆ" ಎಂಬ ಸಮ್ಯಜ್ಞಾನದಿಂದ ಬಾಧಿತವಾಗಿರುತ್ತದೆ. ಆದುದರಿಂದ ಜ್ಞಾನಿಗೂ ಶರೀರವು ಇರುವದಕ್ಕೆ ಅವಶ್ಯಕವಾದ ಪ್ರಾರಬ್ಧಕರ್ಮ ಉಂಟೆಂಬುದು ಅಜ್ಞಾನಿಗಳಿಂದ ಆರೋಪಿತವಾದದ್ದೇ ಹೊರ್ತು ಪರಮಾರ್ಥವಾದದ್ದಲ್ಲ. ಈ ವಿಷಯವನ್ನು ಶ್ರೀಮಚ್ಛಂಕರಾಚಾರ್ಯರು ಛಾಂದೋಗ್ಯಭಾಷ್ಯದಲ್ಲಿ (6-14-2 ರಲ್ಲಿ) ಹೀಗೆ ಬರೆದಿರುತ್ತಾರೆ. "ಜ್ಞಾನೋತ್ಪತ್ತೇರೂರ್ಧ್ವಂಚ ಬ್ರಹ್ಮವಿದಃ ಕರ್ಮಾಭಾವಂ ಯದವೋಚಾಮ ಬ್ರಹ್ಮಸಂಸ್ಥೋಽಮೃತತ್ವಮೇತೀತ್ಯತ್ರ ತಚ್ಚ ಸ್ಮರ್ತುಮರ್ಹಸಿ।" ಅರ್ಥ:- ಜ್ಞಾನವು ಹುಟ್ಟಿದಮೇಲೆ ಬ್ರಹ್ಮಜ್ಞಾನಿಗೆ ಯಾವ ಕರ್ಮದ ಅಭಾವವನ್ನು "ಬ್ರಹ್ಮಸಂಸ್ಥೋಽಮೃತತ್ವಮೇತಿ" ಎಂಬಲ್ಲಿ ಹೇಳಿದೆವೋ ಅದನ್ನು ಸ್ಮರಿಸಿಕೊಳ್ಳಲು ಅರ್ಹನಾಗಿರುತ್ತಿ. ಛಾಂ 2-13-1ರಲ್ಲಿ "ಬ್ರಹ್ಮಸಂಸ್ಥೋಽಮೃತತ್ವಮೇತಿ" ಎಂಬಲ್ಲಿ ವೇದಾನ್ತ ಪ್ರಮಾಣ ಜನಿತೈಕತ್ವ ಪ್ರತ್ಯಯವತಏವ ಕರ್ಮನಿವೃತ್ತಿಲಕ್ಷಣಂ ಪಾರಿವ್ರಾಜ್ಯಂ ಬ್ರಹ್ಮ ಸಂಸ್ಥತ್ವಂ ಚೇತಿ ಸಿದ್ಧಮ್॥ ಎಂದು ಬರೆದಿದ್ದಾರೆ. ಅರ್ಥ:- ವೇದಾನ್ತಪ್ರಮಾಣದಿಂದುಂಟಾದ ಏಕತ್ವಜ್ಞಾನವುಳ್ಳವನಿಗೆ ಕರ್ಮವಿಲ್ಲದ್ದೇ

ಲಕ್ಷಣವಾಗಿವುಳ್ಳ ಸಂನ್ಯಾಸತ್ವವೂ, ಬ್ರಹ್ಮಸಂಸ್ಥತ್ವವೂ ಎಂಬುದು ಸಿದ್ಧವು. -ಆದುದರಿಂದ ಜ್ಞಾನಿಗೆ ಪರಮಾರ್ಥವಾದ ಜ್ಞಾನದ ದೃಷ್ಟಿಯಿಂದ ಯಾವ ಕರ್ಮವೂ ಇಲ್ಲ.

## ೨೩. ಬ್ರಹ್ಮಜ್ಞಾನಿಗೆ ಪ್ರಪಂಚವು ಕಾಣುವುದಿಲ್ಲವೆ ?

ಬ್ರಹ್ಮಜ್ಞಾನಿಗೆ ಪ್ರಪಂಚವು ಕಾಣುವುದಿಲ್ಲವೆ? ತನ್ನ ಶರೀರ ಕಾಣುವುದಿಲ್ಲವೆ? ಶಿಷ್ಯ ಕಾಣುವುದಿಲ್ಲವೆ? ಪ್ರಪಂಚವೇ ಕಾಣದಿದ್ದರೆ ಅವನು ಇರುವದು ಎಲ್ಲಿ? ಶರೀರವೇ ಕಾಣದಿದ್ದರೆ ಜ್ಞಾನಿಯೆಂದರೆ ಯಾರು? ಶಿಷ್ಯರು ಕಾಣದಿದ್ದರೆ ಯಾರಿಗೆ ಉಪದೇಶಮಾಡಬೇಕು? ಆದುದರಿಂದ ಪ್ರಪಂಚವೂ, ಶರೀರವೂ, ಶಿಷ್ಯನೂ ಮುಂತಾದ ಸರ್ವವೂ ಕಾಣಲೇಬೇಕು. ಇದಕ್ಕಾಗಿ ಪ್ರಾರಬ್ಧಕರ್ಮವನ್ನು ಒಪ್ಪಬೇಕು-ಎಂಬ ಸಂದೇಹಬರಬಹುದು; ಈ ವಿಷಯವನ್ನು ಎರಡು ದೃಷ್ಟಿಯಿಂದ ನೋಡಬೇಕಾಗುತ್ತದೆ. ಜ್ಞಾನಿಗೆ ಶರೀರವೇ ಇಲ್ಲದರಿಂದ ಅವನಿಗೆ ಪ್ರಪಂಚದ ಅನುಭವ ಇಲ್ಲ. ಆದರೆ ಶರೀರಾದ ಸಂಘಾತಕ್ಕೆ ಮೊದಲು ಹೇಗೆ ಸತ್ಯವಾದದ್ದಾಗಿ ಕಾಣುತ್ತಿತ್ತೋ ಹಾಗೆ ಬಾಧಿತವಾದ ಮೇಲೆ ಸತ್ಯವಾದದ್ದಾಗಿ ಕಾಣುವುದಿಲ್ಲ-ಎಂದು ಮಾತ್ರ ಹೇಳುತ್ತಾರೆ. ಉದಾಹರಣೆಗೆ ಒಬ್ಬ ಮನುಷ್ಯನು ಒಂದು ಹಗ್ಗವನ್ನು ಹಾವನ್ನಾಗಿ ತಪ್ಪಾಗಿ ತಿಳಿದಿದ್ದನು. ಆ ಭ್ರಾಂತಿಕಾಲದಲ್ಲಿ ಸತ್ಯವಾದ ಸರ್ಪವೆಂದೇ ಅದನ್ನು ತಿಳಿದು ಹೆದರಿ ಹಾರಿಹೋಗಿದ್ದನು. ಅನಂತರದಲ್ಲಿ ಅದೇ ಮನುಷ್ಯನು ಚೆನ್ನಾಗಿ ಹೊರಳಾಡಿಸಿ ನೋಡಿ "ಇದು ಹಾವಲ್ಲ ಹಗ್ಗವು" -ಎಂದು ತಿಳಿದನು. ಆಮೇಲೆಯೂ ಮೊದಲಿನಂತೆಯೇ ದೂರದಲ್ಲಿ ನಿಂತು ಅದನ್ನು ನೋಡಲು ಹಾವಿನಂತೆಯೇ ಕಾಣಿಸಿತು. ಆಗ ಅವನಿಗೆ ಹಾವು ಎಂಬ ತಪ್ಪು ಜ್ಞಾನವು, ಹಗ್ಗ ಎಂಬ ಸರಿಯಾದ ತಿಳಿವಳಿಕೆಯಿಂದ ಬಾಧಿತವಾಗಿದ್ದುದ್ದರಿಂದ ಹಾವಿನ ಹಾಗೆ ಕಂಡರೂ ಸ್ವಲ್ಪವೂ ಹೆದರದೇ" ಎಲೆ ! ಎಲೆ! ಹಾವಿನ ಹಾಗೆಯೇ ಕಾಣುತ್ತದೆ! ಎಂದು ಹೇಳುತ್ತಾನೆ. ಹೀಗೆ ಬಾಧಿತವಾದ ಮೇಲೆಯೂ ಕಾಣಬಹುದು; ಆದರೆ ಅದು ಮೊದಲಿನಂತೆ ಸತ್ಯವಾದದ್ದಾಗಿಯೂ ಕಾರ್ಯಕಾರಿಯಾದದ್ದಾಗಿಯೂ ಇರುವುದಿಲ್ಲ. ಇದೇ

ರೀತಿಯಲ್ಲಿ "ಸರ್ವವೂ ಬ್ರಹ್ಮವೇ" -ಎಂಬ ಅನುಭವರೂಪವಾದ ಜ್ಞಾನ ಬಂದಮೇಲೆಯೂ ಸರ್ವವೂ ಇದ್ದಂತೆ ತೋರಬಹುದು. ಆದರೆ ಅದರ ಇರುವಿಕೆಯು ಬಾಧಿತವಾಗಿರುತ್ತದೆ. ಹಾಗೆ ಬಾಧಿತವಾದ ಮೇಲೆಯೂ ಇದ್ದಂತೆ ತೋರುವದು ಯಾವ ಕಾರ್ಯಕಾರಿಯೂ ಆಗುವದಿಲ್ಲ. ಅದು ನಿಜವಾಗಿ ಇರುವದೂ ಇಲ್ಲ.

ಶ್ರೀಮದ್ಭಾಷ್ಯಕಾರರು ಬ್ರಹ್ಮಸೂತ್ರಭಾಷ್ಯ ೪-೧-೧೫ರಲ್ಲಿ ಹೀಗೆ ಬರೆದಿರುತ್ತಾರೆ "ಅಕರ್ತ್ರಾತ್ಮಬೋಧೋಽಪಿ ಹಿ ಮಿಥ್ಯಾಜ್ಞಾನಬಾಧನೇನ ಕರ್ಮಾಣ್ಯುಚ್ಛಿನತ್ತಿ। ಬಾಧಿತಮಪಿ ತು ಮಿಥ್ಯಾಜ್ಞಾನಂ ದ್ವಿಚಂದ್ರಜ್ಞಾನವತ್ ಸಂಸ್ಕಾರವಶಾತ್ ಕಂಚಿತ್ಕಾಲಂ ಅನುವರ್ತತೇ ಏವ। ಎಂದು ಬರೆದಿದ್ದಾರೆ.

ಅರ್ಥ:- ಅಕರ್ತ್ರಾತ್ಮಜ್ಞಾನವೂ ಮಿಥ್ಯಾಜ್ಞಾನವನ್ನು ಬಾಧಿಸುವದರಿಂದಲೇ ಕರ್ಮಗಳನ್ನು ನಾಶಗೊಳಿಸುತ್ತದೆ. ಮಿಥ್ಯಾಜ್ಞಾನವು ಬಾಧಿತವಾದ ಮೇಲೆಯೂ ಇಬ್ಬರು ಚಂದ್ರರ ಜ್ಞಾನದಂತೆ ಸಂಸ್ಕಾರವಶದಿಂದ ಕೆಲವು ಕಾಲದವರೆಗೆ ಇದ್ದುಕೊಂಡೇ ಇರುತ್ತದೆ. -ಚಂದ್ರನು ಒಬ್ಬನೇ ಎಂದು ತಿಳಿದ ಮೇಲೆಯೂ ಎರಡು ಚಂದ್ರರಿರುವಂತೆ ಕಾಣುತ್ತಿರಬಹುದಷ್ಟೆ? ಆದರೆ ಅದರ ಸತ್ಯತ್ವವು ಮಾತ್ರ ಜ್ಞಾನದಿಂದ ಬಾಧಿತವಾಗಿರುತ್ತದೆ. ಹಾಗೆಯೇ ಪ್ರಪಂಚಾದಿಗಳೂ ಜ್ಞಾನವಾದ ಮೇಲೆಯೂ ಇರುವಂತೆ ತೋರಬಹುದು; ಆದರೆ ಅವುಗಳ ಸತ್ಯತ್ವವು ಮಾತ್ರ ಆತ್ಮೈಕ್ಯ ಜ್ಞಾನದಿಂದ ಭಾದಿತವಾಗಿರುತ್ತದೆ. ಆದುದರಿಂದ ಪ್ರಪಂಚಾದಿಗಳು ತೋರಿದರೂ ಅವು ನಿಜವಾಗಿ ಇರುವುದಿಲ್ಲ.

## ೨೪ ಜ್ಞಾನಿಯ ವ್ಯವಹಾರ

ಜ್ಞಾನಿಯು ಸಕಲಕಾಮಗಳನ್ನೂ ಅವುಗಳ ತಾಯಿಬೇರಾದ ಅಜ್ಞಾನವನ್ನೂ ಕಳೆದಕೊಂಡು ಆತ್ಮಸ್ವರೂಪದಿಂದಲೇ ತೃಪ್ತನಾಗಿರುತ್ತಾನೆ. ಆದರೆ ಯಾವ ಶರೀರದಲ್ಲಿ ಜ್ಞಾನ ಉಂಟಾಯಿತೊ ಆ ಶರೀರಾದಿ ಸಂಘಾತಕೂಡ ವಿಷಯಸುಖವನ್ನೂ ತತ್ಸಾಧನವಾದ ದ್ರವ್ಯಾದಿಗಳನ್ನೂ ಸರ್ವಥಾ ಇಲ್ಲದವುಗಳನ್ನಾಗಿ ತಿಳಿದಿರುವವನಾದುದರಿಂದ ಅವನ್ನು ಬೇಕೆಂದು

ಬಯಸುವದಿಲ್ಲ, ಬರದಿದ್ದಾಗ ಬರಲಿಲ್ಲವೆಂದು ವ್ಯಥೆಗೊಳ್ಳುವದಿಲ್ಲ. ಬಂದದ್ದನ್ನು ರಾಗದ್ವೇಷಗಳಿಲ್ಲದೇ ಅನುಭವಿಸಿಕೊಂಡಿರುವವನಂತೆ ಇರುತ್ತಾನೆ. ಇಂದ್ರಿಯಗಳನ್ನೂ ಮನಸ್ಸನ್ನೂ ವಿಷಯಗಳನ್ನೂ ಆತ್ಮನಿಗಿಂತ ಭಿನ್ನವಾಗಿ ಇಲ್ಲವಾದವುಗಳನ್ನಾಗಿ ತಿಳಿದುಕೊಂಡು ಆತ್ಮನಿಷ್ಠನಾಗಿರುತ್ತಾನೆ. ಶರೀರಯಾತ್ರೆಗೆ ಬೇಕಾದಷ್ಟು ವಿಷಯಗಳನ್ನು ನಿಸ್ಪೃಹನಾಗಿ ಉಪಯೋಗಿಸಿಕೊಂಡಂತೆ ಉಪಯೋಗಿಸಿಕೊಂಡು ಶರೀರಾದಿಗಳಲ್ಲಿ "ನಾನು," "ನನ್ನದು" -ಎಂಬ ಅಭಿಮಾನವೂ ಇಲ್ಲದವಾಗಿ ಲೋಕಹಿತಕ್ಕಾಗಿ ಬೇಕಾದ ಕಾರ್ಯಗಳನ್ನು ಮಾಡಿದವನಂತೆ ಕಂಡರೂ ನಿಜವಾಗಿ ಕರ್ತೃತ್ವವನ್ನೇ ಕಳೆದುಕೊಂಡವನಾದುದರಿಂದ ಯಾವ ಕರ್ಮವನ್ನೂ ಮಾಡುವವನಾಗಿರುವದಿಲ್ಲ ಬ್ರಹ್ಮಸ್ವರೂಪದಲ್ಲಿಯೇ ನೆಲೆನಿಂತಿರುತ್ತಾನೆ.

ಉದಾಹರಣೆಗೆ ಒಬ್ಬ ರೈಲ್ವೆ ಪ್ರಯಾಣಿಕನು ರೈಲಿನಲ್ಲಿರುವವರ ಸಂಗಡ ಮಾತನಾಡುತ್ತಿರುತ್ತಾನೆ. ವ್ಯವಹಾರ ಮಾಡುತ್ತಿರುತ್ತಾನೆ. ದಾರಿಯಲ್ಲಿ ಎರಡು ಕಡೆಗಳಲ್ಲಿಯೂ ಕಾಣಬರುವ ಗಿಡಮರಗಳನ್ನೂ ನೋಡುತ್ತಿರುತ್ತಾನೆ; ಆದರೆ ಈ ವಿಧವಾದ ಯಾವ ವ್ಯವಹಾರವನ್ನು ಮಾಡುತ್ತಿದ್ದರೂ ದಾರಿಯಲ್ಲಿರುವ ಯಾವ ಗಿಡಮರಗಳನ್ನು ನೋಡುತ್ತಿದ್ದರೂ ತಾನು ಹೋಗಬೇಕಾಗಿರುವ ಊರನ್ನು ಸ್ವಲ್ಪವೂ ಮರೆಯದೇ ಅದನ್ನೇ ಮನಸ್ಸಿನಲ್ಲಿಟ್ಟುಕೊಂಡು ತತ್ಪ್ರಧಾನವಾಗಿರುತ್ತಾನೆಯೋ, ಅಲ್ಲಿ ನಡೆಸುವ ವ್ಯವಹಾರಗಳಿಗೂ ಕಾಣುವ ದೃಶ್ಯಗಳಿಗೂ ಯಾವ ವಿಧವಾದ ಬೆಲೆಯನ್ನೂ ಕೊಡದೇ ಬೆಲೆಯನ್ನು ಕೊಟ್ಟವನಂತೆಯೂ ಮರಗಿಡಗಳನ್ನು ನೋಡುವವನಂತೆಯೂ ಪ್ರಯಾಣಮಾಡುತ್ತಿರುತ್ತಾನೆಯೋ, ಹಾಗೆಯೇ ಜ್ಞಾನಿಯೂ ಕರ್ತೃತ್ವವನ್ನು ಜ್ಞಾನದಿಂದ ಹೋಗಲಾಡಿಸಿಕೊಂಡಿರುವವನಾದುದರಿಂದ ಅವನು ಇತರರ ದೃಷ್ಟಿಯಿಂದ ಯಾವ ಕರ್ಮವನ್ನು ಮಾಡಿದರೂ ಅವನ ದೃಷ್ಟಿಯಿಂದ ಅದು ಕರ್ಮವಾಗುವದಿಲ್ಲ. ಶ್ರೀ ಕೃಷ್ಣಪರಮಾತ್ಮನು ಅರ್ಜುನನ ಸಾರಥಿಯಾಗಿದ್ದನು. ಜ್ಞಾನಿಯಾದ ಜನಕ ಮಹಾರಾಜನು ರಾಜ್ಯವನ್ನು ಆಳಿದನು. ಶ್ರೀ ರಾಮಚಂದ್ರನು ಹನ್ನೊಂದು ಸಹಸ್ರ ವರ್ಷಗಳು ಪೂರ

ರಾಜ್ಯಭಾರವನ್ನು ಮಾಡಿದನು. ಈಗಲೂ ರಾಮರಾಜ್ಯ ಎಂದು ಕೊಂಡಾಡುವ ರೀತಿಯಲ್ಲಿ ರಾಜ್ಯಭಾರ ಮಾಡಿದನು. ಇವರುಗಳೆಲ್ಲರೂ 'ನಾನು ಮನುಷ್ಯನು,' 'ನಾನು ರಾಜನು'- ಎಂಬ ಅಜ್ಞಾನವನ್ನು 'ನಾನು ಸಾಕ್ಷಾತ್ಪರಬ್ರಹ್ಮನು'-ಎಂಬ ಜ್ಞಾನದಿಂದ ಬಾಧಿಸಿಕೊಂಡವರಾಗಿದ್ದುದರಿಂದ ಅವರುಗಳಿಗೆ ಕರ್ತೃತ್ವಭೋಕ್ತೃತ್ವಗಳೇ ಬಾಧಿತಗಳಾಗಿದ್ದುದ್ದರಿಂದ ಅವರ ಕರ್ಮವೂ ಕರ್ಮವಲ್ಲ , ಅವರು ಯಾವ ಕರ್ಮವನ್ನು ಮಾಡುತ್ತಿದ್ದರೂ ಆ ಕರ್ಮವನ್ನೂ ಸಹ ಬ್ರಹ್ಮಸ್ವರೂಪದಿಂದಲೇ ಕಾಣುತ್ತಾ ಬ್ರಹ್ಮಾನನ್ದಸಾಗರದಲ್ಲಿ ಮುಳುಗಿ ತೇಲುತ್ತಿರುತ್ತಿದ್ದರು. ಇವರೇ ಲೋಕಕ್ಕೆ ಕಲ್ಯಾಣವನ್ನು ಉಂಟುಮಾಡಿದ ಮಹನೀಯರು. ಈಗಲೂ ಇನ್ನು ಮುಂದೂ ಇಂತಹ ಜ್ಞಾನಿಗಳೇ ಲೋಕಕ್ಕೆ ಕಲ್ಯಾಣವನ್ನು ಉಂಟುಮಾಡುವದರಲ್ಲಿ ಸಮರ್ಥರೇ ಹೊರ್ತು ಮಿಕ್ಕ ಅಜ್ಞಾನಿಗಳು ಅಂದರೆ "ನಾನು ಇದನ್ನು ಮಾಡುತ್ತೇನೆ. ಇದನ್ನು ಮಾಡಿಸುತ್ತೇನೆ-"ಎಂದು ಅಹಂಕಾರಪೂರ್ವಕವಾಗಿ ಕೆಲಸಮಾಡುವವರೂ, ಕೆಲಸವನ್ನು ಮಾಡಿಸುವವರೂ ಅಲ್ಲ. ರೈಲು ಪ್ರಯಾಣಿಕನು ಇತರ ವಿಷಯಗಳಲ್ಲಿ ಗಮನವಿಟ್ಟಿರುವದಿಲ್ಲ. ಜ್ಞಾನಿಯು ಇತರವಸ್ತುಗಳನ್ನು ಬಾಧಿತವನ್ನಾಗಿಯೇ ತಿಳಿದಿರುತ್ತಾನೆ.

## ೨೬. ಆತ್ಮಾನಾತ್ಮರ ಇತರೇತರಾಧ್ಯಾಸಕ್ಕೆ ಉಪಾದಾನ ಕಾರಣವಿದೆಯೆ?

ಆತ್ಮನು ಶುದ್ಧ ಸನ್ಮಾತ್ರಸ್ವರೂಪನು, ಅದ್ವಿತೀಯಸತ್‌ಸ್ವರೂಪನು, ಕಲ್ಪಿತ ವಿಷಯಗಳಿದ್ದಾಗ ಅವನ್ನು ತಿಳಿಯುವ ವಿಷಯಿಯು. ತನ್ನನ್ನು ವಿಷಯವನ್ನಾಗಿ ಕಲ್ಪಿಸಿ ಕೊಂಡ ಕಾಲದಲ್ಲಿಯೂ ವಿಷಯಿಯಾಗಿ ಇರುವಿಕೆಯನ್ನು ಬಿಟ್ಟಿರದವನು. ದೇಹಾದಿಗಳು ಜಡಸ್ವರೂಪದವು, ಪರಮಾರ್ಥವಾಗಿ ಇಲ್ಲದವು, ಅನೃತಸ್ವರೂಪದವು, ಯಾವಾಗಲೂ ವಿಷಯಗಳಾಗಿಯೇ ತಿಳಿಯಲ್ಪಡತಕ್ಕವು. ಇಂತಹ ವಿರುದ್ಧಸ್ವಭಾವದವುಗಳು ಒಂದು ಮತ್ತೊಂದಾಗಿಯೂ, ಒಂದರ ಧರ್ಮವು ಮತ್ತೊಂದರ

ಧರ್ಮವಾಗಿಯೂ ಆಗಲು ಕಾರಣವಿಲ್ಲ. ಅಂದರೆ ಪರಮಾರ್ಥವಾಗಿ ಮೇಲೆ ವಿವರಿಸಿದ ಆತ್ಮವು ಅನಾತ್ಮವಾಗಲಾರದು; ಅನಾತ್ಮವಾದ ದೇಹಾದಿಗಳೂ ಆತ್ಮವಾಗಲಾರವು, ಆದುದರಿಂದಲೇ ಇವುಗಳಲ್ಲಿ ಒಂದರ ಧರ್ಮವು ಮತ್ತೊಂದರ ಧರ್ಮವೂ ಆಗಲಾರದು; ಆದಾಗ್ಯೂ ಸತ್ಯವಾದ ಆತ್ಮನನ್ನೂ ಅನೃತವಾದ ದೇಹಾದ್ಯನಾತ್ಮವಸ್ತುವನ್ನೂ "ಇದು ಸತ್ಯವಾದ ಆತ್ಮವಸ್ತು, ಇದು ಅನೃತವಾದ ಅನಾತ್ಮವಸ್ತು" -ಎಂದು ಮುಂತಾದ ಇತರೇತರ ವಿವೇಕವಿಲ್ಲದಿರುವುದರಿಂದ ಸತ್ಯವಾದ ಆತ್ಮನನ್ನೂ ಅನೃತವಾದ ಅನಾತ್ಮವಾದ ದೇಹಾದಿಗಳನ್ನೂ ಒಂದನ್ನೊಂದಾಗಿ ಸ್ವಭಾವವಾಗಿಯೇ ತಪ್ಪಾಗಿ ತಿಳಿದುಕೊಂಡು ನಾನು ಮನುಷ್ಯ, ನಾನು ಬ್ರಾಹ್ಮಣ ನಾನು ಅಬ್ರಾಹ್ಮಣ, ನಾನು ಗಂಡಸು, ನಾನು ಹೆಂಗಸು, ನಾನು ವಿದ್ವಾಂಸನು, ನಾನು ಮೂಢನು, ನಾನು ಕರ್ತೃವು, ನಾನು ಭೋಕ್ತೃವು ಎಂದು ಮುಂತಾಗಿ ಲೋಕದಲ್ಲಿ ಎಲ್ಲರೂ ವ್ಯವಹರಿಸುತ್ತಿದ್ದಾರೆ. ದೇಹಾದಿಗಳಲ್ಲಿ ನಾನು ಎಂಬ ತಪ್ಪು ತಿಳಿವಳಿಕೆಯು ಸ್ವಭಾವವಾಗಿ ಬಂದ ಕೂಡಲೇ ನಾಮ ರೂಪಾತ್ಮಕವಾದ, ಕರ್ತೃ ಭೋಕ್ತೃಗಳಿಂದ ಕೂಡಿದ ದೇಶ, ಕಾಲ, ಕಾರ್ಯ, ಕಾರಣ, ಕ್ರಿಯಾ, ಕ್ರಿಯಾಫಲ-ಇವುಗಳಿಗೆ ಆಶ್ರಯವಾದ ಪ್ರಪಂಚವನ್ನು ನೋಡುತ್ತಾನೆ. "ಕಾರ್ಯರೂಪವಾದ ಪ್ರಪಂಚವು ತನಗೆ ಉಪಾದಾನಕಾರಣವಿಲ್ಲದೇ ಉಂಟಾಗಲಾರದು; ಆದುದರಿಂದ ಇದಕ್ಕೆ ಉಪಾದಾನ ಕಾರಣವಿರಬೇಕೆಂದು" -ಬ್ರಹ್ಮವೆಂದಾಗಲಿ, ಬ್ರಹ್ಮಕಿಂತ ಭಿನ್ನವೆಂದಾಗಲಿ ಹೇಳುವುದಕ್ಕೆ ಬರದ ಪ್ರಕೃತಿ, ಮಾಯೆ, ಅಕ್ಷರ, ಶಕ್ತಿ ಎಂಬ ಹೆಸರಿನ ಬೀಜರೂಪವಾದ ನಾಮ ರೂಪಗಳನ್ನು ಪ್ರಪಂಚಕ್ಕೆ ಉಪಾದಾನ ಕಾರಣವೆಂದೂ ಈ ಆತ್ಮಾನಾತ್ಮರುಗಳ ಇತರೇತರಾಧ್ಯಾಸ ಸ್ವರೂಪವಾದ ತಪ್ಪು ತಿಳಿವಳಿಕೆಯಿಂದಲೇ ಕಲ್ಪಿಸಿಕೊಳ್ಳುತ್ತಾನೆ. ಈ ತಪ್ಪು ತಿಳಿವಳಿಕೆಯಿಂದಲೇ ಜನ್ಮಾಂತರ ಲೋಕಾನ್ತರ, ಉತ್ಪತ್ತಿ, ಪ್ರಲಯ -ಮುಂತಾದ ಸಮಸ್ತ ವ್ಯವಹಾರವನ್ನೂ 'ನಿರಂತರವಾದ ಬ್ರಹ್ಮಸ್ವರೂಪನೇ ನಾನು' -ಎಂಬ ಅನುಭವರೂಪವಾದ ಜ್ಞಾನ ಬರುವವರೆಗೂ

ಮಾಡುತ್ತಲಿರುತ್ತಾನೆ. ಇಂತಹ ಅತ್ಮಾನಾತ್ಮರ ಇತರೇತರಾಧ್ಯಾಸಕ್ಕೆ ಏನು ಕಾರಣ? ಎಂದು ಕೇಳಬೇಕಾದರೂ ಅಧ್ಯಾಸ ಮಾಡಿಕೊಂಡವನೇ ಕೇಳಬೇಕಾಗಿದೆ. ಈ ಅಧ್ಯಾಸಕ್ಕೆ ಮಾಯೆಯು ಕಾರಣ ಎಂದು ಹೇಳಬೇಕಾದರೂ ಅಧ್ಯಾಸವನ್ನು ಮಾಡಿಕೊಂಡೇ ಹೇಳಬೇಕಾಗಿದೆ. ಏನನ್ನು ವ್ಯವಹರಿಸಬೇಕಾದರೂ ಈ ಅಧ್ಯಾಸವನ್ನು ಮಾಡಿಕೊಂಡೇ ವ್ಯವಹರಿಸಬೇಕಾಗಿದೆ. ಕಾಲ ದೇಶಾದಿಗಳ ವ್ಯವಹಾರವನ್ನೂ ಈ ಅಧ್ಯಾಸವನ್ನು ಮಾಡಿಕೊಂಡ ಮೇಲೆಯೇ ಮಾಡಬೇಕಾಗಿದೆ. ಆದುದರಿಂದ ಈ ಆತ್ಮಾನಾತ್ಮರ ಇತರೇತರಾಧ್ಯಾಸವು ಸ್ವಾಭಾವಿಕವಾದದ್ದು, ಅನಾದಿಯಾದದ್ದು, ಅನಂತವಾದದ್ದು-ಎಂದು ಸಿದ್ಧವಾಯಿತು. ಹೀಗೆ ಅನಾದ್ಯನ್ತವಾದದ್ದಾಗಿದ್ದರೂ ತಪ್ಪುತಿಳಿವಳಿಕೆಯ ರೂಪವಾದ ದ್ದಾಗಿರುವುದರಿಂದ ಯಾವ ಉಪಾದಾನ ಕಾರಣವನ್ನೂ ಬಯಸುವುದಿಲ್ಲ. ಮತ್ತು ಜ್ಞಾನದಿಂದ ಬಾಧ್ಯವೂ ಆಗಿರುತ್ತದೆ. ಸ್ವಾಭಾವಿಕವಾದದ್ದೂ ಆಗಿರುತ್ತದೆ.

## ೨೬ ಸರ್ವರೂ ಬ್ರಹ್ಮಸ್ವರೂಪರೇ ಆಗಿದ್ದರೂ 'ನಾವು ಬ್ರಹ್ಮಸ್ವರೂಪರೇ ಆಗಿದ್ದೇವೆ' ಎಂದು ಏಕೆ ತಿಳಿಯುವದಿಲ್ಲ?

ಸ್ವಭಾವವಾಗಿ ಇಂದ್ರಿಯಗಳು ಹೊರಮುಖವಾಗಿ ವಿಷಯಗಳನ್ನೇ ನೋಡುತ್ತಿರುತ್ತವೆ ಆತ್ಮನು ವಿಷಯನಲ್ಲ. ವಿಷಯಗಳನ್ನು ನೋಡುವ ವಿಷಯಿಯು. ವಿಷಯಿಯನ್ನು ತಿಳಿಯಲು ಮೊದಲು ವಿಷಯಗಳ ಮೇಲಿನ ಗಮನವನ್ನು ಬಿಡಬೇಕು. ಸ್ವಭಾವವಾಗಿಯೇ ಸರ್ವರೂ ಈ ಲೋಕದ ಪುತ್ರಮಿತ್ರಧನಕನಕವಸ್ತುವಾಹನಾದಿಗಳಲ್ಲಿಯೂ ಪರಲೋಕದ ಸ್ವರ್ಗಾದಿಗಳಲ್ಲಿಯೂ ಆಸಕ್ತರಾಗಿರುತ್ತಾರೆ, ಅದಕ್ಕಾಗಿ ಸಾಧನಗಳನ್ನು ಮಾಡುತ್ತಾರೆ ಫಲಗಳನ್ನು ಪಡೆದು ಅನುಭವಿಸುತ್ತಾರೆ, ಮತ್ತೆ ಮತ್ತೆ ಇದೇ ರೀತಿಯಲ್ಲಿಯೇ ಮಾಡುತ್ತಿರುತ್ತಾರೆ. ಆತ್ಮನ ಕಡೆಗೆ ಗಮನವನ್ನೇ

ಕೊಡುವದಿಲ್ಲ. ತಾವು ಇಂತಹವರು ಅಂತಹವರು ಎಂದು ಅಂದುಕೊಂಡು ತಮತಮಗೆ ಬೇಕಾದ ವಸ್ತುಗಳನ್ನು ಪಡೆಯಲು ಪ್ರಯತ್ನಿಸುತ್ತಿರುತ್ತಾರೆ, ಧರ್ಮಾಧರ್ಮಾದಿಗಳನ್ನು ಮಾಡುತ್ತಾರೆ. ಅವುಗಳ ಫಲವಾದ ಸುಖದುಃಖಗಳನ್ನು ಅನುಭವಿಸುವದಕ್ಕೆ ಜನ್ಮಾನ್ತರಗಳನ್ನು ಎತ್ತುತ್ತಿರುತ್ತಾರೆ. ಇದೇ ರೀತಿಯಲ್ಲಿ ಸಂಸಾರದಲ್ಲಿ ಸುತ್ತುತ್ತಿರುತ್ತಾರೆ. ಇದೇ ಅಭಿಪ್ರಾಯವನ್ನು ಶ್ರೀ ಶಂಕರಭಗವತ್ಪಾದವರು ಭಗವದ್ಗೀತೆಯ ಭಾಷ್ಯದಲ್ಲಿ (೭-೧೩) ಹೀಗೆ ವಿವರಿಸಿರುತ್ತಾರೆ : 'ಏವಂಭೂತಮಪಿ ಪರಮೇಶ್ವರಂ ನಿತ್ಯಶುದ್ಧ ಬುದ್ಧ ಮುಕ್ತಸ್ವಭಾವಂ ಸರ್ವಭೂತಾತ್ಮಾನಂ ನಿರ್ಗುಣಂ ಸಂಸಾರ ದೋಷ ಬೀಜದಾಹಾಯ ಮಾಂ ನಾಭಿಜಾನಾತಿ ಲೋಕಃ। ತಚ್ಚ್ಕಿನ್ನಿಮಿತ್ತಂ ಜಗತಃ ಅಜ್ಞಾನಮ್? ಉಚ್ಯತೇ :-

ಅರ್ಥ:- (ನಾನು) ಹೀಗಿದ್ದರೂ (ಅನಾತ್ಮಕ್ಕಿಂತ ಬೇರೆಯಾಗಿ ಅನಾತ್ಮವನ್ನು ವಶದಲ್ಲಿಟ್ಟುಕೊಂಡಿರುವವನಾದರೂ) ಪರಮೇಶ್ವರನಾದ, ನಿತ್ಯಶುದ್ಧ ಬುದ್ಧ ಮುಕ್ತಸ್ವಭಾವದವನಾದ, ಸರ್ವಭೂತಗಳಿಗೂ ಆತ್ಮನಾದ, ನಿರ್ಗುಣನಾದ ನನ್ನನ್ನು ಸಂಸಾರಬೀಜದೊಷವನ್ನು ಸುಡುವದಕ್ಕೆ ಲೋಕವು ಅರಿತುಕೊಳ್ಳುವದಿಲ್ಲ. ಈ ಜಗತ್ತಿನ ಅಜ್ಞಾನಕ್ಕಾದರೂ ಕಾರಣವೇನು? ಎಂದರೆ ಭಗವಂತನು ಹೇಳುತ್ತಾನೆ,

ತ್ರಿಭಿರ್ಗುಣಮಯೈರ್ಭಾವೈರೇಭಿಸ್ಸರ್ವಮಿದಂ ಜಗತ್।
ಮೋಹಿತಂನಾಭಿಜಾನಾತಿಮಾಮೇಭ್ಯಃಪರಮವ್ಯಯಮ್॥೭-೧೩॥

ಅರ್ಥ:- ಈಮೂರು ಗುಣಮಯವಾದ ಎಂದರೆ ಗುಣಗಳ ಕಾರ್ಯವಾಗಿರುವ ರಾಗ, ದ್ವೇಷ, ಮೋಹ-ಮುಂತಾದ ಪ್ರಕಾರದ, ಮೇಲೆ ಹೇಳಿದ ಈ ಪದಾರ್ಥಗಳಿಂದ ಈ ಪ್ರಾಣಿಸಮೂಹವೆಂಬ ಜಗತ್ತೆಲ್ಲವೂ ಮೋಹಿತವಾಗಿ ಅಂದರೆ ಅವಿವೇಕಿತ್ವವನ್ನು ಹೊಂದಿರುವದಾಗಿ, ಮೇಲೆ ಹೇಳಿದ ಈ ಗುಣಗಳಿಗಿಂತ ಬೇರೆಯಾಗಿ, ಅವುಗಳು ಇಲ್ಲದವನಾಗಿ, ಬೇರೊಂದು ಸ್ವಭಾವದವನಾಗಿ ಅವ್ಯಯನಾಗಿ ಇರುವ ನನ್ನನ್ನು ಅರಿಯುವದಿಲ್ಲ. ಇದರಿಂದ -ಅಂದರೆ ಜನರು ಮಾಯಾಮಯವಾದ

ಪ್ರಪಂಚದಲ್ಲಿ ಆಸಕ್ತರಾಗಿರುವದರಿಂದ -ಪರಮಾತ್ಮನನ್ನು ಅರಿಯುವದಿಲ್ಲ -ಎಂಬುದು ಸ್ಪಷ್ಟವಾಯಿತು. ಉದಾಹರಣೆಗಾಗಿ ಹುಡುಗರನ್ನು ನೋಡಿ. ಆಟದಲ್ಲಿ, ತಿಂಡಿಯುಲ್ಲಿ ಆಸಕ್ತರಾದ ಹುಡುಗರನ್ನು ಕರೆದುಕೊಂಡು ಅಮೂಲ್ಯವಾದ ರತ್ನಗಳನ್ನೂ, ತಿಂಡಿಯ ಸಾಮಾನುಗಳನ್ನೂ, ಆಟದ ಸಾಮಾನುಗಳನ್ನೂ ಇಟ್ಟಿರುವ ಅಂಗಡಿ ಹೋಗಿ "ನಿಮಗೆ ಬೇಕಾದದ್ದನ್ನು ಕೊಡಿಸುತ್ತೇನೆ. ಯಾವದನ್ನು ಬೇಕಾದರೂ ತೆಗೆದುಕೊಳ್ಳಿ"- ಎಂದು ದೊಡ್ಡವರು ಹೇಳಿದರೆ ಆ ಹುಡುಗರು ಹತ್ತಿರದಲ್ಲಿಯೇ ಅಮೂಲ್ಯವಾದ ಪದಾರ್ಥಗಳಿದ್ದರೂ ಅವನ್ನು ಬಿಟ್ಟು ದೂರದಲ್ಲಿದ್ದರೂ ಸಹ ತಮಗೆ ಬೇಕಾದ ಆಟದ ಸಾಮಾನುಗಳನ್ನಾಗಲೀ ತಿಂಡಿಯ ಪದಾರ್ಥಗಳನ್ನಾಗಲೀ ಕೇಳುತ್ತಾರಲ್ಲವೆ? ಏಕೆ? ಅವರ ಮನಸ್ಸು ಅವುಗಳಲ್ಲಿ ನೆಟ್ಟುಕೊಂಡಿರುತ್ತದೆ. ಹೀಗೆಯೇ ಮೂಢರಾದ ಜನರೂ ಗುಣಮಯವಾದ, ಅಸಾರವಾದ ವಿಷಯಗಳಲ್ಲಿ ಮನಸ್ಸನ್ನು ನೆಟ್ಟಿರುತ್ತಾರೆ; ಆದುದರಿಂದ ಅವರು ತಮ್ಮ ನಿಜವಾದ ಆತ್ಮನನ್ನು ಗಮನಿಸುವುದಿಲ್ಲ. ವಿಷಯಗಳನ್ನೇ ಬಯಸಿ ಪತಂಗದ ಹುಳುವು ದೀಪದಲ್ಲಿ ಬಿದ್ದು ಸಾಯುವಂತೆ ಮರಣಕ್ಕೆ ಈಡಾಗುತ್ತಾರೆ.

## ೨೭. ಕರ್ಮಯೋಗವನ್ನಾಚರಿಸಬೇಕು.

ಪರಮಾತ್ಮನನ್ನು ತಿಳಿಯಲು ಎರಡು ಮಾರ್ಗಗಳಿವೆ. ಒಂದು ನೇರಾದ ಮಾರ್ಗ - ಮತ್ತೊಂದು ಸುತ್ತಿಕೊಂಡು ಹೋಗಿ ಸೇರುವ ಮಾರ್ಗ. ಮೊದಲನೆಯದು ತತ್ತ್ವವನ್ನು ಅಥವಾ ಪರಮಾತ್ಮನನ್ನು ಆತ್ಮರೂಪದಿಂದ ನೇರಾಗಿ ನೋಡುವ ಮಾರ್ಗ. "ಸಕ್ಕರೆಯನ್ನು ತಿಳಿದಿದ್ದೀರ?" ಎಂದು ಕೇಳಿದರೆ ಸಕ್ಕರೆಯನ್ನು ನೋಡಿ, ತಂದು ತಿಂದವರು "ನಾವು ತಿಳಿದಿದ್ದೇವೆ, ಸಕ್ಕರೆ ಸಿಹಿಯಾಗಿದೆ" -ಎಂದು ಹೇಗೆ ಹೇಳುತ್ತಾರೆಯೋ ಹಾಗೆ "ಪರಮಾತ್ಮನನ್ನು ತಿಳಿದಿದ್ದೀರ?" ಎಂದರೆ "ಪರಮಾತ್ಮನು ನಮ್ಮ ನಿಜವಾದ ಆತ್ಮನು. ಅನಾತ್ಮವಾದ ಅನೃತವಾದ ದೇಹಾದಿಗಳನ್ನು ಕ್ಷೇತ್ರವನ್ನಾಗಿ ಆತ್ಮನಿಂದ ಬೇರ್ಪಡಿಸಿ ಆತ್ಮರೂಪದಲ್ಲಿಯೇ ನಿಂತು ಆತ್ಮತತ್ತ್ವವನ್ನು ಆತ್ಮ

ರೂಪದಿಂದಲೇ ನೇರಾಗಿ ತಿಳಿದಿದ್ದೇವೆ." ಎಂದು ಹೇಳುವಂತೆ ತಿಳಿಯುವದು ಜ್ಞಾನವು. ಇಂತಹ ಅನುಭವರೂಪವಾದ ಆತ್ಮೈಕತ್ವಜ್ಞಾನವನ್ನು ಹೊಂದಲು ನಿವೃತ್ತಿಧರ್ಮನಿಷ್ಠರಾದ ಉತ್ತಮಾಧಿಕಾರಿಗಳಾಗಿರಬೇಕು. ಇಲ್ಲದಿದ್ದರೆ ತಪ್ಪಾಗಿ ತಿಳಿದುಬಿಡುತ್ತಾರೆ. ಇಂತಹ ಉತ್ತಮಾಧಿಕಾರಿಗಳು ಬಹಳ ವಿರಳರಾಗಿರುತ್ತಾರೆ. ಲೋಕದಲ್ಲಿ ಮಂದಮಧ್ಯಮಾಧಿಕಾರಿಗಳೇ ಜಾಸ್ತಿಯಾಗಿದ್ದಾರೆ. ಇವರಿಗೆ ಮೇಲೆ ಹೇಳಿದ ಜ್ಞಾನವು ಲಭ್ಯವಾಗುವುದಿಲ್ಲ. ಆದುದರಿಂದ ಇಂತಹವರು ಕ್ರಮೇಣ ಜ್ಞಾನವನ್ನು ಸಂಪಾದಿಸಲು ಅನುಕೂಲವಾಗುವಂತೆ ಮಾನಸಿಕ, ಶಾರೀರಿಕ ಕರ್ಮಾನುಷ್ಠಾನರೂಪವಾದ ಮಾರ್ಗವನ್ನು ಅನುಸರಿಸುವದಕ್ಕಾಗಿ ಕರ್ಮಯೋಗವನ್ನು ಹೇಳಿರುತ್ತಾರೆ. ಇದು ಎರಡನೆಯ ಮಾರ್ಗ. ಈ ಕರ್ಮಯೋಗವು ಮಾನಸಿಕ ಕರ್ಮ ಪ್ರಧಾನವಾದ ಉಪಾಸನಾ, ಪ್ರೇಮಪ್ರಧಾನವಾದ ಭಕ್ತಿಯೋಗ, ಧ್ಯಾನಪ್ರಧಾನವಾದ ಧ್ಯಾನಯೋಗ, ಶಾರೀರಕ ಕರ್ಮಪ್ರಧಾನವಾದ ಕರ್ಮಯೋಗ ಎಂದು ನಾನಾರೂಪವಾಗಿರುತ್ತದೆ.

ಮನಸ್ಸು ಸ್ವಭಾವವಾಗಿಯೇ ಹೊರಮುಖವಾಗಿ ವಿಷಯಗಳನ್ನು ಸಂಕಲ್ಪಿಸಲು ಓಡುತ್ತಿರುತ್ತದೆ. ಹೀಗೆ ವಿಷಯಗಳನ್ನು ಭಾವಿಸುವ ಮನಸ್ಸನ್ನು ಮೊದಲು ವಿಷಯಗಳ ದೋಷಗಳನ್ನು ತಿಳಿಸಿ ಅತ್ತಕಡೆಗೆ ಹೋಗದಂತೆ ತಡೆಗಟ್ಟಬೇಕು. ಹಾಗೆ ತಡೆಗಟ್ಟಲು ಬೇರೆ ಭಾವನೆಯನ್ನು ಕೊಡಬೇಕು. ಇಲ್ಲವಾದರೆ ಸುಮ್ಮನೇ ಹತೋಟಿಗೆ ನಿಲ್ಲುವದಿಲ್ಲ; ಆದುದರಿಂದ ಪರಮಾತ್ಮಭಾವನೆಯನ್ನು ಮಾಡುವಂತೆ ಮಾಡಬೇಕು. ಅನಾತ್ಮಭಾವನೆಯು ಬಂದಕೂಡಲೇ ಹೊಡೆದೋಡಿಸಿ ಪರಮಾತ್ಮ ಭಾವನೆಯನ್ನು ಬೆಳೆಸಬೇಕು. ಮಧ್ಯೇ ಮನಸ್ಸು ಸುಮ್ಮನೇ ನಿಂತುಬಿಟ್ಟರೆ ಅದನ್ನು ಹಾಗೆಯೇ ಬಿಡಬಾರದು. ಕೂಡಲೇ ಅದನ್ನು ಪರಮಾತ್ಮಭಾವನೆಯನ್ನು ಮಾಡುವಂತೆ ಎಬ್ಬಿಸಬೇಕು. ಮತ್ತು ಅದನ್ನು ಮುಂದಕ್ಕೆ ಪ್ರಯತ್ನಿಸುವಂತೆ ತಳ್ಳಬೇಕು. ಮನಸ್ಸು ಒಂದು ಓಡುವ ಕುದುರೆಯೆಂದು ತಿಳಿಯಿರಿ. ಅದು ಒಂದು ಭಾವನೆಯನ್ನು ಪ್ರಾರಂಭಿಸಿದರೆ ಅದನ್ನೇ ಬೆಳೆಸುತ್ತದೆ. ವಿಷಯ ಭಾವನೆಯನ್ನು

ಪ್ರಾರಂಭಿಸಿದರೆ ಅದರಲ್ಲೇ ಮುಂದೆ ಮುಂದಕ್ಕೆ ಓಡುತ್ತದೆ. ಆದುದರಿಂದ ಅದನ್ನು ತಪ್ಪಿಸಿ ಪರಮಾತ್ಮಭಾವನೆಯನ್ನು ಕೊಟ್ಟರೆ ಅದರಲ್ಲಿಯೇ ಓಡುತ್ತದೆ. ಪರಮಾತ್ಮಭಾವನೆಗೆ ತಕ್ಕ ವಾತಾವರಣವನ್ನು ಕಲ್ಪಿಸಬೇಕು. ಭಗವದ್ಭಕ್ತರ ಸಂಗವನ್ನು ಕೊಡಬೇಕು. ಭಗವದ್ಗುಣಗಳನ್ನು ಭಾವಿಸುವಂತೆ, ಭಗವಚ್ಚರಿತ್ರೆಯನ್ನು ಕೇಳುವಂತೆ ಮಾಡಬೇಕು. ಪರೀಕ್ಷೆಯ ಫಲಿತಾಂಶವನ್ನು ನಿರೀಕ್ಷಿಸುವ ವಿದ್ಯಾರ್ಥಿಯು ಫಲಿತಾಂಶವನ್ನು ಭಾವಿಸುಂತೆ ಭಗವದ್ಭಾವನೆಯೇ ಬೆಳೆಯುವಂತೆ ಮಾಡಬೇಕು. ಸಾಮಾನ್ಯವಾಗಿ, ಭಗವದ್ಭಾವನೆಯನ್ನು ಜನರು ಸ್ವಲ್ಪಮಟ್ಟಿಗೆ ಪ್ರಾರಂಭಿಸುತ್ತಾರೆ; ಆದರೆ ಅದು ಕೂಡಲೇ ಕಾದಕಲ್ಲಿನಮೇಲೆ ಬಿದ್ದ ಮಳೆಯ ಹನಿಯಂತೆ ನಾಶವಾಗುತ್ತದೆ. ಹಾಗೆ ಆಗದಂತೆ ಅದೇ ವೃತ್ತಿಯನ್ನು ಸಂತತವಾಗಿ ಬೆಳೆಸಬೇಕು. ಮನಸ್ಸಿನ ಸ್ವಭಾವವು ವಿಷಯಗಳ ಕಡೆಗೆ ಹೋಗತಕ್ಕದ್ದು; ಆದರೆ ನಾವು ಪ್ರಯತ್ನದಿಂದ ಭಗವಂತನಕಡೆಗೇ ಒಲಿಯುವಂತೆ ಮಾಡಿಕೊಳ್ಳಬೇಕು. ಬೇರೆ ಬೇರೆ ಕಡೆಗಳಲ್ಲಿ ನೂರಾರು ಗಜಗಳನ್ನು ಒಂದೊಂದು ಕಡೆ ಎರಡು ಮೂರು ಗಜಗಳಂತೆ ಅಗೆದರೆ ಭಾವಿಯಾಗುವುದಿಲ್ಲ. ನೀರು ಬರುವುದಿಲ್ಲ. ಹಾಗೆಯೇ ಗಣಪತಿ, ಶಿವ, ವಿಷ್ಣು ಪಾರ್ವತಿ ಎಂಬ ಬೇರೆ ಬೇರೆ ಭಾವನೆಗಳನ್ನು ಮಾಡುತ್ತಿದ್ದರೆ ಯಾವ ಒಂದು ಭಾವನೆಯೂ ಬಲಿತು ಫಲದಾಯಕವಾಗುವುದಿಲ್ಲ. ಒಂದೇ ಭಾವನೆಯನ್ನು ಸಂತತವಾಗಿ ಬೆಳಸಿದರೆ ಫಲದಾಯಕವಾಗುತ್ತದೆ. ಭಾವನೆಯನ್ನು ಬೆಳೆಸುವುದು ಸುಲಭವಲ್ಲ. ಕುಟ್ಟುವ, ಬೀಸುವ, ಕಡಿಯುವ ಶಾರೀರಕ ಕರ್ಮಗಳನ್ನು ಸುಲಭವಾಗಿ ಮಾಡಬಹುದು. ಭಗವದ್ಭಾವನೆಯನ್ನು ಬೆಳೆಸುವ ಮಾನಸಿಕ ಶಕ್ತಿಯನ್ನು ಬೆಳೆಸುವುದು ಕಷ್ಟತರವಾದುದು. ವಿಷಯಗಳ ಕಡೆಗೆ ಓಡುವ ಮನಸ್ಸೆಂಬ ಜೂಜು ಕುದುರೆಯನ್ನು ಹಿಡಿದು ನಿಲ್ಲಿಸುವುದು ಕಷ್ಟಸಾಧ್ಯವಾದದ್ದು.

ವಿಷಯಗಳಿಂದ ಹಿಂತಿರುಗಿಸಿ ಭಗವಂತನ ಕಡೆಗೆ ಹರಿಯುವಂತೆ ಮಾಡಿದರೆ ಆಗಲೂ ಭಗವಂತನಕಡೆಗೆ ಓಡುತ್ತಲೇ ಇರುತ್ತದೆ. ಆಗ ಮುಕ್ತಿಯು ಬೇಡವೆಂದರೂ ದೊರೆಯುತ್ತದೆ ಅಂದರೆ ತನಗೆ ತಾನೇ ಬರುತ್ತದೆ.

ಭಗವದ್ಭಾವನೆಯಿಂದ ಭಗವದ್‌ಜ್ಞಾನ ಹೇಗೆ ಬರುತ್ತದೆ ? ಎಂದರೆ ಪರಮಾತ್ಮನು ಎಲ್ಲೆಲ್ಲಿಯೂ ಇದ್ದಾನೆ. ಎಲ್ಲವೂ ಆಗಿದ್ದಾನೆ. ಭಕ್ತನು ಎಲ್ಲವನ್ನೂ ಪರಮಾತ್ಮನನ್ನಾಗಿ ಭಾವಿಸುತ್ತಾನೆ. ಅದು ನಿಜವಾಗಿಯೂ ಪರಮಾತ್ಮನೇ ಆಗಿರುತ್ತದೆ; ಆದುದರಿಂದ ಅವನಿಗೆ ಎಲ್ಲವೂ ಪರಮಾತ್ಮಸ್ವರೂಪವೇ' ಎಂಬ ಜ್ಞಾನವು ಸುಲಭವಾಗಿ ಬರುತ್ತದೆ. ಅನಾತ್ಮದ ಪ್ರೇಮ ಹೋಗಿ ಭಗವತ್ಪ್ರೇಮ ಭಕ್ತನ ಹೃದಯದಲ್ಲಿ ಆದೇಶವಾಗುತ್ತದೆ.

ಅಕ್ಕಿಯರಾಶಿಯಲ್ಲಿ ಕಲ್ಲು ಇದ್ದರೂ ಅಕ್ಕಿ ಹೆಚ್ಚಾಗಿರುವುದರಿಂದ ಹೇಗೆ ಅಕ್ಕಿರಾಶಿ ಎಂದು ಎನ್ನುತ್ತಾರೆಯೋ ಹಾಗೆ ಭಗವದ್ಭಾವನೆಯು ಪ್ರಧಾನವಾಗಿದ್ದರೆ, ಅದನ್ನೇ ಭಗವದುಪಾಸನಾ ಎಂದು ಎನ್ನುತ್ತಾರೆ. ಶಾಸ್ತ್ರಾದಿಗಳ ಹೆಸರನ್ನು ತಿಳಿದರೆ ಶಾಸ್ತ್ರ ಬಂದಂತಾಗುವದಿಲ್ಲ. ಶಾಸ್ತ್ರಗಳನ್ನೇ ಅಭ್ಯಾಸಮಾಡಬೇಕು. ಹಾಗೆಯೇ ಭಗವದ್ಭಾವನೆ ಎಂಬ ಶಬ್ದವನ್ನು ಉಚ್ಚರಿಸಿದರೆ ಭಾವನೆಯಾಗುವದಿಲ್ಲ. ಭಗವದ್ಭಾವನೆಯು ಹೃದಯದಲ್ಲಿ ಹುಟ್ಟಬೇಕು, ಬೆಳೆಯಬೇಕು. ದೇವರು ಎಂದರೆ ಸರ್ವಾತ್ಮ, ಸರ್ವವ್ಯಾಪಕ, ದಯಾಮಯ, ಆಪದ್ಬಾಂಧವ -ಎಂದು ಮುಂತಾದ ಭಾವನೆಗಳು ಉಕ್ಕಬೇಕು. ಮನೆಯಿಂದ ಬೇರೊಂದು ಊರಿಗೆ ಹೊರಟವನನ್ನು ಯಾರಾದರೂ ಕೇಳಿದರೆ ಹೇಗೆ ಇಂತಹ ಊರಿಗೆ ಹೋದನು- ಎಂದು ಹೇಳುತ್ತೇವೆಯೋ, ಹಾಗೆಯೇ ಭಗವದ್ಭಾವನೆಯನ್ನು ಪ್ರಾರಂಭಿಸಿದರೆ ಭಗವಂತನನ್ನು ಸೇರಿದನು-ಎಂದು ಹೇಳಲು ಸಾಧ್ಯವಾಗುತ್ತದೆ. ನಿಜವಾಗಿ ಜ್ಞಾನವನ್ನು ಹೊಂದಿ ಭಗವಂತನನ್ನು ಸೇರಿಯೇ ಸೇರುತ್ತಾನೆ.

ಭಗವಂತನಕಡೆಗೆ ತಿರುಗಿದರೆ ಭಾವನೆಯನ್ನು ಮಾಡುವುದು ಕಷ್ಟವೂ ಇಲ್ಲ; ಏಕೆಂದರೆ ಭಗವಂತನು ಸರ್ವರ ಹೃದಯದಲ್ಲಿಯೂ ಇರುತ್ತಾನೆ. ಎಲ್ಲಿಗೂ ಈತನನ್ನು ಹುಡುಕಿಕೊಂಡು ಹೋಗಬೇಕಾಗಿಲ್ಲ. ಭಗವದ್ಭಾವನೆಯನ್ನು ಪ್ರಾರಂಭಿಸುವುದೇ ನಮ್ಮ ಕೆಲಸ. ನಾವು ಪ್ರಾರಂಭಿಸಿದರೆ ಸಾಕು, ಭಗವಂತನೇ, ತಾಯಿಯು ಅಳುವ, ತಗ್ಗಿನಲ್ಲಿ ಕೈಯ್ಯೆತ್ತಿರುವ ಮಗುವನ್ನು ಬಗ್ಗಿಪ್ರೇಮದಿಂದ ಎತ್ತಿಕೊಳ್ಳುವಂತೆ ಭಾವನೆಯನ್ನು ಬೆಳೆಸುತ್ತಾನೆ. "ಯಾರು ಸರ್ವಕರ್ಮಗಳನ್ನೂ ನನ್ನಲ್ಲಿಯೇ ಅರ್ಪಿಸಿ ಮತ್ಪರರಾಗಿ ಅನನ್ಯ ಯೋಗದಿಂದ ನನ್ನನ್ನು ಧ್ಯಾನಿಸುತ್ತಾ ಉಪಾಸನೆ ಮಾಡುತ್ತಾರೆಯೋ ಮತ್ತು ನನ್ನಲ್ಲಿಯೇ ಚಿತ್ತವನ್ನು ನಿಲ್ಲಿಸುತ್ತಾರೆಯೋ, ಅವರನ್ನು ನಾನು ಬೇಗನೆ ಮೃತ್ಯುಸಂಸಾರಸಾಗರದಿಂದ ಉದ್ಧಾರ ಮಾಡುವವನಾಗುವೆನು" ಎಂದು ಭಗವಂತನು ಹೇಳಿಯೂ ಇರುತ್ತಾನೆ.

ಶ್ರೀ ಶಂಕರ ಭಗವತ್ಪಾದವರು ಉಪಾಸನೆಯ ಲಕ್ಷಣವನ್ನು ಹೀಗೆ ಭಗವದ್ಗೀತಾ ಭಾಷ್ಯದ ಅಧ್ಯಾಯ ೧೨ರ ಶ್ಲೋಕ ೩ರಲ್ಲಿ ಹೇಳಿರುತ್ತಾರೆ. ಉಪಾಸನಂ ನಾಮ ಯಥಾಶಾಸ್ತ್ರಂ ಉಪಾಸ್ಯಸ್ಯ ಅರ್ಥಸ್ಯ ವಿಷಯೀಕರಣೇನ ಸಾಮೀಪ್ಯಂ ಉಪಗಮ್ಯ ತೈಲಾಧಾರಾವತ್ ಸಮಾನಪ್ರತ್ಯಯಪ್ರವಾಹೇಣ ದೀರ್ಘಕಾಲಂ ಯದಾಸನಂ ತದುಪಾಸನಮ್॥

ಅರ್ಥ:- ಶಾಸ್ತ್ರದಲ್ಲಿ ವಿಧಿಸಿರುವಂತೆ ಅಂದರೆ ಶಾಸ್ತ್ರವು ಯಾವ ರೀತಿಯಲ್ಲಿ ಯಾವದನ್ನು ಚಿನ್ತನೆ ಮಾಡಬೇಕೆಂದು ಹೇಳಿದೆಯೋ ಅದೇ ರೀತಿಯಲ್ಲಿ, ಉಪಾಸ್ಯವಾದ ಅರ್ಥದ ಅಂದರೆ ಯಾವ ಸ್ವರೂಪವನ್ನು ಸಂತತವಾಗಿ ಚಿನ್ತನೆಯನ್ನು ಮಾಡಬೇಕೆಂದು ಹೇಳಿದೆಯೋ ಆ ಸ್ವರೂಪದ ವಿಷಯೀಕರಣದಿಂದ-ಅಂದರೆ ಆ ಸ್ವರೂಪವನ್ನು ಮನಸ್ಸಿಗೆ ತಂದುಕೊಳ್ಳುವದರಿಂದ-ಸಮೀಪ ಸ್ಥಿತಿಯನ್ನು ಹೊಂದಿ-ಅಂದರೆ ತದಾತ್ಮಭಾವವನ್ನು ಹೊಂದಿ, ಎಣ್ಣೆಯ ಧಾರೆಯಂತೆ-ಅಂದರೆ ಇತರ ವಿಷಯದ ಚಿನ್ತನೆಯಿಂದ ವಿಚ್ಛಿತ್ತಿಯನ್ನು ಹೊಂದದೆ, ಮತ್ತೂ ಸುಮ್ಮನೇ ಕೂತುಕೊಳ್ಳದೇ, ಬಹುಕಾಲ ಅಂದರೆ-ಅಲ್ಪಸ್ವಲ್ಪಕಾಲ ಚಿನ್ತನೆಯನ್ನು

ಮಾಡಿಬಿಟ್ಟರೆ ಪ್ರಯೋಜನವಾಗುವದಿಲ್ಲವಾದುದರಿಂದ ದೀರ್ಘ ಕಾಲದವರೆಗೂ, ಯಾವ ಕೂತುಕುಳ್ಳುವಿಕೆಯು ಇದೆಯೋ ಅದು ಉಪಾಸನೆಯು-

ಈ ಉಪಾಸನೆಯಲ್ಲಿ (೧) ಅನಾತ್ಮವಸ್ತುವಿನ ಚಿನ್ತನೆಯನ್ನು ಬಿಡುವುದು-(೨) ಆತ್ಮಚಿನ್ತನೆಯನ್ನು ಮಾಡುವುದು-ಎಂಬ ಎರಡು ಭಾಗಗಳಿವೆ. ಇದರಲ್ಲಿ ಮೊದಲನೆಯದಾದ ಅನಾತ್ಮಚಿನ್ತನೆಯನ್ನು ಬಿಟ್ಟರೆ ಎರಡನೆಯದಾದ ಆತ್ಮಚಿನ್ತನೆಯು ಪ್ರಾರಂಭಿಸಿದ ಮಾತ್ರದಿಂದ ತಾನಾಗಿಯೇ ಮುಂದುವರೆಯುತ್ತದೆ; ಏಕೆಂದರೆ ಆತ್ಮನು ನಿತ್ಯಸಿದ್ಧನಾದವನು. ಇದನ್ನೇ ಶ್ರುತಿಯು

"ತಮೇವೈಕಂಜಾನಥ ಆತ್ಮಾನಂ ಅನ್ಯಾ ವಾಚೋ ವಿಮುಞ್ಚಥ"॥ ಎಂದು ಅನ್ಯವಿಷಯಕವಾಗ್ವಿಮೋಚನಪೂರ್ವಕವಾಗಿಯೇ ಆತ್ಮನೊಬ್ಬನ ಜ್ಞಾನವನ್ನೇ ಹೊಂದಬೇಕೆಂದು ಹೇಳಿರುತ್ತದೆ. ಶಾಸ್ತ್ರದ ವಿಧಿಯನ್ನು ಏಕೆ ಅನುಸರಿಸಬೇಕೆಂದರೆ ಋಷಿಗಳು ಉಪಾಸನೆಯ ಮರ್ಮವನ್ನು ತಿಳಿದವರು. ತಾವು ಮಾಡಿದವರು. ಫಲವನ್ನು ಕಂಡವರು. ಅವರು ಕಂಡುಕೊಂಡ ಅನುಭವದ ಮಾತು ಶಾಸ್ತ್ರವೆಂಬುದು. ವೀಣೆಯ ಶಾಸ್ತ್ರವನ್ನು ಬಲ್ಲವನು ವೀಣೆಯ ತಂತಿಯ ಸ್ವರವನ್ನು ಸರಿಪಡಿಸಲು ಕಷ್ಟಪಡುತ್ತಿದ್ದವನನ್ನು ಕಂಡು "ಈ ತಂತಿಯನ್ನು ಸ್ವಲ್ಪ ಮೀಟು ಸರಿಹೋಗುತ್ತದೆ" ಎಂದು ಹೇಳಿದರೆ ಆತನು ಹೇಳಿದಂತೆ ಮೀಟಿದರೆ ಹೇಗೆ ಸುಲಭವಾಗಿ ಹೊಂದಿಕೊಳ್ಳುತ್ತದೆಯೋ, ಹಾಗೆಯೇ ಋಷಿಗಳ ಅಂದರೆ ಅನುಭವಿಗಳ ಮಾತಿನಂತೆ ನಡೆದರೆ ಬೇಗ ಸ್ವಾಧೀನಕ್ಕೆ ಬರುತ್ತದೆ; ಆದುದರಿಂದ ಶಾಸ್ತ್ರದ ವಿಧಿಯಂತೆ ಮಾಡಬೇಕೆಂದು ಹೇಳಿರುತ್ತಾರೆ. ಶಾಸ್ತ್ರವು ಅಭಿವ್ಯಂಜಕ ಸಾಮಗ್ರಿಯಾಗಿರುತ್ತದೆ.

ಉಪಾಸನೆಯನ್ನು ಮಾಡುವವನು ಯಾವ ರೀತಿಯಲ್ಲಿರಬೇಕೆಂದರೆ ಭಗವಂತನು ಹೀಗೆ ಗೀತೆಯಲ್ಲಿ ಹೇಳಿರುತ್ತಾನೆ.

ಸಮಂಕಾಯಶಿರೋಗ್ರೀವಂ ಧಾರಯನ್ನಚಲಂ ಧ್ರುವಮ್ ।
ಸಂಪ್ರೇಕ್ಷ್ಯನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯರ್ನ॥೬-೧೩॥

ಪ್ರಶಾನ್ತಾತ್ಮಾ ವಿಗತಭೀರ್ಬ್ರಹ್ಮಚಾರಿವ್ರತೇ ಸ್ಥಿತಃ।
ಮನಸ್ಸಂಯಮ್ಯ ಮಚ್ಚಿತ್ತೋ ಯುಕ್ತ ಆಸೀತಮತ್ಪರಃ॥೬-೧೪

ಅರ್ಥ:- ಶರೀರ, ತಲೆ, ಕತ್ತು-ಇವುಗಳನ್ನು ಸಮವಾಗಿ ಅಲುಗಾಡದಂತೆ ನಿಲ್ಲಿಸಿಕೊಂಡು, ಸ್ಥಿರವಾಗಿ ಅಂದರೆ ಒಂದೇ ರೀತಿಯಾಗಿ ತನ್ನ ಮೂಗಿನ ತುದಿಯನ್ನು ನೋಡುತ್ತಾ ಅಂದರೆ ಚೆನ್ನಾಗಿ ನೋಡುವವನಂತೆ ಎಂದು ಅರ್ಥ. ಇಲ್ಲಿ ಮೂಗಿನ ತುದಿಯನ್ನು ನೋಡಬೇಕೆಂದು ವಿಧಿಸುವದಕ್ಕೆ ಬಂದಿಲ್ಲ. ಕಣ್ಣಿನ ನೋಟವನ್ನು ಲಕ್ಷ್ಯವಾದ ಆತ್ಮನ ಕಡೆಗೆ ತರಬೇಕೆಂಬುದನ್ನೇ ವಿಧಿಸುವದಕ್ಕೆ ಬಂದಿದೆ-ಎಂಬುದನ್ನು ಮರೆಯಬಾರದು. ಏಕೆಂದರೆ ಹೀಗೆ ಮಾಡಿದರೆ ಮನಸ್ಸು ಸಮಾಧಾನವನ್ನು ಹೊಂದುವದು. ಆಗ ಆತ್ಮನನ್ನು ಚಿನ್ತಿಸುವದು ಸಾಧ್ಯವಾಗುವದು. ಇದಕ್ಕೆ ಬದಲಾಗಿ ಮೂಗಿನ ತುದಿಯನ್ನೇ ನೋಡಬೇಕೆಂದು ವಿಧಿಸಿದರೆ ಆಗ ಮನಸ್ಸು ಮೂಗಿನ ತುದಿಯಲ್ಲಿಯೇ ನಿಲ್ಲುವದು. ಆತ್ಮನಲ್ಲಿ ನಿಲ್ಲಿಸಬೇಕೆಂಬುದು ಆಗುವದಿಲ್ಲವಾಗುವದು; ಆದುದರಿಂದ ಮನಸ್ಸನ್ನು ಸಮಾಧಾನವಾಗಿಟ್ಟುಕೊಳ್ಳುವದಕ್ಕೆ ಅನುಕೂಲಿಸುವಂತೆ ಕಣ್ಣಿನ ನೋಟವನ್ನು ಒಂದು ಕಡೆಗೆ ತರಬೇಕೆಂಬುದೇ ಇಲ್ಲಿ ತಾತ್ಪರ್ಯವು. ದಿಕ್ಕುಗಳನ್ನು ನೋಡದೇ ಅಂದರೆ ನಡುವೆ ಅತ್ತಿತ್ತ ನೋಡದೇ ಪ್ರಶಾನ್ತಾತ್ಮನಾಗಿ -ಅಂದರೆ ಮನಸ್ಸನ್ನು ಧನಕನಕಾದಿ ವಿಷಯಗಳ ಕಡೆಗೆ ಹರಿದಾಡದಂತೆ ಸ್ವಾಧೀನಮಾಡಿಕೊಂಡವನಾಗಿ, ಭಯವಿಲ್ಲದವನಾಗಿ, ಬ್ರಹ್ಮಚಾರಿವ್ರತದಲ್ಲಿದ್ದುಕೊಂಡು-ಅಂದರೆ ಕಾಮಾಸಕ್ತನಾದರೆ ಮನಸ್ಸನ್ನು ಪರಮಾತ್ಮನ ಕಡೆಗೆ ಹರಿಸಲು ಶಕ್ತನಾಗುವದಿಲ್ಲ, ಮನಸ್ಸು ಇವನನ್ನು ಇವನಿಗೇ ಗೊತ್ತಿಲ್ಲದಂತೆ ಎಳೆದುಕೊಂಡು ಹೋಗಿಬಿಡುತ್ತದೆ; ಆದುದರಿಂದ ಬ್ರಹ್ಮಚರ್ಯವ್ರತದಲ್ಲಿದ್ದು ಕೊಂಡವನಾಗಿ ಅಂದರೆ ನಿಯಮದಿಂದ ಬ್ರಹ್ಮಚರ್ಯವನ್ನು ಕಾಪಾಡಿಕೊಂಡವನಾಗಿ, ಮನಸ್ಸನ್ನು ಬಿಗಿಹಿಡಿದು, ಪರಮಾತ್ಮನಲ್ಲಿಯೇ ಚಿತ್ತವುಳ್ಳವನಾಗಿ ಅಂದರೆ, ಚಿತ್ತವೃತ್ತಿಗಳನ್ನೆಲ್ಲವನ್ನೂ ಸುಮ್ಮನೇ ತಡೆಯುವದಕ್ಕೆ ಆಗುವದಿಲ್ಲ; ಆದುದರಿಂದ ಪರಮಾತ್ಮನ ವಿಷಯಕವಾದ ಒಂದು ವೃತ್ತಿಯನ್ನು ಮಾತ್ರವಾಡಿಕೊಂಡವನಾಗಿ,

ಯುಕ್ತನಾಗಿ-ಅಂದರೆ ಮನಸ್ಸಸಮಾಧಾನವೆಂಬ ಸಮಾಧಿಯಲ್ಲಿ ಕುಳಿತವನಾಗಿ ಮತ್ಪರನಾಗಿರಬೇಕು -ಅಂದರೆ ಪರಮೇಶ್ವರನೇ ನನಗೆ ಗತಿ, ಪರಮಾತ್ಮತತ್ತ್ವವನ್ನು ತಿಳಿಯುವದೇ ಎಲ್ಲವದಕ್ಕೂ ಹೆಚ್ಚಿನ ಗುರಿ -ಎಂಬ ಭಾವನೆಯನ್ನು ಹೊಂದಿರುವ ವನಾಗಿರಬೇಕು. ಹೀಗೆ ಉಪಾಸನೆಯನ್ನು ಮಾಡಲು ಸಿದ್ಧನಾದವನು ಏನನ್ನು ಉಪಾಸನೆ ಮಾಡಬೇಕು? ಎಂದರೆ ನಿತ್ಯಶುದ್ಧಬುದ್ಧನಾದ, ನಿರ್ವಿಕಾರನಾದ, ನಿರ್ಗುಣ ನಿರಾಕಾರನಾದ, ಪರಬ್ರಹ್ಮಸ್ವರೂಪನಾದ ಪರಮಾತ್ಮನನ್ನು ಉಪಾಸನೆ ಮಾಡಬೇಕು; ಆದರೆ ಇದು ಉತ್ತಮಾದಿಕಾರಿಗಳಾಗಿದ್ದರೆ ಮಾತ್ರವೇ ಸಾಧ್ಯವಾಗುತ್ತದೆ. ಎಲ್ಲರೂ ಉತ್ತಮಾಧಿಕಾರಿಗಳೇ ಆಗಿರುವುದಿಲ್ಲ. ಆದುದರಿಂದ ಸಗುಣ ಸಾಕಾರೋಪಾಸನೆಗಳನ್ನೂ ಪ್ರತೀಕೋಪಾಸನೆ ಮೊದಲಾದವುಗಳನ್ನೂ ಶಾಸ್ತ್ರದಲ್ಲಿ ಹೇಳಿರುತ್ತದೆ. ಆದುದರಿಂದ ಸಾಮಾನ್ಯರಾದವರು ಶ್ರೀರಾಮಚಂದ್ರ, ಶ್ರೀ ಕೃಷ್ಣಪರಮಾತ್ಮ-ಮುಂತಾದ ಸಾಕಾರಮೂರ್ತಿಗಳಲ್ಲಿ ಒಂದನ್ನು ಮನಸ್ಸಿಗೆ ತಂದುಕೊಂಡು ಅವನ ಗುಣಗಳನ್ನು ಹೇಳುತ್ತಾ, ಕೇಳುತ್ತಾ, ಪ್ರೇಮದಿಂದ ಕೀರ್ತನೆ ಮಾಡುತ್ತಾ, ಭಜಿಸುತ್ತಾ ಅವನಲ್ಲಿಯೇ ಮನಸ್ಸನ್ನು ಹರಿದಾಡಿಸುವಂತೆ ಮಾಡಿ ತಾದಾತ್ಮ್ಯವನ್ನು ತಂದುಕೊಳ್ಳುತ್ತಿರುವದೇ ಉಪಾಸನೆಯು.

ಏನನ್ನು ಉಪಾಸನೆಮಾಡಬೇಕೆಂಬುದಕ್ಕೆ ಭಗವಂತನು ಗೀತೆಯಲ್ಲಿ ೮-೧೩ರಲ್ಲಿ ಹೇಳಿರುವ ವಿಷಯವನ್ನು ಇಲ್ಲಿ ನಿದರ್ಶನಕ್ಕಾಗಿ ಹೇಳಿರುತ್ತೇನೆ-

ಓಮಿತ್ಯೇಕಾಕ್ಷರಂ ಬ್ರಹ್ಮವ್ಯಾಹರನ್ ಮಾಮನುಸ್ಮರನ್।

ಯಃಪ್ರಯಾತಿತ್ಯಜನ್ದೇಹಂ ಸ ಯಾತಿ ಪರಮಾಂ ಗತಿಮ್ ॥ ೮-೧೩

ಅರ್ಥ:- ಓಮಿತ್ಯೇಕಾಕ್ಷರಂ ಬ್ರಹ್ಮ-ಬ್ರಹ್ಮನಿಗೆ ಅಭಿಧಾನ ಭೂತವಾದ ಅಂದರೆ ವಾಚಕವಾದ ಓಂಕಾರವನ್ನು ವ್ಯಾಹರನ್=ಅಂದರೆ ಉಚ್ಚರಿಸುತ್ತ ಮಾಂ-ಆ ಓಂಕಾರದ ಅರ್ಥಭೂತವಾದ ಪರಮೇಶ್ವರನನ್ನು ಅಂದರೆ ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಅವಸ್ಥಾತ್ರಯಗಳ ಪುರುಷರನ್ನು ಮೂರು ಸ್ಥಾನಗಳೊಡನೆ ಮೂರುಮಾತ್ರೆಯ ರೂಪದ ಓಂಕಾರಾತ್ಮರೂಪದಿಂದ

ಅನುಸ್ಮರಿಸುತ್ತ-ಅಂದರೆ ಶಾಸ್ತ್ರದಲ್ಲಿ ಹೇಳಿರುವಂತೆಯೂ ಗುರುಗಳು ಉಪದೇಶಿಸಿರುವಂತೆಯೂ ಚಿನ್ತನೆಯನ್ನು ಮಾಡುತ್ತ ಯಾವನು ಪ್ರಯಾಣ ಮಾಡುವನೋ ಅಂದರೆ ಸಾಯುವನೋ ಅಂದರೆ ದೇಹತ್ಯಾಗವೆಂಬ ಮರಣವನ್ನು ಹೊಂದುವನೋ, ಸ್ವರೂಪದಿಂದ ನಾಶನಾಗದಿರುವನೋ, ಅವನು ಅಂದರೆ ಹೀಗೆ ಉಪಾಸನೆಯನ್ನು ಮಾಡುತ್ತಲೇ ದೇಹವನ್ನು ಬಿಟ್ಟವನು ಪರಮಾಂ ಗತಿಂ ಪರಮಗತಿಯನ್ನು ಅಂದರೆ ಉತ್ತಮವಾದ ಗತಿಯನ್ನು ಯಾತಿ=ಹೊಂದುತ್ತಾನೆ-

ಓಂಕಾರವು ಪರಬ್ರಹ್ಮಕ್ಕೂ ಅಪರ ಬ್ರಹ್ಮಕ್ಕೂ ಪ್ರತೀಕವಾಗಿರುತ್ತದೆ. ಆದುದರಿಂದ ಉಪಾಸಕನು ಇದನ್ನು ಯಾವ ದೃಷ್ಟಿಯಿಂದ ಉಪಾಸನೆಯನ್ನು ಮಾಡುತ್ತಾನೆಯೋ ಆ ಬ್ರಹ್ಮವನ್ನು ಪಡೆಯುತ್ತಾನೆ. ಹೇಗೆಂದರೆ ಯಾವನು ಓಂಕಾರದ ಅವಯವವಾದ ಅಕಾರ ವೆಂಬ ಒಂದು ಮಾತ್ರೆಯ ಸ್ವರೂಪವನ್ನು ಅರಿತು ಅಂದರೆ ಅದರ ಅರ್ಥವಾದ ವಿಶ್ವನನ್ನು ತಿಳಿದುಕೊಂಡು ಉಪಾಸನೆಯನ್ನು ಮಾಡುತ್ತಾನೆಯೋ ಅವನು ಮನುಷ್ಯ ಲೋಕದಲ್ಲಿ ಶ್ರೇಷ್ಠಬ್ರಾಹ್ಮಣನಾಗಿ ಜನಿಸಿ, ಬ್ರಹ್ಮಚರ್ಯ, ಶ್ರದ್ಧೆ, ತಪಸ್ಸು ಇವುಗಳನ್ನು ಹೊಂದಿದವನಾಗಿ ಪ್ರಖ್ಯಾತಿಯನ್ನು ಹೊಂದುತ್ತಾನೆ. ಯಾವನು ಎರಡು ಮಾತ್ರೆಗಳ ಅಂದರೆ ಅಕಾರ ಉಕಾರಗಳ ಸ್ವರೂಪವನ್ನರಿತು ಅಂದರೆ ಅವುಗಳ ಅರ್ಥವಾದ ತೈಜಸನನ್ನು ತಿಳಿದುಕೊಂಡು ಉಪಾಸನೆಯನ್ನು ಮಾಡುತ್ತಾನೆಯೋ ಅವನು ಸೋಮಲೋಕವನ್ನು ಪಡೆಯುತ್ತಾನೆ- ಅಂದರೆ ಸ್ವರ್ಗವನ್ನು ಪಡೆಯುತ್ತಾನೆ. ಅಲ್ಲಿಂದ ಭೋಗಾನಂತರದಲ್ಲಿ ಮತ್ತೆ ಮನುಷ್ಯ ಲೋಕಕ್ಕೆ ಬರುತ್ತಾನೆ. ಯಾವನು ಮೂರು ಮಾತ್ರೆಗಳ ಅಂದರೆ ಅಕಾರ ಉಕಾರ ಮಕಾರ ಸ್ವರೂಪವನ್ನರಿತು ಅಂದರೆ ಪ್ರಾಜ್ಞನನ್ನು ತಿಳಿದುಕೊಂಡು ಉಪಾಸನೆಯನ್ನು ಮಾಡುತ್ತಾನೆಯೋ ಅವನು ಬ್ರಹ್ಮಲೋಕವನ್ನು ಪಡೆಯುತ್ತಾನೆ ಅಲ್ಲಿಂದ ವಾಪಸ್ಸು ಬರುವದಿಲ್ಲ. ಯಾವನು ಮೂರು ಮಾತ್ರೆಗಳ ಸ್ವರೂಪಗಳ ಅಂದರೆ ವಿಶ್ವ, ತೈಜಸ, ಪ್ರಾಜ್ಞರುಗಳ ಸ್ವರೂಪವನ್ನು ವಿವೇಚನೆ ಮಾಡಿಕೊಂಡು ಆ ವಿಶ್ವ, ತೈಜಸ, ಪ್ರಾಜ್ಞರನ್ನು ಆತ್ಮರೂಪದಿಂದ

ಕಂಡು ಕೊಳ್ಳುತ್ತಾನೆಯೋ ಆತನು ಸರ್ವಾತ್ಮಭೂತವಾದ ಪರಬ್ರಹ್ಮವನ್ನೇ ಪಡೆಯುತ್ತಾರೆ.

ಈ ರೀತಿಯಲ್ಲಿ ಉಪಾಸನೆಯನ್ನು ಮಾಡುವದಕ್ಕೂ ತಿಳಿಯುವದಕ್ಕೂ ಸಹ ಬಾಹ್ಯ ವಿಷಯಗಳಿಂದ ಇಂದ್ರಿಯಗಳನ್ನು ಉಪಸಂಹಾರ ಮಾಡಿಕೊಂಡಿರಬೇಕು. ಮನಸ್ಸನ್ನು ಸಮಾಧಾನವುಳ್ಳದ್ದನ್ನಾಗಿ ಮಾಡಿಕೊಂಡಿರಬೇಕು. ಭಕ್ತಿಯಿಂದ ಬ್ರಹ್ಮಭಾವದ ಆವೇಶವನ್ನು ಹೊಂದಿರಬೇಕು. ಇಲ್ಲದಿದ್ದರೆ ಉಪಾಸನೆಯು ನಡೆಯುವದಿಲ್ಲ-ಎಂಬುದನ್ನು ಮರೆಯಕೂಡದು.

ಹೀಗೆ ಹೇಳಿರುವ ಅನೇಕ ವಿಧವಾದ ಉಪಾಸನೆಗಳಲ್ಲಿ ಯಾವದಾದರೂ ಒಂದು ವಿಧವಾದ ಉಪಾಸನೆಯನ್ನು ತನ್ನ ಅಂತಸ್ತಿಗೆ ತಕ್ಕಂತೆ ಆರಿಸಿಕೊಂಡು ಆಚಾರ್ಯನು ಹೇಳಿಕೊಟ್ಟಂತೆ ಸಂತತವಾಗಿ ಚಿನ್ತನೆಯನ್ನು ಮಾಡುವವನು ಉತ್ತಮಗತಿಯನ್ನು ದೇಹಪಾತಾನನ್ತರದಲ್ಲಿ ಪಡೆಯುತ್ತಾನೆ. ಉಪಾಸನೆಯನ್ನು ಮಾಡುವುದಕ್ಕೆ ಶ್ರೀ ಶಂಕರಾಚಾರ್ಯರು ಕೊಟ್ಟಿರುವ ದೃಷ್ಟಾನ್ತಗಳೆರಡನ್ನು ನೋಡಿ (೧) ರಾಜನನ್ನು ಉಪಾಸನೆ ಮಾಡುತ್ತಾನೆ. (೨) ಗುರುವನ್ನು ಉಪಾಸನೆ ಮಾಡುತ್ತಾನೆ. ಎಂದು ಎರಡು ದೃಷ್ಟಾನ್ತಗಳನ್ನು ಕೊಟ್ಟಿರುತ್ತಾರೆ ಮೊದಲನೆಯದರಲ್ಲಿ ಸೇವಕನು ರಾಜನನ್ನು ಹೇಗೆ ಉಪಾಸನೆ ಮಾಡುತ್ತಿರುತ್ತಾನೆ? ರಾಜನು ಏಳುವದರೊಳಗೆ ಎದ್ದಿರುತ್ತಾನೆ. ಕೂತ ಮೇಲೆ ಕೂರುತ್ತಾನೆ. ಇವನ ಕಡೆಗೆ ದೃಷ್ಟಿಯನ್ನು ಹಾಕಿದ ಮಾತ್ರದಿಂದಲೇ ರಾಜನ ಮನೋಭಾವವನ್ನು ತಿಳಿದು ಕೂಡಲೇ ಅವನ ಇಷ್ಟದಂತೆ ಕೆಲಸವನ್ನು ನಿರ್ವಹಿಸುತ್ತಾನೆ. ರಾಜನು ಏನನ್ನು ಮಾಡಿದರೆ ತೃಪ್ತನಾಗುತ್ತಾನೆಯೋ ಏನನ್ನು ಮಾಡಿದರೆ ಅತೃಪ್ತನಾಗುತ್ತಾನೆಯೋ ಎಂಬುದನ್ನು ತಿಳಿದು ಅವನಿಗೆ ತೃಪ್ತಿಯಾಗುವಂತೆಯೇ ಮಾಡುತ್ತಿರುತ್ತಾನೆ. ಇಲ್ಲಿ ನಾನು ಸೇವಕ. ರಾಜನ ಅನುಗ್ರಹವನ್ನು ಪಡೆಯಲು ಸೇವೆ ಮಾಡುತ್ತಿದ್ದೇನೆ-ಎಂಬುದು ಮಾತ್ರ ಇದ್ದೇ ಇರುತ್ತದೆ. ಎರಡನೆಯ ದೃಷ್ಟಾನ್ತವನ್ನು ನೋಡಿ. ಶಿಷ್ಯನೂ ಗುರು ಸೇವೆಯನ್ನು ಮಾಡುತ್ತಾನೆ. ಇಲ್ಲಿ ಹೊರಗಿನ ಸೇವೆಗಳು ಮಾತ್ರ ಮುಖ್ಯವಲ್ಲ.

ಅಂತಃ ಕರಣದ ಭಾವ ಮುಖ್ಯವಾಗಿರುತ್ತದೆ. ಮೊದಲನೆಯದರಲ್ಲಿ ಸೇವೆಯು ಬಹಳ ಕಷ್ಟತರವಾದದ್ದಾಗಿರುತ್ತದೆ. ಭರ್ತೃಹರಿಯು "ಸೇವಾಧರ್ಮಃ ಪರಮಗಹನಃ ಯೋಗಿನಾಮಪ್ಯಗಮ್ಯಃ" ಸೇವಾ ಧರ್ಮವು ತಿಳಿಯಲು ಬಹಳ ಕಷ್ಟವಾದದ್ದು. ಯೋಗಿಗಳಿಗೂ ಅಗಮ್ಯವಾದುದು", ಎಂದು ಹೇಳಿರುವಂತೆ ಎದ್ದರೆ ಏಕೆ ಎದ್ದೆ? ಎಂದು ಕೇಳುತ್ತಾರೆ. ಕೂತರೆ ಏಕೆ ಕೂತುಕೊಂಡೆ? ಎನ್ನುತ್ತಾರೆ-ಎಂದು ಮುಂತಾಗಿ ಅನ್ನುವಂತೆ ಕಾಣುತ್ತದೆ. ಎರಡನೆಯದಾದ ಗುರುವಿನ ಉಪಾಸನೆಯಲ್ಲಿ ಹಾಗಿಲ್ಲ; ಏಕೆಂದರೆ ಇಲ್ಲಿ ನಾನು ಸೇವೆ ಮಾಡತಕ್ಕವನು ಗುರುವು ಉಪಾಸ್ಯನು, ಎಂಬ ಭಾವವೇ ಅಳಿದು ಹೋಗಿರುತ್ತದೆ. ಶಿಷ್ಯನು ಶಾಸನಾರ್ಹನಾಗಿರುತ್ತಾನೆ. ಗುರುವು ಉಪದೇಶಕನಾಗಿರುತ್ತಾನೆ. ಇಲ್ಲಿ ಗುರುವಿನ ಉಪದೇಶಕ್ಕೂ ಶಿಷ್ಯನ ಸೇವೆಗೂ ಬೆಲೆಯನ್ನು ಕಟ್ಟುವುದಕ್ಕಾಗುವುದಿಲ್ಲ. ಗುರುವಿನ ಉಪಾಸನೆ ಎಂದರೆ ನಾನು ಗುರುವಿನ ಉಪಾಸನೆಯನ್ನು ಮಾಡುತ್ತಿದ್ದೇನೆಂಬ ಅಹಂಕಾರವನ್ನು ತೆಗೆದಿಡುವುದೇ ಗುರುವಿನ ಉಪಾಸನೆಯು. ನಿರಹಂಕಾರಿಗಳಾದ ಗುರುಗಳ ಹತ್ತಿರದಲ್ಲಿದ್ದರೆ ಸಾಕು ಅವರ ವಾತಾವರಣದಲ್ಲಿಯೇ ಅಹಂಕಾರ ಇರುವದಿಲ್ಲದ್ದರಿಂದ ತನಗೇ ಗೊತ್ತಿಲ್ಲದ ಹಾಗೆಯೇ ಅಹಂಕಾರವು ಹೋಗಿಬಿಟ್ಟಿರುತ್ತದೆ. ಸಹಜವಾಗಿಯೇ ಶಿಷ್ಯನು ನಿರಹಂಕಾರಿಯಾಗಿರುತ್ತಾನೆ, ಹೃದಯದಿಂದ ಅಹಂಕಾರವನ್ನು ತೆಗೆದ ಕೂಡಲೇ ಗುರುವು ಅಲ್ಲಿ ನೆಲೆಸುತ್ತಾನೆ. ಆಗ ತಾನೇ ಗುರುವಾಗುತ್ತಾನೆ. ಇದೇ ಗುರುವಿನ ಉಪಾಸನೆಯ ತುಟ್ಟತುದಿಯ ಮೆಟ್ಟಲು. ಇದೇ ರೀತಿಯಲ್ಲಿ ಯಾವ ಉಪಾಸಕನು ತನ್ನ ತ್ರಿಕರಣಗಳನ್ನೂ ಉಪಾಸ್ಯನಾದ ಪರಮಾತ್ಮನಲ್ಲಿ ಒಂದಾದದ್ದನ್ನಾಗಿ ಮಾಡುತ್ತಾನೆಯೋ, ಯಾವಾತನು ಹೃದಯದಿಂದ ಅಹಂಭಾವವನ್ನು ಪೂರ್ತಿಯಾಗಿ ತೆಗೆದು ಅಲ್ಲಿ ಪರಮಾತ್ಮನನ್ನು ಪ್ರತಿಷ್ಠೆ ಮಾಡಿರುತ್ತಾನೆಯೋ, ಆತನೇ ನಿಜವಾದ ಪರಮಾತ್ಮೋಪಾಸಕನು ಆಗುತ್ತಾನೆ. ಆತನು ಇಲ್ಲಿಯೇ ಭಾವನಾಸಾಕ್ಷಾತ್ಕಾರವನ್ನು ಹೊಂದಿ ದೇಹಪಾತಾನಂತರದಲ್ಲಿ ಉಪಾಸ್ಯದೇವತಾಸಾಯುಜ್ಯವನ್ನು ಪಡೆಯುತ್ತಾನೆ.

ಹೀಗೆ ಅನನ್ಯಭಾವದಿಂದ ಉಪಾಸನೆಯನ್ನು ಮಾಡುವದಕ್ಕೆ ಶಕ್ತಿ ಇಲ್ಲದವರಿಗೆ ಭಗವಂತನು ಈ ರೀತಿ ಹೇಳಿರುತ್ತಾನೆ :

ಅಥ ಚಿತ್ತಂ ಸಮಾಧಾತುಂ ನ ಶಕ್ನೋಷಿ ಮಯಿ ಸ್ಥಿರಮ್ ।
ಅಭ್ಯಾಸಯೋಗೇನ ತತೋ ಮಾಮಿಚ್ಛಾಪ್ತುಂ ಧನಞ್ಜಯ ॥

ಈ ರೀತಿಯಲ್ಲಿ ಅಂದರೆ ಹಿಂದೆ ಹೇಳಿದಂತೆ ಚಿತ್ತವನ್ನು ಪರಮಾತ್ಮನಲ್ಲಿ ಅಲ್ಲಾಡದಂತೆ ನಿಲ್ಲಿಸಿಕೊಳ್ಳುವದಕ್ಕೆ ನೀನು ಶಕ್ತನಾಗದೇ ಹೋದರೆ ಆ ಬಳಿಕ ಅಭ್ಯಾಸಯೋಗದಿಂದ - ಅಂದರೆ ಚಿತ್ತವನ್ನು ಒಂದೇ ಆಲಂಬನದಲ್ಲಿ ಎಲ್ಲಕಡೆಯಿಂದಲೂ ಎಳೆದುಕೊಂಡು ಮತ್ತೆ ಮತ್ತೆ ನಿಲ್ಲಿಸುವದರಿಂದ ಕೂಡಿದ ಸಮಾಧಾನಗೊಳಿಸುವ ರೂಪದಿಂದ ಎಲೈ ಧನಂಜಯನೆ, ನನ್ನನ್ನು ಅಂದರೆ ಪರಮಾತ್ಮನನ್ನು ಸೇರುವದಕ್ಕೆ ಇಚ್ಛಿಸು.

ಅಭ್ಯಾಸೇಽಪ್ಯಸಮರ್ಥೋಽಪಿ ಮತ್ಕರ್ಮ ಪರಮೋ ಭವ ।
ಮದರ್ಥಮಪಿ ಕರ್ಮಾಣಿ ಕುರ್ವನ್ಸಿದ್ಧಿಮವಾಪ್ಸ್ಯಸಿ ॥

ಅಭ್ಯಾಸಯೋಗವನ್ನು ಮಾಡುವದರಲ್ಲಿಯೂ ಅಸಮರ್ಥನಾಗಿರುವೆಯಾದರೆ ಆಗ ಮತ್ಕರ್ಮಪರನಾಗಿರು. ನನಗಾಗಿ ಮಾಡುವ ಕರ್ಮವು ಮತ್ಕರ್ಮವು; ಅದೇ ಹೆಚ್ಚೆಂಬುವನು ಮತ್ಕರ್ಮಪರಮನು. ನನ್ನ ಕರ್ಮವೇ ಮುಖ್ಯವಾಗಿರುವವನು ಎಂದರ್ಥ, ಅಭ್ಯಾಸವಿಲ್ಲದೇ ಸುಮ್ಮನೆ ನನಗೋಸ್ಕರವಾಗಿ ಕರ್ಮಗಳನ್ನು ಮಾಡುತ್ತಿದ್ದರೂ ಸಿದ್ಧಿಯನ್ನು ಅಂದರೆ ಸತ್ತ್ವಶುದ್ಧಿ, ಯೋಗ, ಜ್ಞಾನಪ್ರಾಪ್ತಿ-ಇವುಗಳ ಮೂಲಕ ಸಿದ್ಧಿಯನ್ನು ಪಡೆಯುವೆ-ಎಂದು ಆವನವನ ಅಧಿಕಾರಕ್ಕೆ ತಕ್ಕಂತೆ ಸಾಧನವನ್ನು ಮೆಟ್ಟಿಲು ಮೆಟ್ಟಿಲಾಗಿ ವಿವರಿಸಿರುತ್ತಾನೆ. ಆದುದರಿಂದ ಸಾಧಕನು ತಾನು ಯಾವ ಅಂತಸ್ತಿನಲ್ಲಿರತಕ್ಕವನೆಂದು ತನ್ನನ್ನು ತಿಳಿದು ಅಲ್ಲಿಂದ ಪ್ರಾರಂಭಿಸಿ ಮುಂದಿನ ಮುಂದಿನ ಮೆಟ್ಟಿಲುಗಳನ್ನು ಏರಿ ಕೊನೆಯ ಮೆಟ್ಟಿಲಾದ ಜ್ಞಾನವನ್ನು ಹೊಂದಿ ಮೋಕ್ಷವೆಂಬ ಪರಮಪುರುಷಾರ್ಥವನ್ನು ಹೊಂದಿ ಕೃತಾರ್ಥನಾಗಬೇಕು. ಹೀಗೆ ಮಾಡಿದರೆ ಮನುಷ್ಯನು ಜನ್ಮವನ್ನು ಪಡೆದದ್ದು ಸಾರ್ಥಕವಾಗುತ್ತದೆ; ಇಲ್ಲವಾದರೆ ವ್ಯರ್ಥವಾಗುತ್ತದೆ, ಪ್ರಾಪ್ತವಾಗಿರುವ ಮನುಷ್ಯಜನ್ಮವನ್ನು

ವ್ಯರ್ಥವಾಗದಂತೆ ಸಾರ್ಥಕಗೊಳಿಸಿ ಕೊಳ್ಳಬೇಕೆಂದು ಭಗವಂತನು ನಾನಾ ವಿಧವಾದ ಸಾಧನೆಗಳನ್ನು ವಿವರಿಸಿರುತ್ತಾನೆ.

## ೨೮ ಕರ್ಮಯೋಗವನ್ನು ಮಾಡಬೇಕು.

ಮನುಷ್ಯ ಮಾತ್ರದವನು ಯಾವದಾದರೂ ಒಂದು ಕೆಲಸವನ್ನು ಅಂದರೆ ಮನಸ್ಸಿನಿಂದ ಏನನ್ನಾದರೂ ಯೋಚಿಸುವದನ್ನಾಗಲೀ ಅಥವಾ ಬಾಯಿಂದ ಹೇಳುವುದನ್ನಾಗಲೀ, ಅಥವಾ ಶರೀರದಿಂದ ಮಾಡುವುದನ್ನಾಗಲೀ ಮಾಡುತ್ತಲೇ ಇರುತ್ತಾನೆ. "ನಾನು ಯಾವ ಕೆಲಸವನ್ನೂ ಈಗ ಮಾಡುವುದಿಲ್ಲ. ಸುಮ್ಮನೇ ಕುಳಿತುಕೊಂಡಿರುತ್ತೇನೆ."-ಎಂದು ಮನಸ್ಸಿನಲ್ಲಿಯೇ ಅಂದುಕೊಂಡರೂ ಅದೂ ಮಾನಸಿಕ ಕರ್ಮವೇ ಆಗಿರುತ್ತದೆ; ಆದುದರಿಂದ ಯಾವ ಕೆಲಸವನ್ನೂ ಮಾಡುವುದಿಲ್ಲ ಎಂದು ಹೇಳುವುದು ಸಾಧ್ಯವೇ ಆಗುವಂತಿಲ್ಲ. ಇದನ್ನು ಭಗವಂತನು ಹೀಗೆ ಹೇಳಿರುತ್ತಾನೆ :

ನ ಹಿ ಕಶ್ಚಿತ್ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್।
ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ॥

ಅರ್ಥ:- ಯಾವನೊಬ್ಬನೂ ಒಂದು ಕ್ಷಣವೂ ಸಹ, ಯಾವಾಗಲೂ ಯಾವದಾದರೂ ಒಂದು ಕೆಲಸವನ್ನೂ ಮಾಡದವನು ಇಲ್ಲವೇ ಇಲ್ಲ, ಎಲ್ಲರೂ ಅವಶರಾಗಿ ಪ್ರಕೃತಿಯಿಂದ ಹುಟ್ಟಿದ ಗುಣಗಳಿಂದ ಕೆಲಸ ಮಾಡಿಸಲ್ಪಡುತ್ತಾರೆ. ಹೀಗಿರುವುದರಿಂದ ಕರ್ಮಯೋಗವೆಂದರೆ ಕರ್ಮವನ್ನು ಮಾಡಬೇಕೆಂದು ಹೊಸದಾಗಿ ವಿಧಿಸುವುದಲ್ಲ; ಮತ್ತೇನೆಂದರೆ ಮಾಡತಕ್ಕ ಕರ್ಮವನ್ನು ಹೇಗೆ ಮಾಡಬೇಕೆಂದು ತಿಳಿಸುವುದು ಕರ್ಮಯೋಗವು.

ಮಾಡತಕ್ಕ ಕರ್ಮವನ್ನು ಹೇಗೆ ಮಾಡಬೇಕೆಂದು ತಿಳಿಯುವದಕ್ಕಿಂತ ಮೊದಲು ಶಾಸ್ತ್ರದಲ್ಲಿ ಮಾಡಬಾರದು ಎಂದು ತಿಳಿಸಿರುವ ಪರಹಿಂಸೆ, ಅಧರ್ಮ, ಅಸತ್ಯ, ಮೋಸ, ದ್ರೋಹ, ಕಳ್ಳತನ, ಮುಂತಾದ ನಿಷಿದ್ಧ ಕರ್ಮಗಳನ್ನು ಬಿಡಬೇಕೆಂದು ತಿಳಿಸತಕ್ಕದ್ದೇನಿದೆ? ಏಕೆಂದರೆ ಈ ಹಿಂಸೆ

ಮೊದಲಾದ ಅಧರ್ಮರೂಪವಾದ ಕರ್ಮಗಳು ದೇಹಾದ್ಯನಾತ್ಮದಲ್ಲಿ ಅಹಂಕಾರವನ್ನೂ ಇಂದ್ರಿಯಾದಿಗಳಲ್ಲಿ ಮಮಕಾರವನ್ನೂ ಹೆಚ್ಚಿಸತಕ್ಕವುಗಳಾಗಿರುತ್ತದೆ. ಧರ್ಮವು ಮೇಲೆಹೇಳಿದ ಅಹಂಕಾರ ಮಮಕಾರಗಳನ್ನು ಕಡಮೆ ಮಾಡಿಸತಕ್ಕದ್ದಾಗಿದೆ, ತುಳಿಯತಕ್ಕದ್ದಾಗಿದೆ. ಪರಮಾತ್ಮಜ್ಞಾನವು ಈ ಅಹಂಕಾರಮಮಕಾರಗಳನ್ನು ಬಾಧಿಸತಕ್ಕದ್ದಾಗಿದೆ; ಆದುದರಿಂದ ಕರ್ಮಯೋಗಿಯು ಅಹಂಕಾರಮಮಕಾರಗಳನ್ನು ಹೆಚ್ಚಿಸತಕ್ಕ ಹಿಂಸೆ, ಸುಳ್ಳುಹೇಳುವುದು, ಮುಂತಾದ ಅಧರ್ಮ ರೂಪವಾದ ಕಾರ್ಯಗಳನ್ನು ಮೊದಲು ದೂರವಾಗಿ ತ್ಯಜಿಸಬೇಕು. ಅನಂತರ ಕರ್ಮವನ್ನು ಹೇಗೆ ಮಾಡಬೇಕೆಂಬುದನ್ನು ತಿಳಿದು ಅದರಂತೆ ಮಾಡಬೇಕು. ಒಂದು ದೊಡ್ಡ ಕಲ್ಲನ್ನು ಕೈಯಿಂದ ಎತ್ತಿ ಉರುಳಿಸುದಕ್ಕೆ ಆಗುತ್ತದೆಯೆ? ಇಲ್ಲ, ಅದನ್ನು ಉರುಳಿಸಲು ಏನನ್ನು ಮಾಡುತ್ತಾರೆ? ಅದರ ಕೆಳಕ್ಕೆ ಸನ್ನೆಯಮರಗಳನ್ನು ಹಾಕಿ ಹಾರೆಯಿಂದ ಮೀಟಿ ಉಪಾಯದಿಂದ ಉರುಳಿಸುತ್ತಾರಲ್ಲವೆ? ಹಾಗೆಯೇ ಯಾವ ರೀತಿಯಿಂದ ಕರ್ಮವನ್ನು ಮಾಡಿದರೆ ತತ್ತ್ವಜ್ಞಾನೋತ್ಪತ್ತಿಗೆ ಸಹಕಾರಿಯಾಗುತ್ತದೆಯೋ ಆ ರೀತಿಯಾಗಿ ಮಾಡಬೇಕಲ್ಲವೆ? ಆ ಮಾರ್ಗವನ್ನು ವಿವರಿಸುತ್ತೇನೆ. ಇಲ್ಲಿ ಕರ್ಮವೆಂದರೆ ಶಾಸ್ತ್ರದಲ್ಲಿ ಮಾಡಬೇಕೆಂದು ವಿಧಿಸಿರುವ ಯಜ್ಞ, ದಾನ, ತಪಸ್ಸು-ಮುಂತಾದದ್ದು. ಈ ಕಾಲದಲ್ಲಿ ಇವುಗಳನ್ನು ಮಾಡುವವರು ಕಮ್ಮಿಯಾಗಿರುತ್ತಾರೆ. ಇದಕ್ಕೆ ಬದಲಾಗಿ ಜೀವನಾರ್ಥವಾದ ಮೇಷ್ಟರ ಕೆಲಸ, ಅಧಿಕಾರಿಯ ಕೆಲಸ, ಗುಮಾಸ್ತರ ಕೆಲಸ, ವ್ಯಾಪಾರದ ಕೆಲಸ, ಲಾಯರ ಕೆಲಸ ಮುಂತಾದ ಕೆಲಸಗಳನ್ನು ಮಾಡುವವರೇ ಹೆಚ್ಚಾಗಿರುತ್ತಾರೆ. ಇವರುಗಳಿಗೆಲ್ಲ ಶಾಸ್ತ್ರೋಕ್ತವಾದ ಯಜ್ಞ, ದಾನ, ತಪಸ್ಸು-ಇವುಗಳನ್ನು ಹೇಗೆ ಮಾಡಬೇಕೆಂಬುದನ್ನು ಹೇಳುವದರಿಂದ ಏನು ಪ್ರಯೋಜನ? ಎಂಬ ಶಂಕೆ ಬರಬಹುದು ಆದರೆ ಯಜ್ಞ ದಾನ ತಪಸ್ಸು ಎಂಬ ಕರ್ಮವನ್ನು ಹೇಗೆ ಮಾಡಬೇಕೆಂದು ಹೇಳಿದೆಯೋ ಹಾಗೆಯೇ ಲೌಕಿಕ ಕರ್ಮವನ್ನೂ ಮಾಡಿ ಶಾಸ್ತ್ರೋಕ್ತಕರ್ಮವನ್ನಾಗಿಯೇ ಲಕ್ಷಣೆಯಿಂದ ತಿಳಿಯಬಹು

ವಾಗಿರುವದರಿಂದ ಆ ಶಂಕೆಗೆ ಅವಕಾಶವಿರುವದಿಲ್ಲ ಕರ್ಮವನ್ನು ಹೇಗೆ ಮಾಡಬೇಕು? ಎಂದರೆ -

**೧. ಯಾವ ಕರ್ಮವನ್ನಾಗಲೀ ಶ್ರದ್ಧೆಯಿಂದ ಮಾಡಬೇಕು-** ಶ್ರದ್ಧೆ ಎಂದರೆ ಆಸ್ತಿಕ್ಯಬುದ್ಧಿ, ಈ ಆಸ್ತಿಕ್ಯಬುದ್ಧಿಯಿಂದ ಮಾಡಬೇಕು. "ಜ್ಯೋತಿಷ್ಟೋಮವೆಂಬ ಯಜ್ಞವನ್ನು ಸ್ವರ್ಗಕಾಮನು ಮಾಡಬೇಕು."-ಎಂಬ ವಿಧಿಯನ್ನು ಕೇಳಿದವನು ಜ್ಯೋತಿಷ್ಟೋಮವೆಂಬ ಯಜ್ಞವನ್ನು ಮಾಡಿದರೆ ಸ್ವರ್ಗಬರುತ್ತದೆ-ಎಂಬ ನಂಬಿಕೆಯಿಂದ ಮಾಡಬೇಕು. ಹೀಗೆಯೇ ಲೌಕಿಕ ಕರ್ಮವನ್ನೂ ಶ್ರದ್ಧೆಯಿಂದ ಮಾಡಬೇಕು. ಒಬ್ಬ ಹುಡುಗನು "ಅಮ್ಮ, ಹಸಿವಾಗುತ್ತದೆ." ಎಂದು ಕೇಳಿದಾಗ ತಾಯಿಯು "ಅಡಿಗೆಯಾಗಿದೆ ಊಟಮಾಡಪ್ಪ. ಹಸಿವು ಹೋಗುತ್ತದೆ."ಎಂದು ಹೇಳಿದ್ದನ್ನು ಕೇಳಿ ಆ ಮಾತಿನಲ್ಲಿ ಶ್ರದ್ಧೆಯಿಟ್ಟು ಊಟಮಾಡಿದರೆ ಹಸಿವು ಹೋಗುತ್ತದೆ, ಇದಕ್ಕೆ ಬದಲಾಗಿ "ಊಟಮಾಡಿದರೆ ಹಸಿವು ಹೋಗುತ್ತದೆ?ಎಂಬುದನ್ನು ಹೇಗೆ ನಂಬುವದು?"ಎಂದು ಮುಂತಾಗಿ ಒಣತರ್ಕವನ್ನ ಮಾಡುತ್ತ ಕಾಲಹರಣ ಮಾಡಿದರೆ ಹಸಿವು ಹೋಗುವದಿಲ್ಲ ಎಂದು ಮಾತ್ರವಲ್ಲದೆ ಹೆಚ್ಚು ಹಸಿವು ಆಗುತ್ತದೆ. ಆದುದರಿಂದ ಉಪಾಧ್ಯಾಯವೃತ್ತಿಯಾಗಲಿ, ಲಾಯರವೃತ್ತಿಯಾಗಲಿ, ಅಧಿಕಾರಿಯವೃತ್ತಿಯಾಗಲಿ, ಗುಮಾಸ್ತರ ವೃತ್ತಿಯಾಗಲಿ, ವ್ಯಾಪಾರದವೃತ್ತಿಯಾಗಲೀ ಯಾವ ವೈದಿಕ ಲೌಕಿಕ ವೃತ್ತಿಯೇ ಆಗಲಿ ಅದನ್ನು ಶ್ರದ್ಧೆಯಿಂದ ಮಾಡಬೇಕು. ಶ್ರದ್ಧೆಯಿಂದ ಮಾಡಿದರೆ ಶ್ರದ್ಧಾನುರೂಪವಾದ ಫಲವು ಬರುತ್ತದೆ. ಅದಕ್ಕೆ ಬದಲಾಗಿ ಅಶ್ರದ್ಧೆಯಿಂದ ಯಾವದನ್ನು ಮಾಡಿದರೂ ಅದು ಫಲಕಾರಿಯಾಗುವದಿಲ್ಲ. ಇದನ್ನು ಭಗವಂತನು ಈ ರೀತಿಯಲ್ಲಿ ಹೇಳಿರುತ್ತಾನೆ.

ಅಶ್ರದ್ಧಯಾ ಹುತಂ ದತ್ತಂ ತಪಸ್ತಪ್ತಂ ಕೃತಂ ಚ ಯತ್ ।
ಅಸದಿತ್ಯುಚ್ಯತೇ ಪಾರ್ಥ ನ ಚ ತತ್ಪ್ರೇತ್ಯನೋ ಇಹ ॥

ಅಥ :- ಅಶ್ರದ್ಧೆಯಿಂದ ಮಾಡಿದ, ಹವನ, ಅಶ್ರದ್ಧೆಯಿಂದ ಮಾಡಿದ ದಾನ, ಅಶ್ರದ್ಧೆಯಿಂದ ಮಾಡಿದ ತಪಸ್ಸು ಅದೆಲ್ಲವ ಅಸತ್

ಎಂದೆನಿಸಿಕೊಳ್ಳುತ್ತದೆ, ಅಂದರೆ ಪರಮಾತ್ಮನನ್ನು ಪಡೆಯುವ ಮಾರ್ಗಕ್ಕೆ ಹೊರಟ್ಟಾಗಿರುತ್ತದೆ. ಎಲೈ ಪಾರ್ಥನೆ, ಅದು ಸತ್ತಮೇಲೆ ಬರುವ ಫಲಕ್ಕೂ ಕಾರಣವಾಗುವದಿಲ್ಲ. ಬದುಕಿರುವಾಗ ಈ ಲೋಕದ ಸುಖಕ್ಕೂ ಕಾರಣವಾಗುವದಿಲ್ಲ."

ಇಲ್ಲಿ ಶ್ರದ್ಧೆಯಿಂದ ಮಾಡಬೇಕೆಂಬುದನ್ನು ಕೇಳಿ ಕುರುಡುಶ್ರದ್ಧೆಯಿಂದ ಮಾಡಬಾರದು. ಉದಾಹರಣೆ- ಒಬ್ಬ ಬ್ರಾಹ್ಮಣನ ಮನೆಯಲ್ಲಿ ಕರಾವು ಹೆಚ್ಚಾಗಿದ್ದುದ್ದರಿಂದ ಒಂದು ಬೆಕ್ಕು ಹೆಚ್ಚಾಗಿ ಓಡಾಡುತ್ತಿತ್ತು. ಆತನು ಶ್ರಾದ್ಧವನ್ನು ಮಾಡುವಾಗ ಅದನ್ನು ಒಂದು ಹುರಿಯಿಂದ ಕಟ್ಟಿಹಾಕುತ್ತಿದ್ದನು. (ಶ್ರಾದ್ಧವನ್ನು ಮಾಡುವಾಗ ಬ್ರಾಹ್ಮಣರ ಮಧ್ಯದಲ್ಲಿ ಬೆಕ್ಕು ಹೋಗಬಾರದು- ಎಂಬುದು ಶಾಸ್ತ್ರನಿಯಮ.) ಇದನ್ನು ಇವನ ಮಗನು ನೋಡಿದ್ದನು. ತಂದೆಯು ಮೃತನಾಗಿ ಮಗನು ಶ್ರಾದ್ಧವನ್ನು ಮಾಡುವ ಕಾಲಕ್ಕೆ ಅವನ ಮನೆಯಲ್ಲಿ ಒಂದು ಹಸುವೂ ಇಲ್ಲದೇ ಕರಾವು ಇಲ್ಲದೇ ಹೋದದ್ದರಿಂದ ಒಂದು ಬೆಕ್ಕೂ ಓಡಾಡುತ್ತಿರಲಿಲ್ಲ. ಆಗ ಮಗನು ನಮ್ಮಪ್ಪನು ಶ್ರಾದ್ಧವನ್ನು ಮಾಡುವಾಗ ಬೆಕ್ಕನ್ನು ಕಟ್ಟಿ ಹಾಕುತ್ತಿದ್ದನು. ಆದುದರಿಂದ ನಾನು ಶ್ರಾದ್ಧ ಕಾಲದಲ್ಲಿ ಬೆಕ್ಕನ್ನು ಕಟ್ಟಿಹಾಕಬೇಕೆಂದು ವಿಚಾರವಿಲ್ಲದ ಶ್ರದ್ಧೆಯಿಂದ ನೆರೆಮನೆಯಿಂದ ಬೆಕ್ಕನ್ನು ಶ್ರಮಪಟ್ಟು ಹಿಡಿದು ತಂದು ಕಟ್ಟಿಹಾಕುತ್ತಿದ್ದನು. ಈ ರೀತಿ ಮಾಡಬಾರದು.

## ೨. ನಾನು ಮಾಡುತ್ತೇನೆಂಬ ಅಹಂಕಾರವನ್ನು ಬಿಟ್ಟು ಮಾಡಬೇಕು

"ನಾನು ವಾಜಪೇಯ ಯಜ್ಞವನ್ನು ಮಾಡುತ್ತೇನೆ, ನಾನು ಚೆನ್ನಾಗಿ ಪಾಠ ಹೇಳಿಕೊಡುತ್ತೇನೆ, ನನ್ನ ಹಾಗೆ ಮತ್ತೆ ಯಾರು ಹೇಳಿ ಕೊಡಬಲ್ಲರು? ನನ್ನಹಾಗೆ ಲಾಯರ್‌ಗಿರಿಯನ್ನು ಯಾರು ಮಾಡಬಲ್ಲರು? ವೈದ್ಯರು ಯಾರು ಇದ್ದಾರೆ? -ಎಂದು ಕೇಳಿದರೆ ಮೊದಲು ನನ್ನ ಹೆಸರನ್ನು ಹೇಳಬೇಕು. ಹಾಗೆ ನಾನು ವೈದ್ಯವೃತ್ತಿಯನ್ನು ಮಾಡುತ್ತಿದ್ದೇನೆ, ಅಡಿಗೆಯನ್ನು ಮಾಡಿದರೆ ನಾನು ಮಾಡಬೇಕು, ನಾನು ಮಾಡಿದರೆ ನಳಪಾಕವಾಗುತ್ತದೆ, ಆ ದಿನದ ಉತ್ಸವವು

ಯಶಸ್ವಿಯಾಗಿ ನಡೆಯಲು ಯಾರು ಕಾರಣರು? ನಾನಿಲ್ಲದಿದ್ದರೆ ಹಾಗೆ ನಡೆಯುವದು ಕಾಣುತ್ತಿತ್ತು" ಎಂದು ಮುಂತಾದ ರೀತಿಯಲ್ಲಿ ಅಹಂಭಾವವನ್ನು ಎಬ್ಬಿಸಿಕೊಂಡುಮಾಡಬಾರದು. ಇದಕ್ಕೆ ಕರ್ತೃಸಂಗವೆಂದು ಹೆಸರು. ಈ ಅಹಂಭಾವವು ಹೆಚ್ಚಿದಷ್ಟೂ ಕರ್ಮವು ಕೆಟ್ಟುಹೋಗುತ್ತದೆ. ಬಾಕಿಯವರೆಲ್ಲರೂ ಉದಾಸೀನರಾಗುತ್ತಾರೆ, ಅಥವಾ ದ್ವೇಷಿಗಳೂ ಆಗುತ್ತಾರೆ. ಆಗ ಕೆಲಸವೂ ಹಾಳಾಗಿ ಹೋಗುತ್ತದೆ : ಫಲವೂ ದೊರೆಯುವುದಿಲ್ಲ, ಮತ್ತು ಪರಮಾತ್ಮನನ್ನು ತಿಳಿಯಲು ಅಡ್ಡಿಯಾಗಿರುವುದೇ ಈ ಅಹಂಭಾವವು, ಈ ಭಾವವನ್ನು ಹೆಚ್ಚಿಸಿದಷ್ಟೂ ಪರಮಾತ್ಮನಿಗೆ ದೂರನಾಗುತ್ತಾನೆ. ಪರಮಾತ್ಮನನ್ನು ತಿಳಿಯಲು ಸಾಧ್ಯವಾಗುವದಿಲ್ಲ, ಆದುದರಿಂದ "ನಾನು ಯಾರು ಮಾಡುವದಕ್ಕೆ? ತಿಂದ ಅನ್ನವನ್ನು ಅರಗಿಸಿ ರಕ್ತ, ಮಾಂಸ, ಮುಂತಾದ ರೂಪಕ್ಕೆ ತಿರುಗಿಸಲು ನನ್ನ ಕೈಯಲ್ಲಿ ಸಾಧ್ಯವಾಗುತ್ತದೆಯೆ? ಇಲ್ಲವಲ್ಲ? ನಾನು ಪರಮಾತ್ಮನ ಕೈಯಲ್ಲಿರುವ ಬೊಂಬೆ, ಅವನು ಆಡಿಸಿದರೆ ಆಡುತ್ತೇನೆ. ಇಲ್ಲವಾದರೆ ಸುಮ್ಮನಾಗುತ್ತೇನೆ." ಎಂದು ಮುಂತಾದ ರೀತಿಯಲ್ಲಿ ತಿಳಿದು ಕರ್ತೃಸಂಗವನ್ನು ಬಿಟ್ಟು ಯಾವ ಕರ್ಮವನ್ನಾದರೂ ಮಾಡಬೇಕು.

**೩. ಕರ್ಮಸಂಗ ಅಥವಾ ವಿಷಯಸಂಗ-ಎಂಬುದನ್ನು ಬಿಟ್ಟು ಮಾಡಬೇಕು.**

"ನಾನು ಮಾಡಿರುವ ಯಜ್ಞವನ್ನು ಯಾರು ಮಾಡಿದ್ದಾರೆ? ಈ ದಾನವನ್ನು ಯಾರು ಮಾಡಿದ್ದಾರೆ? ಈ ತಪಸ್ಸನ್ನು ಯಾರು ಮಾಡಿದ್ದಾರೆ? ಈ ಹಡಗಿನ ವ್ಯಾಪಾರವನ್ನು ಯಾರು ಮಾಡಿದ್ದಾರೆ? ಈ ಉಪದೇಶವನ್ನು ಯಾರು ಮಾಡಿದ್ದಾರೆ? ನಾನು ಇಂತಹ ಅಸಾಧ್ಯವಾದ ಕರ್ಮವನ್ನು ಮಾಡಿದ್ದೇನೆ" -ಎಂದು ಮುಂತಾದ ರೀತಿಯ ಕರ್ಮಸಂಗವನ್ನು ಬಿಟ್ಟು ಯಾವ ಕೆಲಸವನ್ನಾದರೂ ಮಾಡಬೇಕು. ಇದನ್ನು ಬಿಟ್ಟಾಗಲೇ ದೊಡ್ಡದೊಡ್ಡ ಕರ್ಮಗಳು ನೆರವೇರಿರುವದು ಕಂಡು ಬರುತ್ತದೆ.

**೪. ಫಲಸಂಗವನ್ನು ಬಿಟ್ಟು ಮಾಡಬೇಕು.**

ಫಲದಲ್ಲಿ ಆಸಕ್ತಿಯಿಲ್ಲದೇ ಕರ್ಮವನ್ನು ಮಾಡುವದು ಹೇಗೆ?

ಎಂಬ ಶಂಕೆಯು ತೋರಬಹುದು. ಇದಕ್ಕೆ ಉಪಷ್ಟಂಭಕವಾಗಿ "ಪ್ರಯೋಜನಮನುದ್ದಿಶ್ಯ ನ ಮಂದೋಪಿ ಪ್ರವರ್ತತೇ." -(ದಡ್ಡನೂ ಕೂಡ ಪ್ರಯೋಜನೋದ್ದೇಶವಿಲ್ಲದೇ ಯಾವ ಕೆಲಸದಲ್ಲಿಯೂ ಪ್ರವರ್ತಿಸುವದಿಲ್ಲ) ಎಂಬ ನ್ಯಾಯವು ಇರುತ್ತದೆ. ಎಂದು ತೋರಬಹುದು; ಆದರೆ ಇಲ್ಲಿಫಲಸಂಗವನ್ನು ಬಿಟ್ಟುಎಂದರೆ ಯಾವ ಫಲದಲ್ಲಿಯೂ ಆಶೆಯಿಲ್ಲದೇ ಎಂದು ಅರ್ಥವಲ್ಲ; ಮತ್ತೇನೆಂದರೆ ಅಲ್ಪವಾದ, ಕ್ಷಣಿಕವಾದ, ಸಾತಿಶಯವಾದ, ಅನಿತ್ಯವಾದ ಧನಕನಕಪುತ್ರಮಿತ್ರಾದಿರೂಪವಾದ ಫಲದ ಆಶೆಯನ್ನು ಬಿಟ್ಟು ಅಮೃತಾಭಯ ಸ್ವರೂಪವನ್ನು ಪಡೆಯುವದಕ್ಕೆ ಸಾಧನವಾದ ಜ್ಞಾನವನ್ನು ಹೊಂದಲು ಯೋಗ್ಯವಾದ ಚಿತ್ತಶುದ್ಧಿ ಎಂಬ ಹೆಚ್ಚಿನ ಫಲದ ದೃಷ್ಟಿಯಿಂದ ಮಾಡಬೇಕೆಂದು ಅರ್ಥ. ಅಲ್ಪಫಲದ ಆಸೆಯನ್ನು ಬಿಟ್ಟು ಮಾಡಿದರೆ ಹೆಚ್ಚಿನ ಫಲವು ಬರುತ್ತದೆ. ಉದಾಹರಣೆಗೆ ಒಬ್ಬ ಸೇವಕನು ಯಜಮಾನನಲ್ಲಿ "ಇಷ್ಟು ಸಂಬಳವನ್ನು ಕೊಟ್ಟರೆ ಕೆಲಸಮಾಡುತ್ತೇನೆ."-ಎಂದು ಕೇಳಿಕೊಂಡರೆ ಅಷ್ಟು ಫಲವನ್ನು ಪಡೆಯುತ್ತಾನೆ; ಆದರೆ ಯಜಮಾನಲ್ಲಿ "ತಮಗೆ ತಿಳಿದಿದ್ದನ್ನು ಕೊಡಿ." -ಎಂದು ಹೇಳಿದರೆ ಧಾರ್ಮಿಕನಾದ, ಮೋಸಗಾರನಲ್ಲದ ಯಜಮಾನನು ಸಂತೋಷದಿಂದ ಅವನಿಗೆ ಬೇಕಾದದ್ದನ್ನೆಲ್ಲವನ್ನೂ ಕೊಡುತ್ತಾನೆ. ಅಲ್ಪಫಲದ ಆಸೆಯಿಂದ ಕರ್ಮವನ್ನು ಮಾಡಿದರೆ ಆ ಫಲವನ್ನು ಅನುಭವಿಸಲು ಮತ್ತೆ ಜನ್ಮವನ್ನು ಎತ್ತುವುದು, ಮತ್ತೆ ಕರ್ಮವನ್ನು ಮಾಡುವದು, ಈ ರೀತಿಯಲ್ಲಿ ಜನನ ಮರಣರೂಪವಾದ ಸಂಸಾರದಲ್ಲಿ ತೊಳಲುತ್ತಲೇ ಇರಬೇಕಾಗುವುದು. ಇದಕ್ಕೆ ಬದಲಾಗಿ ಅಲ್ಪಫಲಾಶೆಯನ್ನು ಬಿಟ್ಟು ಮಾಡಿದರೆ ಪರಮಾತ್ಮಜ್ಞಾನವನ್ನು ಪಡೆಯುವದಕ್ಕೆ ಅವಶ್ಯವಾದ ಚಿತ್ತಶುದ್ಧಿ ಎಂಬ ಹೆಚ್ಚಿನ ಫಲವು ದೊರೆಯುವದು; ಆದುದರಿಂದ ಹೆಚ್ಚಿನ ಫಲವಾದ ಚಿತ್ತಶುದ್ಧಿಯ ದೃಷ್ಟಿಯಿಂದ ಅಲ್ಪವಾದ ಇಹಲೋಕದ ಅಥವಾ ಪರಲೋಕದ ಅನಿತ್ಯ ಫಲದ ಆಶೆಯನ್ನು ಬಿಟ್ಟು ಕರ್ಮವನ್ನು ಮಾಡಬೇಕು, ಭಗವಂತನೂ ಯಜ್ಞಾದಿಗಳಿಗೆ ಪಾವನತ್ವರೂಪವಾದ ಹೆಚ್ಚಿನ ಫಲವುಂಟೆಂದು

ಹೇಳಿರುತ್ತಾನೆ-ಭಗವದ್ಗೀತಾ ೧೮-೫.

ಯಜ್ಞೋ ದಾನಂ ತಪಃ ಕರ್ಮ ನ ತ್ಯಾಜ್ಯಂ ಕಾರ್ಯಮೇವತತ್ ।
ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್ ॥೫॥

ಅರ್ಥ:- ಯಜ್ಞ, ದಾನ, ತಪಸ್ಸು -ಎಂಬ ಕರ್ಮವು ಬಿಡತಕ್ಕದ್ದಲ್ಲ; ಮಾಡಲೇ ಮಾಡತಕ್ಕದ್ದು. ಯಜ್ಞ, ದಾನ, ತಪಸ್ಸುಗಳು ಫಲಾಭಿಸಂಧಿಯಿಲ್ಲದೇ ಮಾಡುವವರಿಗೆ ಚಿತ್ತಶುದ್ಧಿಯನ್ನುಂಟು ಮಾಡತಕ್ಕವುಗಳಾಗಿರುತ್ತವೆ; ಆದುದರಿಂದ ಲೌಕಿಕ ವೈದಿಕರೂಪವಾದ ಯಾವ ಕರ್ಮವನ್ನಾಗಲೀ ಫಲಾಭಿಸಂಧಿಯನ್ನು ಬಿಟ್ಟು ಮಾಡಬೇಕು.

ಇದುವರೆಗೆ ಕರ್ಮವನ್ನು ಹೇಗೆ ಮಾಡಬೇಕೆಂಬುದನ್ನು ವಿವರಿಸಿದ್ದಾಯಿತು. ಇನ್ನು ಈ ರೀತಿಯಲ್ಲಿ ಮಾಡಿದ ಕರ್ಮವನ್ನು ಕರ್ಮಯೋಗವನ್ನಾಗಿ ಮಾಡಿಕೊಳ್ಳುವ ಬಗೆ ಯಾವದೆಂದರೆ ಭಗವಂತನು ಹೇಳುತ್ತಾನೆ.

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ ॥

ಅರ್ಥ:- ಯಾವ ಪರಮಾತ್ಮನಿಂದ ಪ್ರಾಣಿಗಳ ಉತ್ಪತ್ತಿಯು, ಅಥವಾ ವ್ಯಾಪಾರವು ಉಂಟಾಗುವದೋ, ಯಾವ ಪರಮಾತ್ಮನಿಂದ ಈ ಜಗತ್ತೆಲ್ಲವೂ ವ್ಯಾಪ್ತವಾಗಿದೆಯೋ ಆ ಪರಮಾತ್ಮನನ್ನು ಹಿಂದೆ ಹೇಳಿದ ಲೌಕಿಕ ವೈದಿಕ ಕರ್ಮದಿಂದ ಆರಾಧಿಸಿದರೆ ಮನುಷ್ಯನು ಜ್ಞಾನನಿಷ್ಠೆಗೆ ಯೋಗ್ಯತೆಯೆಂಬ ಸಿದ್ಧಿಯನ್ನು ಪಡೆಯುತ್ತಾನೆ. ಯಜ್ಞಾದಿಗಳನ್ನು ಪರಮಾತ್ಮನಿಗೆ ಸಂಬಂಧಿಸಿ ಅವನ ಆರಾಧನೆಯನ್ನಾಗಿ ಮಾಡಿದರೆ ಆ ಕರ್ಮವು ಕರ್ಮಯೋಗವಾಗುತ್ತದೆ. ಹೀಗೆಯೇ ಉಪಾಧ್ಯಾಯನು ಶಿಷ್ಯರಿಗೆ ಮನಸ್ಸಿಗೆ ಹತ್ತುವಂತೆ ಪ್ರೇಮದಿಂದ ಉಪದೇಶಿಸುವಾಗ ಅವರನ್ನು ಪರಮಾತ್ಮ ಸ್ವರೂಪರೆಂದು ಭಾವಿಸಿ ಅವರಿಗೆ ಹೇಳಿಕೊಡುವದನ್ನು ಪರಮಾತ್ಮನ ಆರಾಧನೆ ಎಂದು ತಿಳಿದು ಮಾಡಬೇಕು. ವ್ಯಾಪಾರಿಯು ದ್ರೋಹಮಾಡದೆ ಪರಮೇಶ್ವರನ ಸ್ವರೂಪರಾದ ಜನಗಳಿಗೆ ಪದಾರ್ಥವನ್ನು ನ್ಯಾಯವಾದ ಬೆಲೆಗೆ ಸರಿಯಾದ ಅಳತೆ ತೂಕ ಮೊದಲಾದ

ರೀತಿಯಿಂದ ಒದಗಿಸುವುದೇ ಪರಮೇಶ್ವರನ ಆರಾಧನೆಯೆಂದ ತಿಳಿದು ಮಾಡುವುದೇ ಕರ್ಮಯೋಗವಾಗುತ್ತದೆ. ವೈದ್ಯನು ರೋಗಿಯನ್ನು ಪರಮೇಶ್ವರ ಸ್ವರೂಪನೆಂದು ಭಾವಿಸಿ ಅವನಿಗೆ ತಕ್ಕ ಉಪಚಾರವನ್ನೂ ಔಷಧವನ್ನೂ ಒದಗಿಸುವುದೇ ಅವನ ಕರ್ಮಯೋಗವಾಗುತ್ತದೆ. ಇದನ್ನು ಭಗವಂತನು ಹೀಗೆ ಗೀತೆಯಲ್ಲಿ ೨-೪೭ ರಲ್ಲಿ ಹೇಳಿರುತ್ತಾನೆ.

ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ ।

ಮಾಕರ್ಮ ಫಲಹೇತು ರ್ಭೂರ್ಮಾತೇ ಸಂಗೋಽಸ್ತ್ವಕರ್ಮಣಿ॥

ಅರ್ಥ:- ನಿನಗೆ ಕರ್ಮದಲ್ಲಿಯೇ ಅಧಿಕಾರವು ಫಲದಲ್ಲಿ ಎಂದಿಗೂ ಆಸೆಪಡಬೇಡ. ಕರ್ಮ ಫಲಕ್ಕೆ ಕಾರಣವಾಗದೇ ಇರು. ಅಕರ್ಮದಲ್ಲಿ ನಿನಗೆ ಸಂಗವಾಗದಿರಲಿ.

ಜ್ಞಾನನಿಷ್ಠೆಯನ್ನು ಹೊಂದಲು ಅಧಿಕಾರವಿಲ್ಲದ ಅಂದರೆ ಅರ್ಜುನನಂತೆ, ನಾನು ಕ್ಷತ್ರಿಯ, ಬ್ರಾಹ್ಮಣ, ವಿದ್ವಾನ್, ಐಶ್ವರ್ಯವಂತ -ಮುಂತಾದ ರೀತಿಯಲ್ಲಿ ತನ್ನನ್ನು ತಪ್ಪಾಗಿತಿಳಿದಿರುವ ಅಜ್ಞಾನಿಯು ಮೇಲೆ ಹೇಳಿದ ರೀತಿಯ ಕರ್ಮವನ್ನೇ ಮಾಡಬೇಕು; ಆದರೆ ಅಲ್ಪವಾದ ಇಹಲೋಕದ ಅಥವಾ ಪರಲೋಕದ ಫಲದಲ್ಲಿ ಆಸೆಪಡಬಾರದು. ಆ ಫಲದಲ್ಲಿ ಆಸೆಪಟ್ಟರೆ ಕರ್ಮಫಲವಾದ ಜನ್ಮಕ್ಕೆ ಕಾರಣವಾಗಬೇಕಾಗುತ್ತದೆ. ಫಲವಿಲ್ಲದಿದ್ದರೆ ಕರ್ಮವನ್ನ ಏಕೆ ಮಾಡಬೇಕೆಂದು ತಿಳಿದು ಕರ್ಮವನ್ನು ಮಾಡದೆಬಿಡಬಾರದು; ಏಕೆಂದರೆ ಮಾಡಬೇಕಾದ ಕರ್ಮವನ್ನು ಬಿಟ್ಟರೆ, ಸುಮ್ಮನೆ ಒಂದು ಕ್ಷಣವೂ ಇರಲು ಸಾಧ್ಯವಿಲ್ಲದುದರಿಂದ, ಮಾಡಬಾರದ ಪಾಪ ಕರ್ಮವನ್ನು ಮಾಡುತ್ತಾನೆ. ಆದರ ಫಲವಾದ ದುಃಖಕ್ಕೆ ಭಾಗಿಯಾಗುತ್ತಾನೆ; ಆದುದರಿಂದ ಫಲಾಸೆಯನ್ನು ಬಿಟ್ಟು ಕರ್ತವ್ಯ ಬುದ್ಧಿಯಿಂದ ಮಾಡಬೇಕಾದ ಕರ್ಮವನ್ನು ಮಾಡಲೇಬೇಕು. ಅದನ್ನು ಹೇಗೆ ಮಾಡಬೇಕೆಂಬುದನ್ನೂ ಭಗವಂತನು ಗೀತೆಯಲ್ಲಿ ೫-೧೦ ರಲ್ಲಿ ಹೇಳಿರುತ್ತಾನೆ.

ಬ್ರಹ್ಮಣ್ಯಾಧಾಯ ಕರ್ಮಾಣಿ ಸಙ್ಗಂತ್ಯಕ್ತ್ವಾ ಕರೋತಿಯಃ।

ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಮ್ಭಸಾ ॥ ೫-೧೦

ಅರ್ಥ:- ಯಾವನು ಈಶ್ವರನಲ್ಲಿ ಸಕಲಕರ್ಮಗಳನ್ನೂ ಇಟ್ಟು ಅಂದರೆ ಆಳು ತಾನು ಮಾಡುವ ಕೆಲಸವನ್ನು ಯಜಮಾನನಿಗಾಗಿ ಮಾಡುತ್ತೇನೆಂದು ತಿಳಿದು ಮಾಡುವಂತೆ ಪರಮೇಶ್ವರನಿಗಾಗಿ ಮಾಡುತ್ತೇನೆಂದು ತಿಳಿದು ಸಕಲ ಕರ್ಮಗಳನ್ನೂ ಮಾಡುತ್ತಾನೆಯೋ, ಮತ್ತು ಕರ್ತೃಸಂಗ, ಕರ್ಮ ಅಥವಾ ವಿಷಯಸಂಗ ಮತ್ತು ಫಲಸಂಗವೆಂಬ ಸಂಗತ್ರಯಗಳನ್ನು ಬಿಟ್ಟು ಮಾಡುತ್ತಾನೆಯೋ, ಅವನು ಕಮಲದ ಎಲೆಯು ನೀರಿನಲ್ಲಿದ್ದರೂ ನೀರಿನ ಲೇಪವನ್ನು ಹೊಂದದೇ ಇರುವಂತೆ ಕರ್ಮವನ್ನು ಮಾಡುತ್ತಿದ್ದರೂ ಪಾಪದಿಂದ ಲೇಪವನ್ನು ಹೊಂದುವುದಿಲ್ಲ. ಸಕಲ ಪಾಪಗಳಿಗೂ ಮೂಲಭೂತವಾದದ್ದು ನಾನು ಎಂಬ ಭಾವನೆಯು. ಆ ಭಾವನೆಯನ್ನೇ ಕಿತ್ತು ಒಗೆದು ಅಲ್ಲಿ ಪರಮಾತ್ಮನನ್ನು ಪ್ರತಿಷ್ಠೆಮಾಡಿರುತ್ತಾನಾದುದರಿಂದ ಅವನಿಗೆ ಪಾಪವು ಸಂಭವಿಸುವುದಿಲ್ಲ. ಚಿತ್ತಶುದ್ಧಿಯ ಮೂಲಕವಾಗಿ ತತ್ತ್ವಜ್ಞಾನವನ್ನು ಪಡೆಯುತ್ತಾನೆ.

ಈ ರೀತಿಯಲ್ಲಿ ತಾನು ಮಾಡುವ ಸಕಲವೈದಿಕ ಲೌಕಿಕ ಕರ್ಮಗಳನ್ನೂ ಶ್ರದ್ಧೆಯಿಂದ ಸಂಗತ್ರಯವನ್ನೂ ಬಿಟ್ಟು ಪರಮೇಶ್ವರನಿಗೆ ಸಮರ್ಪಿಸಿ ಪರಮೇಶ್ವರನ ಆರಾಧನೆಯರೂಪವಾದ ಕರ್ಮಯೋಗವನ್ನು ಮಾಡಿ ಚಿತ್ತಶುದ್ಧಿಯನ್ನು ಹೊಂದಿ ಪರಮಾತ್ಮನ ಉಪಾಸನೆಯನ್ನು ಮಾಡಿ ಆತನ ಪರಮಾರ್ಥಸ್ವರೂಪವನ್ನು ಆತ್ಮರೂಪದಿಂದ ತಿಳಿದು ಆನಂದಸ್ವರೂಪನಾಗಿ ಬಾಳಬೇಕು ಎಂಬುದೇ ಶಾಸ್ತ್ರದ ಮತ್ತು ಗುರುಗಳ ಉಪದೇಶವು.

## ೨೯. ಶ್ರವಣ, ಮನನ, ನಿದಿಧ್ಯಾಸನಗಳನ್ನು ಮಾಡಬೇಕು.

ಹಿಂದೆ ವಿವರಿಸಿದ ಯಜ್ಞ, ದಾನ, ತಪಸ್ಸು-ಮುಂತಾದ ವೇದೋಕ್ತಕರ್ಮವನ್ನೂ ಲೌಕಿಕಕರ್ಮಗಳನ್ನೂ ಸಂಗತ್ರಯವನ್ನು ಬಿಟ್ಟು ಶ್ರದ್ಧೆಯಿಂದ ಪರಮಾತ್ಮನ ಆರಾಧನೆ-ಎಂಬ ಭಾವನೆಯಿಂದ ಮಾಡಿದರೆ ಚಿತ್ತಶುದ್ಧಿದ್ವಾರದಿಂದ ಜ್ಞಾನೋತ್ಪತ್ತಿಗೆ ಕಾರಣವಾಗುವದರಿಂದ ಇವನ್ನು

ಬಹಿರಂಗಸಾಧನವೆಂದು ಕರೆಯುತ್ತಾರೆ. ಅಂತಃಕರಣ ನಿಗ್ರಹವೆಂಬ ಶಮ, ಬಹಿಃಕರಣ ನಿಗ್ರಹವೆಂಬ ದಮ ಮುಂತಾದವು ಸಾಕ್ಷಾತ್ತಾಗಿ ಜ್ಞಾನೋತ್ಪತ್ತಿಗೆ ಕಾರಣಗಳಾಗಿರುವದರಿಂದ ಅವನ್ನು ಅಂತರಂಗ ಸಾಧನವನ್ನಾಗಿ ಕರೆಯುತ್ತಾರೆ. ಈ ರೀತಿಯಲ್ಲಿ ವಿವರಿಸಲ್ಪಟ್ಟ ಬಹಿರಂಗ ಸಾಧನವಾದ ಕರ್ಮಯೋಗದಿಂದ ಶುದ್ಧಚಿತ್ತನಾದವನು ಶಮಾದ್ಯಂತ್ತ ರಂಗಸಾಧನಸಂಪನ್ನನಾಗಿ "ನಾನು ಸಾತ್ವಿಕನು, ಸಾಧನ ಸಂಪನ್ನನು"ಎಂದು ತನ್ನನ್ನು ತಾನೇ ಮೆಚ್ಚುವದೆಂಬ ಅಭಿಮಾನವಿಲ್ಲದವನೂ, ಸಾಧನಸಂಪತ್ತು ಇಲ್ಲದಿದ್ದರೂ ಇರುವಂತೆ ತೋರಿಸಿಕೊಳ್ಳುವದೆಂಬ ದಂಭ, ಇದ್ದಾಗ ಇದೆಯೆಂದು ತೋರಿಸಿ ಕೊಳ್ಳುವದೆಂಬ ಅಹಂಕಾರ-ಇವುಗಳಿಂದ ದೂರವಾದವನೂ, ಹಿಂಸೆಯನ್ನು ಮಾಡದೇ ಬಿಟ್ಟಿರುವದು ಮಾತ್ರವಲ್ಲದೇ ಮನಸ್ಸಿನಿಂದ ಕೂಡ ಇತರರಿಗೆ ಹಿಂಸೆಯನ್ನು ಯೋಚಿಸದೇ ಇರುವವನೂ, ಸುಖದುಃಖರೂಪವಾದ ದ್ವಂದ್ವಗಳನ್ನು ಸಹಿಸತಕ್ಕವನೂ, ಋಜುಸ್ವಭಾವದವನೂ, ಇಹಲೋಕದ ಮತ್ತು ಪರಲೋಕದ ಫಲವನ್ನು ಭೋಗಿಸುವ ವಿಷಯದಲ್ಲಿ ವಿರಕ್ತನೂ ಆಗಿ ಭಗವತ್ತತ್ತ್ವವನ್ನು ತಿಳಿಯಲು ಆತುರನಾಗಿ ಪರಮಾತ್ಮತತ್ತ್ವವನ್ನು ಮನಗಂಡ ಆಚಾರ್ಯರನ್ನು ವಿನಯದಿಂದ ಸೇರಿ ಅವರು ಉಪದೇಶಿಸುವ 'ತತ್ತ್ವಮಸಿ.' ಅರ್ಥ:- "ನೀನು ಆ ಜಗತ್ಕಾರಣವಾದ ಸತ್ತು ಆಗಿದ್ದಿ." -ಎಂಬಿವೇ ಮೊದಲಾದ ಶ್ರುತಿವಾಕ್ಯಗಳನ್ನು ಗುರುಮುಖದಿಂದ ಶ್ರವಣಮಾಡಬೇಕು.

ನಾನು ಎಂದರೆ ದೃಶ್ಯವಾದ ಮತ್ತು ಅನೃತವಾದ ದೇಹವು ಎಂದು ತಿಳಿದಿರುವಾಗ"ನೀನು ಜಗತ್ಕಾರಣವಾದ ಸತ್ತು ಆಗಿದ್ದಿ."-ಎಂದು ಗುರುವು ಹೇಳಿದ ಶ್ರುತಿಯ ವಾಕ್ಯವು ಅರ್ಥವಾಗುವದಿಲ್ಲ. ನಾನು ಅಶಕ್ತನು, ಆತನು ಸರ್ವಶಕ್ತನು. ನಾನು ಮೂಢನು, ಆತನು ಸರ್ವಜ್ಞನು. ನಾನು ಹೇಗೆ ಅವನು ಆಗಿದ್ದೇನೆ ? ಎಂದು ಮುಂತಾದ ವಿರೋಧವು ಕಾಣುತ್ತದೆ. ಆಗ ಈ ಸಾಧಕನು ಈ ವಿರೋಧವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಗುರುವು ಹೇಳಿದ ವಾಕ್ಯದಲ್ಲಿರುವ ಪದಗಳ ಅರ್ಥವನ್ನು ಶೋಧನೆಮಾಡಬೇಕು. ನಾನು ನೋಡುವವನು. ದೇಹವು ನೋಡಲ್ಪಡತಕ್ಕದ್ದು. ನೋಡುವವನೂ

ನೋಡಲ್ಪಡತಕ್ಕದ್ದೂ ಒಂದಾಗುವದಿಲ್ಲ; ಆದುದರಿಂದ ದೇಹವು ನಾನಲ್ಲ. ಹೀಗೆಯೇ ಇಂದ್ರಿಯಗಳೂ, ಮನಸ್ಸೂ ವಿಷಯಗಳಾಗಿರುವದರಿಂದ ನಾನಲ್ಲ ನಾನು ವಿಷಯಿಯು. -ಎಂದು ಮುಂತಾದ ರೀತಿಯಿಂದ ಪದಾರ್ಥಶೋಧನೆಯಿಂದ ಗುರುಗಳು ಹೇಳಿದ ವೇದವಾಕ್ಯವನ್ನು ಮನಸ್ಸಿಟ್ಟು ಕೇಳಬೇಕು. ಹೀಗೆ ಮನಸ್ಸಿಟ್ಟು ಕೇಳುವದಕ್ಕೆ ಶ್ರವಣವೆಂದು ಹೆಸರು. ಹೀಗೆ ಪದಾರ್ಥಶೋಧನೆಯ ಮೂಲಕ "ನೀನು ಆ ಜಗತ್ಕಾರಣವಾದ ಸತ್ತು ಆಗಿದ್ದೀಯೆ." ಎಂಬ ವಾಕ್ಯದ ಅರ್ಥವು ಸಂಶಯ ವಿಪರ್ಯಾಸಾದಿಗಳಿಲ್ಲದಂತೆ ಯಾವ ಶುದ್ಧಸಂಸ್ಕಾರವನ್ನು ಹೊಂದಿದವನಿಗೆ "ನಾನು ಬ್ರಹ್ಮವಾಗಿದ್ದೇನೆ". ಎಂಬ ಅನುಭವರೂಪದ ಜ್ಞಾನವು ಉಂಟಾಗುತ್ತದೆಯೋ ಆತನು ಆಗಲೇ ಕೃತಕೃತ್ಯನಾಗುತ್ತಾನೆ. ಆತನು ಮತ್ತೆ ಮನನ ನಿದಿಧ್ಯಾಸನಗಳನ್ನು ಮಾಡಬೇಕಾಗಿಲ್ಲ. ಯಾವಾತನಿಗೆ ಶುದ್ಧ ಸಂಸ್ಕಾರವಿಲ್ಲದೆ ಶ್ರವಣವಾದಮೇಲೆಯೂ "ನಾನು ಹೇಗೆ ಬ್ರಹ್ಮನಾದೇನು?" ಎಂಬ ಸಂಶಯವೂ "ನಾನು ಬ್ರಹ್ಮನಲ್ಲ ಮನುಷ್ಯನು" ಎಂಬ ವಿಪರ್ಯಯಜ್ಞಾನವೂ ಸಮ್ಯಗ್ಜ್ಞಾನದಿಂದ ಬಾಧಿತವಾಗಿರುವದಿಲ್ಲವೋ, ಆತನಿಗೆ ಮನನ ನಿದಿಧ್ಯಾಸನಗಳು ಬೇಕಾಗಿರುತ್ತವೆ. ಮನನವೆಂದರೆ ಯುಕ್ತಿಯಿಂದ ಹೊಂದಿಸಿಕೊಳ್ಳುವದು. ಅದು ಹೇಗೆಂದರೆ -ನಾನು ಜನನಮರಣಗಳುಳ್ಳವನು, ಪರಿಚ್ಛಿನ್ನನು, ಅಶಕ್ತನು, ಅಜ್ಞನು-ಜನನ ಮರಣರಹಿತನಾದ, ಅಪರಿಚ್ಛಿನ್ನನಾದ, ಸರ್ವಶಕ್ತನಾದ, ಸರ್ವಜ್ಞನಾದ ಸದ್ರೂಪನು ಹೇಗೆ ಆದೇನು? ಎಂದು ಸಂಶಯಗೊಂಡರೆ, ನಾನು ಎಂಬ ಪದದ ಅರ್ಥವು ಯಾವದು? ದೇಹವೇ ಅಲ್ಲ. ದೇಹವು ದೃಶ್ಯವು ನಾನು ದ್ರಷ್ಟೃವು. ದೇಹಾದಿಗಳು ಜನನಮರಣಕ್ಕೆ ಒಳಗಾದವುಗಳು, ಪರಿಚ್ಛಿನ್ನವಾದವುಗಳು, ಜಡವಾದವುಗಳು. ಅವುಗಳನ್ನು ನೋಡುವ ನಾನು ಅವುಗಳಿಂದ ಹೊರಚ್ಚಾದವನು, ಅವುಗಳ ಧರ್ಮವು ನನಗೆ ಸಂಬಂಧಿಸುವದಕ್ಕೆ ಕಾರಣವಿಲ್ಲ. ನಾನು ಅದ್ವಿತೀಯನು ಅವುಗಳೊಡನೆ ಬೆರೆತಿದ್ದಾಗಲೇ ಅವು ಇರುವಂತೆ ಕಾಣುತ್ತವೆ. ಅವುಗಳನ್ನು ನೋಡತಕ್ಕ ನನ್ನಿಂದ ಬೇರ್ಪಡಿಸಿದರೆ

ಅವುಗಳು ಇಲ್ಲವೇ ಇಲ್ಲ. ಅವು ಅನೃತಸ್ವಭಾವದವುಗಳು -ಎಂಬೀ ಮೊದಲಾದ ಮನನದಿಂದ "ಹೌದು ನಾನು ಅದ್ವಿತೀಯ ಬ್ರಹ್ಮನೇ ಆಗಿದ್ದೇನೆ". ಎಂಬ ಅನುಭವರೂಪದ ಜ್ಞಾನವು ಬಂದರೆ ಕೂಡಲೇ ಕೃತಕೃತ್ಯನಾಗುತ್ತಾನೆ. ಆಗಲೂ ಇನ್ನೂ ಸಂಶಯ ವಿಪರ್ಯಾಸಾದಿಗಳು ಹೋಗಿದಿದ್ದರೆ ನಿದಿಧ್ಯಾಸವನ್ನು ಮಾಡಬೇಕು. ನಿದಿಧ್ಯಾಸನವೆಂದರೆ ತತ್ತ್ವವನ್ನು ಅನುಭವಕ್ಕೆ ಹೊಂದುವಂತೆ ಲಕ್ಷ್ಯವಿಟ್ಟು ನೋಡುವದು. ಉದಾಹರಣೆಗೆ-ಒಬ್ಬ ರತ್ನ ಪರೀಕ್ಷಕನ ಕೈಗೆ ಒಂದು ರತ್ನವನ್ನು ಕೊಟ್ಟು "ಇದು ಎಂತಹ ರತ್ನವು?" ಎಂದು ಕೇಳಿದರೆ ಅವನು ರತ್ನಗಳನ್ನು ಪರೀಕ್ಷಿಸುವ ವಿಧಾನವನ್ನು ತಿಳಿದವನಾದುದರಿಂದ ಹೀಗೆ ತಿರುಗಿಸಿ, ಹಾಗೆ ತಿರುಗಿಸಿ, ಇತ್ತಕಡೆಯಲ್ಲಿ ನೋಡಿ ಅತ್ತಕಡೆಯಲ್ಲಿ ನೋಡಿ ಕೊನೆಯಲ್ಲಿ ಅದರಲ್ಲಿಯೇ ಲಕ್ಷ್ಯವಿಟ್ಟು ನೋಡಿ "ಇದು ಇಂತಹ ರತ್ನವು". -ಎಂದು ಹೇಳುತ್ತಾನಷ್ಟೆ; ಹಾಗೆ ಲಕ್ಷ್ಯವಿಟ್ಟು ತತ್ತ್ವವನ್ನು ನೋಡುವದು ನಿದಿಧ್ಯಾಸನವು. ಇದೇ ರೀತಿಯಲ್ಲಿ ದೇಹಾದಿಗಳೆಲ್ಲವೂ ಕ್ಷೇತ್ರವು-ಅಧ್ಯಾತ್ಮಿಕವಾದ, ಆಧಿಭೌತಿಕವಾದ, ಆಧಿದೈವಿಕವಾದ ಈ ಬ್ರಹ್ಮಾಂಡವೆಂಬುದೇ ಕ್ಷೇತ್ರವು, ನಾನು ಇದನ್ನು ನೋಡುವವನು. ಎಂದು ತನ್ನನ್ನು ಕ್ಷೇತ್ರದಿಂದ ವಿಂಗಡಿಸಿಕೊಂಡು ಆತ್ಮನಲ್ಲಿಯೇ ಲಕ್ಷ್ಯವಿಟ್ಟು ನೋಡಿದರೆ, "ಕ್ಷೇತ್ರವೆಂಬುದು ಇಲ್ಲವೇ ಇಲ್ಲ, ಆತ್ಮನೊಬ್ಬನೇ ಅಖಂಡಾದ್ವೈತ ಸ್ವರೂಪನು. ನಾನು ಆ ಬ್ರಹ್ಮವು ಆಗಿದ್ದೇನೆ"-ಎಂಬ ಅನುಭವರೂಪವಾದ ಜ್ಞಾನವು ಸಂಶಯ ವಿಪರ್ಯಾಸಾದಿಗಳಿಲ್ಲದಂತೆ ಇಲ್ಲಿಯೇ ಬರುತ್ತದೆ. ಉದಾಹರಣೆಗೆ-ಒಂದು ಊರಿನಲ್ಲಿ ಒಬ್ಬ ಶ್ರೀಮಂತನಿದ್ದನು. ಅವನಿಗೆ ಒಬ್ಬನೇ ಮಗನಿದ್ದನು. ಆ ಮಗನು ಚಿಕ್ಕಂದಿನಲ್ಲಿಯೇ ನದಿಯಲ್ಲಿ ಬಿದ್ದು ಪ್ರವಾಹದಿಂದ ಕೊಚ್ಚಿಕೊಂಡು ಹೋಗುವಾಗ ಹಡಗಿನಲ್ಲಿ ಹೋಗುತ್ತಿದ್ದ ಒಬ್ಬ ವ್ಯಾಪಾರಿಯ ಕೈಗೆ ಸಿಕ್ಕಿ ಅವನಿಂದ ಪೋಷಿತನಾಗಿ ಅವನ ಮಗನೆಂದೇ ಬೆಳೆಯುತ್ತಿದ್ದನು. ಅಕಸ್ಮಾತ್ತಾಗಿ ಪಕ್ಕದ ಮನೆಯವನು ಆ ಹಡಗಿನ ವ್ಯಾಪಾರಿಯ ಮನೆಗೆ ಹೋದಾಗ ಈ ಹುಡುಗನನ್ನು ಕಂಡು ಇವನು ತನ್ನ

ನೆರಮನೆಯ ಶ್ರೀಮಂತನ ಮಗನು -ಎಂದು ಗುರ್ತಿಸಿ ಆ ಶ್ರೀಮಂತನಿಗೆ ತಿಳಿಸಿದನು. ಆ ಶ್ರೀಮಂತನು ಇದನ್ನು ಕೇಳಿದ ಕೂಡಲೇ ತನ್ನ ಕೋಟಿ ರುಪಾಯಿಗಳ ವ್ಯವಹಾರವನ್ನೂ ಲಕ್ಷಿಸದೇ ಕೂಡಲೇ ಅಲ್ಲಿಗೆ ಹೋಗಿ ಆ ಹುಡುಗನ್ನು ನೋಡಿ ಅವನ ಲಕ್ಷಣಗಳನ್ನು ಚೆನ್ನಾಗಿ ಗಮನವಿಟ್ಟು ಪರೀಕ್ಷಿಸಿ ನೋಡಿ 'ಈತನು ತನ್ನ ಮಗನು'ಎಂಬುದನ್ನು ನಿಶ್ಚಯಿಸಿಕೊಂಡು ತನ್ನ ಮಗನಿಗೂ ಆ ವ್ಯಾಪಾರಿಗೂ ಇದನ್ನು ತಿಳಿಸಿದನು. ಆ ವ್ಯಾಪಾರಿಯೂ ಮತ್ತೂ ಆ ಹುಡುಗನೂ ಸಹ ತಂದೆಯು ಹೇಳಿದ ಮಾತುಗಳನ್ನೆಲ್ಲ ಕೇಳಿದರು. ಆ ಹುಡುಗನು ಮೊದಲು "ನಾನು ಹೇಗೆ ಆ ಶ್ರೀಮಂತನ ಮಗನಾದೇನು?"ಎಂದು ಸಂಶಯಪಟ್ಟನು. ನಾನು ಶ್ರೀಮಂತನ ಮಗನಲ್ಲ. ಈ ವ್ಯಾಪಾರಿಯ ಮಗನು- ಎಂದು ತಪ್ಪು ತಿಳಿದಿದ್ದನು. ಅನಂತರ ತಂದೆಯು ಹೇಳಿದ ವಿವರಗಳನ್ನು ಚೆನ್ನಾಗಿ ತಿಳಿದು ಮನನಮಾಡಿ ಲಕ್ಷ್ಯವಿಟ್ಟು ನೋಡಿ "ಹೌದು ನಿಜವಾಗಿಯೂ ನಾನು ಶ್ರೀಮಂತನ ಮಗನು". ಎಂದು ನಿಶ್ಚಯಜ್ಞಾನವನ್ನು ಹೊಂದಿದನು. ಅನಂತರ ಆತನ ಸಾಕುತಂದೆಯ ಅನುಮತಿಯನ್ನು ಪಡೆದು ತನ್ನ ಮನೆಗೆ ಹೋಗಿ ಜ್ಞಾನದಿಂದ ಶ್ರೀಮಂತಪುತ್ರನಾದನು. ಇದೇ ರೀತಿಯಲ್ಲಿ ಸರ್ವರೂ ತಮ್ಮ ಸ್ವರೂಪದ ವಿಷಯದಲ್ಲಿ ಗುರುಗಳು ತಿಳಿಸುವ ಶ್ರುತಿ ವಾಕ್ಯವನ್ನು ಶ್ರವಣಮಾಡಿ, ಅದರ ಅರ್ಥವನ್ನು ಯುಕ್ತಿಗೂ ಹೊಂದಿಕೊಂಡು ಅದರಲ್ಲಿಯೇ ಲಕ್ಷ್ಯವಿಟ್ಟು ನೋಡಿ ಶ್ರುತಿಯು ಹೇಳುವಂತೆಯೂ ಗುರುಗಳೂ ತಿಳಿಸುವಂತೆಯೂ ಪರಮಾರ್ಥವಾಗಿ 'ನಾವೇ ಬ್ರಹ್ಮಸ್ವರೂಪರಾಗಿದ್ದೇವೆ'. ಎಂಬ ಅನುಭವರೂಪವಾದ ಜ್ಞಾನವನ್ನು ಹೊಂದಿ ಸಚ್ಚಿದಾನನ್ದಪರ ಬ್ರಹ್ಮಸ್ವರೂಪರಾಗಿ ಬಾಳಬೇಕು.

ಸರ್ವರಿಗೂ ಮಂಗಳವಾಗಲಿ

ಸರ್ವೇಽತ್ರ ಸುಖಿನಸ್ಸನ್ತು ಸರ್ವೇ ಸನ್ತು ನಿರಾಮಯಾಃ।
ಸರ್ವೇ ಭದ್ರಾಣಿ ಪಶ್ಯನ್ತು ಮಾಕಶ್ಚಿದ್ದುಃಖಭಾಗ್ಭವೇತ್ ॥

ಈ ಲೋಕದಲ್ಲಿ ಸರ್ವರೂ ಸುಖಿಗಳಾಗಲಿ, ಸರ್ವರೂ ಆರೋಗ್ಯವಂತರಾಗಲಿ ಸರ್ವರೂ ಮಂಗಳಗಳನ್ನು ಕಾಣಲಿ. ಯಾವ ಒಬ್ಬನೂ

ದುಃಖಿಭಾಗಿಯಾಗಬಾರದು.

ಶಿವಾನನ್ದೋಯೋಗೀ ಪ್ರಣತಪರಮಾನನ್ದಚರಣೋ
ನಿಜಾನನ್ದೇಽನನ್ತೇ ನಿರವಧಿಕಭೂಮಾತ್ಮನಿ ಸದಾ ।
ವಿಹಾರಂಕುರ್ವನ್ಯೋ ಪ್ರಭವತಿ ಹಿ ಸಂತಾಪಹರಣೇ
ಜನನಾಂ ಭಕ್ತಾನಾಂ ವಿತರತು ಶಿವಾನನ್ದಮತುಲಮ್ ॥

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯರಾದ ಶ್ರೀ ಪರಮಾನಂದಸ್ವಾಮಿಗಳ ಚರಣ ಕಮಲವನ್ನು ನಮಸ್ಕರಿಸಿದ, ಯೋಗಿವರ್ಯರಾದ ಯಾವ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯರಾದ ಶಿವಾನಂದ ಸ್ವಾಮಿಗಳು ಅನನ್ತವಾದ, ಅಪರಿಚ್ಛಿನ್ನವಾದ, ಬ್ರಹ್ಮಸ್ವರೂಪವಾದ ತಮ್ಮಸ್ವರೂಪಾನನ್ದದಲ್ಲಿ ಯಾವಾಗಲೂ ವಿಹರಿಸುತ್ತಲೇ ಜನರ ಸಂತಾಪಗಳನ್ನು ನಾಶಮಾಡುವದರಲ್ಲಿ ಶಕ್ತರಾಗಿದ್ದಾರೆಯೋ ಆ ಶ್ರೀಗಳವರು ಭಕ್ತಜನರಿಗೆ ನಿರುಪಮವಾದ, ಮಂಗಳಕರವಾದ ಆನನ್ದವನ್ನು ಅನುಗ್ರಹಿಸಲಿ.

ಶಿವಂ ಭವತು.

ಮಂಗಳವಾಗಲಿ.